ಸೋಮವಾರ, ಏಪ್ರಿಲ್ 7, 2025 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net | prajavani | prajavani | prajavani

ಅರಣ್ಯ ಹಕ್ಕು ಕಾಯ್ದೆ

ಹಕ್ಕುಪತ್ರ ನಿರಾಕರಣೆಯೇ ಹೆಚ್ಚು

51.03 ಲಕ್ಷ ದೇಶದಲ್ಲಿ ಅರಣ್ಯ ಕಾಯ್ದೆ ಅಡಿ ಸಲ್ಲಿಸಲಾದ ಅರ್ಜಿಗಳ ಸಂಖ್ಯೆ

24.98 ಲಕ್ಷ ಹಕ್ಕುಪತ್ರ ನೀಡಿದ ಸಂಖ್ಯೆ

ಕರ್ನಾಟಕದಲ್ಲಿ ಸಲ್ಲಿಕೆಯಾದ ಅರ್ಜಿಗಳ ಪೈಕಿ **5.54%**ರಷ್ಟು ಮಾತ್ರವೇ ಹಕ್ಕುಪತ್ರ ವಿತರಿಸಲಾಗಿದೆ

(2024–25ನೇ ಆರ್ಥಿಕ ವರ್ಷ 2025ರ ಜನವರಿ 31ರವರೆಗಿನ ಮಾಹಿತಿ)

ಆಧಾರ: ಪಿಟಿಐ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಫಲಿತಾಂಶ ನೀಡುವ ನಾಯಕತ್ವ, ಸ್ಫೂರ್ತಿ ನೀಡುವ ಸಾಧನೆ

ಶ್ರೀ ಎಂ.ಬಿ. ಪಾಟೀಲ, ಮಾನ್ಯ ಬೃಹತ್ & ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಮತ್ತು **ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ**, ಮಾನ್ಯ ಶಾಸಕರು & ಅಧ್ಯಕ್ಷರು-ಕೆಎಸ್‌ಡಿಎಲ್, ಇವರು ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ** ಅವರಿಗೆ ಮೈಸೂರ್ ಸ್ಯಾಂಡಲ್ ಉತ್ಪನ್ನಗಳನ್ನು ನೀಡುತ್ತಿರುವುದು.

ಅದ್ಭುತ ಫಲಿತಾಂಶಗಳೊಂದಿಗೆ, 2024-25ರಲ್ಲಿ ಕೆಎಸ್‌ಡಿಎಲ್‌ನಿಂದ ಮತ್ತೊಮ್ಮೆ ಗಮನಾರ್ಹ ಸಾಧನೆ

ಕರ್ನಾಟಕದ ಐತಿಹಾಸಿಕ ಮೈಸೂರ್ ಸ್ಯಾಂಡಲ್ ಸೋಪ್ ತಯಾರಿಸುವ **ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ (ಕೆಎಸ್‌ಡಿಎಲ್)** ಮೊದಲಿನಿಂದಲೂ ಅತ್ಯುತ್ತಮ ಗುಣಮಟ್ಟ ಹಾಗೂ ಶ್ರೀಮಂತ ಪರಂಪರೆಗಾಗಿ ಗುರುತಿಸಿಕೊಂಡಿದೆ. ಕಳೆದ ಎರಡು ವರ್ಷಗಳಲ್ಲಿ ಇನ್ನೂ ಕೆಲವು ಸಾಧನೆಗಳ ಗರಿಗಳನ್ನು ಮುಡಿಗೇರಿಸಿಕೊಂಡಿದೆ: ಕಾರ್ಯಪ್ರದರ್ಶನ, ದಾಖಲೆಯ ಲಾಭಗಳು, ಉತ್ಪಾದನೆ ಹೆಚ್ಚಳ, ಬಲಿಷ್ಠ ಮಾರುಕಟ್ಟೆ ಅಸ್ತಿತ್ವ ಇವೆಲ್ಲವೂ ಚುರುಕು ದೃಷ್ಟಿ, ಉತ್ತಮ ಅನುಷ್ಠಾನ ಹಾಗೂ ಅಭಿವೃದ್ಧಿ ಹೊಂದುವ ಇಚ್ಛಾಶಕ್ತಿಯ ಫಲಿತಾಂಶವಾಗಿದೆ.

ವಾರ್ಷಿಕ ವಹಿವಾಟು

2022–23	₹1,375 ಕೋಟಿ
2023–24	₹1,571 ಕೋಟಿ
2024–25	₹1,788 ಕೋಟಿ



ನಿವ್ವಳ ಲಾಭ

ಈ ಮಹತ್ತರ ಬೆಳವಣಿಗೆಗೆ ಮುಖ್ಯ ಕಾರಣಗಳು

ಉತ್ಪಾದನಾ ಕ್ಷಮತೆ
ನಿರಂತರವಾಗಿ **110%** ಸಾಧನೆ

ರಫ್ತು ಹೆಚ್ಚಳ
25 ರಾಷ್ಟ್ರಗಳಲ್ಲಿ ಮಾರುಕಟ್ಟೆ, **2026**ರ ವೇಳೆಗೆ **80** ರಾಷ್ಟ್ರಗಳಿಗೆ ವ್ಯಾಪಿಸುವ ಗುರಿ

ಕಳೆದ 5 ವರ್ಷಗಳಲ್ಲಿ **29% ಸಿಎಜಿಆರ್** ಸಾಧಿಸಿದೆ ಹಾಗೂ ಸಂಸ್ಥೆಯ ಇತಿಹಾಸದಲ್ಲಿಯೇ **ಅತೀ ಹೆಚ್ಚಿನ ಲಾಭ**ಗಳಿಸಿದೆ

ಮೈಸೂರು ಸ್ಯಾಂಡಲ್ ವೇವ್ ಸರಣಿ ಬಿಡುಗಡೆ: ಪ್ರೀಮಿಯಂ ಸಾಬೂನುಗಳು, ಪೂಜಾ ಸಾಮಗ್ರಿ, ಅಗರಬತ್ತಿ, ಸಾಂಬ್ರಾಣಿ, ದೀಪದ ಎಣ್ಣೆ, ಪ್ಯಾಕೇಜ್ಡ್ ನೀರು

ಪ್ರಮುಖ ಅಂಶಗಳು

- **2 ವರ್ಷಗಳಲ್ಲಿ ₹412 ಕೋಟಿ ವಹಿವಾಟು ಹೆಚ್ಚಳ**
- **ನಿವ್ವಳ ಲಾಭ ದ್ವಿಗುಣ**
- **ಡಿವಿಡೆಂಡ್ ದ್ವಿಗುಣ**
- **ದೈನಂದಿನ ಉತ್ಪಾದನೆ: 1.8 ದಶಲಕ್ಷ ಸಾಬೂನು**
- ಒಟ್ಟು ಉತ್ಪಾದನೆಯಲ್ಲಿ **ಸೋಪುಗಳ ಪಾಲು 70%**
- **ಹೆಚ್ಚು ಶ್ರೀಗಂಧವನ್ನು ಬೆಳೆಸಿ:** 713+ ರೈತರೊಂದಿಗೆ 3,813 ಎಕರೆಗಳಲ್ಲಿ ಶ್ರೀಗಂಧ ಬೆಳೆಸಲು ಪಾಲುದಾರಿಕೆ
- ವಾರ್ಷಿಕ ಆನ್‌ಲೈನ್ ಮಾರಾಟವನ್ನು **₹100 ಕೋಟಿ**ಗೆ ಹೆಚ್ಚಿಸಲು **ಇ-ಕಾಮರ್ಸ್** ವೇದಿಕೆಗಳೊಂದಿಗೆ ಪಾಲುದಾರಿಕೆ
- ಪ್ರಚಾರ ಮತ್ತು ಮಾರಾಟ ಹೆಚ್ಚಿಸಲು ರಾಜ್ಯಾದ್ಯಂತ **'ಮೈಸೂರ್ ಸ್ಯಾಂಡಲ್ ಸೋಪ್ ಮೇಳ'** ಆಯೋಜನೆ

ಹೊಸ ಉತ್ಪನ್ನಗಳು

- 7 ಹ್ಯಾಂಡ್ ಸ್ಯಾನಿಟೈಜರ್‌ಗಳು
- 5 ಹ್ಯಾಂಡ್‌ವಾಶ್ ಉತ್ಪನ್ನಗಳು
- 3 ಶವರ್ ಜೆಲ್‌ಗಳು
- 10 ಹೊಸ ಸಾಬೂನು ಮಾದರಿಗಳು
- ಆಕ್ವಾ ಮಿನರಲ್ ವಾಟರ್

ವಿಷನ್ 2030

- **2030ರ** ವೇಳೆಗೆ **ರೂ.5,000 ಕೋಟಿ** ವಹಿವಾಟು ಗುರಿ
- **ವಿಜಯಪುರದಲ್ಲಿ** ಹೊಸ ಉತ್ಪಾದನಾ ಘಟಕ
- **ರಫ್ತು ಹೆಚ್ಚಿಸುವುದು. ಈಶಾನ್ಯ ಭಾರತ, ಪಂಜಾಬ್, ರಾಜಸ್ತಾನ, ಜಮ್ಮು-ಕಾಶ್ಮೀರ** ರಾಜ್ಯಗಳಿಗೆ ಮಾರುಕಟ್ಟೆ ವಿಸ್ತರಣೆ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು. -ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸಂಸ್ಥೆಯ ಈ ಅದ್ಭುತ ಸಾಧನೆಗೆ ಕಾರಣರಾದ ಕಾರ್ಮಿಕರು, ಸಿಬ್ಬಂದಿ ವರ್ಗ, ನೌಕರರ ಸಂಘ, ಅಧಿಕಾರಿ ವೃಂದ, ಪ್ರಧಾನ ವ್ಯವಸ್ಥಾಪಕರು-ಆಡಳಿತ, ಪ್ರಧಾನ ವ್ಯವಸ್ಥಾಪಕರು-ಹಣಕಾಸು, ಎಲ್ಲರಿಗೂ ಅವರ ಅಮೂಲ್ಯ ಕೊಡುಗೆಗಳಿಗೆ ಧನ್ಯವಾದಗಳು.

ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

ಡಾ. ಪ್ರಶಾಂತ್ ಪಿಕೆಎಂ, ಐಎಫ್‌ಎಸ್, ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

ದರ ನಿಗದಿಪಡಿಸಿ ಆದೇಶ ಹೊರಡಿಸಿದ ಬಿಬಿಎಂಪಿ • ಏಪ್ರಿಲ್ 1ರಿಂದಲೇ ಪೂರ್ವಾನ್ವಯ

ವಾಣಿಜ್ಯ ಕಟ್ಟಡ, ಖಾಲಿ ನಿವೇಶನಕ್ಕೂ ಶುಲ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ, ವಸತಿಯೇತರ ಮತ್ತು ವಾಣಿಜ್ಯ ಕಟ್ಟಡಗಳಿಂದ ಕಸ ವಿಲೇವಾರಿಗೆ ಬಳಕೆದಾರರ ಶುಲ್ಕದ ದರವನ್ನು ಅಂತಿಮಗೊಳಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಶನಿವಾರ ಆದೇಶ ಹೊರಡಿಸಿದೆ. ಖಾಲಿ ನಿವೇಶನಗಳಿಗೂ ಘನ ತ್ಯಾಜ್ಯ ವಿಲೇವಾರಿ ಶುಲ್ಕ ವಿಧಿಸಲಾಗಿದೆ.

ಏಪ್ರಿಲ್ 1ರಿಂದ ಅನ್ವಯವಾಗುವಂತೆ ಬಳಕೆದಾರರ ಶುಲ್ಕ ಅನ್ವಯವಾಗಲಿದೆ. 46 ಲಕ್ಷ ಆಸ್ತಿಗಳ ಮಾಲೀಕರು ಘನ ತ್ಯಾಜ್ಯ ವಿಲೇವಾರಿ ಬಳಕೆದಾರರ ಶುಲ್ಕ ಪಾವತಿಸಬೇಕಾಗುತ್ತದೆ. ಈ ಮೂಲದಿಂದ ₹ 600 ಕೋಟಿಯಿಂದ ₹750 ಕೋಟಿಯಷ್ಟು ವರಮಾನ ಸಂಗ್ರಹಿಸುವ ಗುರಿಯನ್ನು ಬಿಬಿಎಂಪಿ ಹೊಂದಿದೆ.

ಆಸ್ತಿ ತೆರಿಗೆಯ ಭಾಗವಾಗಿಯೇ ಘನ ತ್ಯಾಜ್ಯ ವಿಲೇವಾರಿ ಬಳಕೆದಾರರ ಶುಲ್ಕವನ್ನೂ ಸಂಗ್ರಹಿಸಲಾಗುತ್ತದೆ. ಇದರಿಂದಾಗಿ ಆಸ್ತಿ ತೆರಿಗೆಯ ಪ್ರಮಾಣದಲ್ಲಿ ಶೇಕಡ 30ರಿಂದ ಶೇ 35ರಷ್ಟು ಹೆಚ್ಚಳವಾಗಬಹುದು ಎಂದು ಅಂದಾಜಿಸಲಾಗಿದೆ.

ನಗರದಲ್ಲಿನ ಆಸ್ತಿಗಳ ಮಾಲೀಕರಿಗೆ ಘನ ತ್ಯಾಜ್ಯ ವಿಲೇವಾರಿಗಾಗಿ ಬಳಕೆದಾರರ ಶುಲ್ಕ ವಿಧಿಸುವ ಪ್ರಸ್ತಾವ ದೀರ್ಘ ಕಾಲದಿಂದ ಇತ್ತು. ನಗರಾಭಿವೃದ್ಧಿ ಇಲಾಖೆಯು ಈ ಪ್ರಸ್ತಾವಕ್ಕೆ ಇದೇ ಮಾರ್ಚ್ 4ರಂದು ಒಪ್ಪಿಗೆ ನೀಡಿತ್ತು. ಆ ಬಳಿಕ ವಸತಿ, ವಸತಿಯೇತರ ಕಟ್ಟಡಗಳು, ಹೋಟೆಲ್, ಲಾಡ್ಜ್‌ಗಳು, ತಾರಾ ಹೋಟೆಲ್‌ಗಳಿಗೆ ಬಳಕೆದಾರರ ಶುಲ್ಕ ನಿಗದಿ ಕುರಿತು ಚರ್ಚೆ ನಡೆಸಲಾಗಿತ್ತು. ದರ ಪಟ್ಟಿಯನ್ನು ಅನುಮೋದಿಸಿ ಬಿಬಿಎಂಪಿ ಆಡಳಿತಗಾರ ಎಸ್.ಆರ್. ಉಮಾಶಂಕರ ಅವರು ಏಪ್ರಿಲ್ 4ರಂದು ಆದೇಶ ಹೊರಡಿಸಿದ್ದಾರೆ.

ಈ ಹಿಂದೆ ವಸತಿ ಕಟ್ಟಡಗಳಿಗೆ ಮಾತ್ರ ಶುಲ್ಕದ ದರವನ್ನು ನಿಗದಿಪಡಿಸಲಾಗಿತ್ತು. ಆಗ 600 ಚದರ ಅಡಿ ವಿಸ್ತೀರ್ಣದ ಕಟ್ಟಡಕ್ಕೆ ತಿಂಗಳಿಗೆ ₹ 20 ಮತ್ತು 4,000 ಚದರ ಅಡಿಗಿಂತ ಹೆಚ್ಚು ವಿಸ್ತೀರ್ಣದ ಕಟ್ಟಡಕ್ಕೆ ತಿಂಗಳಿಗೆ ₹ 400 ನಿಗದಿಪಡಿಸಲಾಗಿತ್ತು. ಅದನ್ನು ₹10 ಮತ್ತು ₹400ಕ್ಕೆ ಪರಿಷ್ಕರಿಸಲಾಗಿದೆ.

1,000 ಚದರ ಅಡಿ ವಿಸ್ತೀರ್ಣದ ವಸತಿಯೇತರ ಬಳಕೆಯ ಕಟ್ಟಡದ ಮಾಲೀಕರು ತಿಂಗಳಿಗೆ ₹2,000 ಪಾವತಿಸಬೇಕಾಗುತ್ತದೆ. ಇಂತಹ ಕಟ್ಟಡದ ವಿಸ್ತೀರ್ಣ 5 ಲಕ್ಷ ಚದರ ಅಡಿಗಳಿಗಿಂತ ಹೆಚ್ಚಿದ್ದರೆ ತಿಂಗಳ ಶುಲ್ಕ ₹35 ಲಕ್ಷ ಇರಲಿದೆ.

1,000 ಚದರ ಅಡಿ ವಿಸ್ತೀರ್ಣದ ಹೋಟೆಲ್ ಮತ್ತು ಲಾಡ್ಜ್‌ಗಳಿಗೆ ವಾರ್ಷಿಕ ₹4,000 ಶುಲ್ಕ ನಿಗದಿಪಡಿಸಲಾಗಿದೆ. ಈ ವರ್ಗದ ಕಟ್ಟಡಗಳ ವಿಸ್ತೀರ್ಣವು 5 ಲಕ್ಷ ಚದರ ಅಡಿಗಿಂತ ಹೆಚ್ಚಾಗಿದ್ದಲ್ಲಿ ವಾರ್ಷಿಕ ₹70 ಲಕ್ಷ ಶುಲ್ಕ ಪಾವತಿಸಬೇಕಾಗುತ್ತದೆ.

10,000 ಚದರ ಅಡಿ ವಿಸ್ತೀರ್ಣದ ತಾರಾ ಹೋಟೆಲ್ ಉಪಯೋಗದ ಸ್ವತ್ತುಗಳಿಗೆ ವಾರ್ಷಿಕ ₹95,000 ಶುಲ್ಕ ನಿಗದಿಪಡಿಸಲಾಗಿದೆ. ಇಂತಹ ಕಟ್ಟಡಗಳ ವಿಸ್ತೀರ್ಣವು 50,000 ಚದರ ಅಡಿಗಳಿಗೂ ಹೆಚ್ಚಿದ್ದರೆ ವಾರ್ಷಿಕ ₹87.50 ಲಕ್ಷ ಬಳಕೆದಾರರ ಶುಲ್ಕ ಪಾವತಿಸಬೇಕು.

ವಸತಿ ಉಪಯೋಗದ ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ ಸೇವಾ ಶುಲ್ಕ

ಕಟ್ಟಡದ ವಿಸ್ತೀರ್ಣ (ಚದರ ಅಡಿಗಳಲ್ಲಿ)	ಸೇವಾ ಶುಲ್ಕ (ಪ್ರತಿ ತಿಂಗಳಿಗೆ)
600 ವರೆಗೆ	₹10
601-1000ವರೆಗೆ	₹50
1,001-2,000ವರೆಗೆ	₹100
2,001-3,000ವರೆಗೆ	₹150
3,001-4,000ವರೆಗೆ	₹200
4,000ಕ್ಕೂ ಮೇಲ್ಪಟ್ಟು	₹400

ವಸತಿಯೇತರ ಉಪಯೋಗದ ವರ್ಗ – VIII ತಾರಾ ಹೋಟೆಲ್ ಉಪಯೋಗದ ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಸೇವಾ ಶುಲ್ಕ

ಕಟ್ಟಡದ ವಿಸ್ತೀರ್ಣ (ಚದರ ಅಡಿಗಳಲ್ಲಿ)	ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಸೇವಾ ಶುಲ್ಕ (ಪ್ರತಿ ವರ್ಷಕ್ಕೆ)
10000ವರೆಗೆ	₹95,000
10,001-20,000ವರೆಗೆ	₹1,75,000
20,001-50,000ವರೆಗೆ	₹3,75,000
50,001-1,00,000ವರೆಗೆ	₹6,87,500
1,00,001-2,00,000ವರೆಗೆ	₹12,50,000
2,00,001-5,00,000ವರೆಗೆ	₹32,50,000
5,00,000ಕ್ಕೂ ಮೇಲ್ಪಟ್ಟು	₹87,50,000

ವಸತಿಯೇತರ ಉಪಯೋಗದ ಇತರೆ ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ ಸೇವಾ ಶುಲ್ಕ

ಕಟ್ಟಡದ ವಿಸ್ತೀರ್ಣ (ಚದರ ಅಡಿಗಳಲ್ಲಿ)	ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಸೇವಾ ಶುಲ್ಕ (ಪ್ರತಿ ತಿಂಗಳಿಗೆ)
1000ವರೆಗೆ	₹2,000
1,001-2,000ವರೆಗೆ	₹6,000
2,001-5,000ವರೆಗೆ	₹14,000
5,001-10,000ವರೆಗೆ	₹38,000
10,001-20,000ವರೆಗೆ	₹70,000
20,001-50,000ವರೆಗೆ	₹1,50,000
50,001-1,00,000ವರೆಗೆ	₹2,75,000
1,00,001-2,00,000ವರೆಗೆ	₹5,00,000
2,00,001-5,00,000ವರೆಗೆ	₹13,00,000
5,00,000 ಮೇಲ್ಪಟ್ಟು	₹35,00,000

ವಸತಿಯೇತರ ಉಪಯೋಗದ ವರ್ಗ - VII ಹೋಟೆಲ್ ಮತ್ತು ಲಾಡ್ಜ್‌ಗಳ ಉಪಯೋಗದ ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಸೇವಾ ಶುಲ್ಕ

ಕಟ್ಟಡದ ವಿಸ್ತೀರ್ಣ (ಚದರ ಅಡಿಗಳಲ್ಲಿ)	ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಸೇವಾ ಶುಲ್ಕ (ಪ್ರತಿ ವರ್ಷಕ್ಕೆ)
1,000ವರೆಗೆ	₹4,000
1,001-2,000ವರೆಗೆ	₹12,000
2,001-5,000ವರೆಗೆ	₹28,000
5,001 - 10,000ವರೆಗೆ	₹76,000
10,001-20,000ವರೆಗೆ	₹1,40,000
20,001-50,000ವರೆಗೆ	₹3,00,000
50,001-1,00,000ವರೆಗೆ	₹5,50,000
1,00,001-2,00,000ವರೆಗೆ	₹10,00,000
2,00,001 -5,00,000ವರೆಗೆ	₹26,00,000
5,00,000ಕ್ಕೂ ಮೇಲ್ಪಟ್ಟು	₹70,00,000

ಘನ ತ್ಯಾಜ್ಯ ವಿಲೇವಾರಿ

ಶುಲ್ಕ ಹೆಚ್ಚಳಕ್ಕೆ ಶೇ 60ರ ಮಿತಿ

ಘನ ತ್ಯಾಜ್ಯ ವಿಲೇವಾರಿ ಬಳಕೆದಾರರ ಶುಲ್ಕವು ಸ್ವಂತ ಉಪಯೋಗದ ಸ್ವತ್ತುಗಳು, ಹೋಟೆಲ್, ಲಾಡ್ಜ್ ಮತ್ತು ತಾರಾ ಹೋಟೆಲ್‌ಗಳ ಉಪಯೋಗದ ಸ್ವತ್ತುಗಳಾಗಿದ್ದಲ್ಲಿ ಅವುಗಳ ಆಸ್ತಿ ತೆರಿಗೆಯ ಮೊತ್ತದ ಶೇಕಡ 60ರಷ್ಟನ್ನು ಮೀರುವಂತಿಲ್ಲ.

ಬಾಡಿಗೆಗೆ ನೀಡಿದ ಸ್ವತ್ತುಗಳಿಗೆ ವಿಧಿಸುವ ಬಳಕೆದಾರರ ಶುಲ್ಕವನ್ನು ಆಸ್ತಿ ತೆರಿಗೆಯ ಮೊತ್ತದ ಶೇ 30ಕ್ಕೆ ಮಿತಿಗೊಳಿಸಲಾಗಿದೆ.

ಸುದ್ದಿ 2 ನಿಮಿಷ

ಗ್ರಾ.ಪಂ. ವರಮಾನ ₹1,272.43 ಕೋಟಿಗೆ ಏರಿಕೆ: ಪ್ರಿಯಾಂಕ್

ಬೆಂಗಳೂರು: 'ಗ್ರಾಮ ಪಂಚಾಯಿತಿಗಳ ವರಮಾನ 2024–25ನೇ ಸಾಲಿನಲ್ಲಿ ₹1,272.43 ಕೋಟಿಗೆ ಏರಿಕೆಯಾಗಿದೆ. ಇದು ಸಾರ್ವಕಾಲಿಕ ದಾಖಲೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

'ಇಲಾಖೆಯು 2022–23ನೇ ಸಾಲಿನಲ್ಲಿ ₹571.94 ಕೋಟಿ, 2023–24ನೇ ಸಾಲಿನಲ್ಲಿ ₹767.87 ಕೋಟಿ ಸಂಗ್ರಹಿಸಿದೆ. 2024–25ನೇ ಸಾಲಿನಲ್ಲಿ ಹಿಂದಿನ ವರ್ಷಕ್ಕಿಂತಲೂ ₹500 ಕೋಟಿ ಹೆಚ್ಚು ಸಂಗ್ರಹ ಆಗಿದೆ' ಎಂದು ಅವರು ಹೇಳಿದ್ದಾರೆ.

'ಕಳೆದ 18 ತಿಂಗಳುಗಳಲ್ಲಿ 13,91,678 ಹೊಸ ಆಸ್ತಿಗಳನ್ನು ತೆರಿಗೆ ನೋಂದಣಿ ವ್ಯಾಪ್ತಿಗೆ ತರುವ ಮೂಲಕ ಪಂಚಾಯತ್ ಆಸ್ತಿಗಳನ್ನು 1,43,91,438ಕ್ಕೆ ಹೆಚ್ಚಿಸಿದ್ದೇವೆ. ಗ್ರಾಮೀಣ ಆಸ್ತಿ ನಿರ್ವಹಣಾ ವೇದಿಕೆಯಾದ 'ಇ-ಸ್ವತ್ತು' ಹಾದಿಯಲ್ಲಿ ಮಾಡಿರುವ ಸುಧಾರಣೆಗಳ ಜೊತೆಗೆ ಇನ್ನೂ ಹೆಚ್ಚಿನ ಆದಾಯ ಸಂಗ್ರಹಿಸಲು ಪಂಚಾಯತ್‌ಗಳಿಗೆ ಹೆಚ್ಚು ಅಧಿಕಾರ ನೀಡಲಾಗುತ್ತಿದೆ' ಎಂದೂ ಅವರು ಹೇಳಿದ್ದಾರೆ.

'ಮೆಟ್ರೊ ಪಿಲ್ಲರ್, ಪಾರಂಪರಿಕ ಕಟ್ಟಡಗಳಿಗೆ ದೀಪಾಲಂಕಾರ'

ಬೆಂಗಳೂರು: 'ಮೆಟ್ರೊ ಪಿಲ್ಲರ್ ಹಾಗೂ ಐತಿಹಾಸಿಕ ಪಾರಂಪರಿಕ ಕಟ್ಟಡಗಳ ದೀಪಾಲಂಕಾರಕ್ಕೆ ಬ್ರ್ಯಾಂಡ್ ಬೆಂಗಳೂರು ಅಡಿ ಟೆಂಡರ್ ಕರೆಯಲಾಗಿದೆ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ನೂತನ ವಿದ್ಯುತ್ ದೀಪ ಅಲಂಕಾರ ಲೋಕಾರ್ಪಣೆಗೊಳಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿ, 'ಬೆಂಗಳೂರಿನ ಸುಮಾರು 40 ಕಡೆ ದೀಪಾಲಂಕಾರಕ್ಕೆ ಸ್ಥಳಗಳನ್ನು ಗುರುತಿಸಲಾಗಿದೆ. ಯಾವ, ಯಾವ ಸ್ಥಳಗಳು ಎಂದು ಅಧಿಕಾರಿಗಳು ತಿಳಿಸಲಿದ್ದಾರೆ' ಎಂದರು.

'ಬೆಂಗಳೂರು ನಗರದಲ್ಲಿ ಎಲ್‌ಇಡಿ ದೀಪ ಬಳಸಲಾಗುವುದು. ಈ ಹಿಂದೆ ಕರೆಯಲಾಗಿದ್ದ ಟೆಂಡರ್ ವಿಫಲವಾಗಿದ್ದು, ಮರು ಟೆಂಡರ್ ಕರೆಯಲಾಗುವುದು. ಡಿಪಿಆರ್ ಕೂಡ ಸಿದ್ಧಪಡಿಸಲಾಗಿದೆ' ಎಂದರು.

'ತಮ್ಮ ಅವಧಿಯಲ್ಲಿ ಸಾಕ್ಷಿಗುಡ್ಡೆಗಳನ್ನು ಸೃಷ್ಟಿ ಮಾಡಬೇಕೆಂದು ಸಭಾಧ್ಯಕ್ಷ ಯು.ಟಿ. ಖಾದರ್ ಅವರು ವಿಧಾನಸೌಧ, ವಿಕಾಸಸೌಧ, ಬೆಳಗಾವಿಯ ಸುವರ್ಣ ಸೌಧಕ್ಕೆ ದೀಪಾಲಂಕಾರ ಮಾಡಿಸಿದ್ದಾರೆ' ಎಂದರು.

ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರು ಸರ್ಕಾರಿ ಶಾಲೆಯ ಮಕ್ಕಳು ತಮ್ಮ ಶಾಲೆಯ ಆವರಣದಲ್ಲಿ ಕಲಿಕೆಯ ಭಾಗವಾಗಿ ತಾವೇ ಬೆಳೆಸಿದ ತರಕಾರಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಾವೇರಿ ನಿವಾಸದಲ್ಲಿ ನೀಡಿ ಸಂಭ್ರಮಿಸಿದರು. ಮಕ್ಕಳನ್ನು ಶ್ಲಾಘಿಸಿದ ಮುಖ್ಯಮಂತ್ರಿ, ಶಾಲೆಗೆ ಎರಡು ಕಂಪ್ಯೂಟರ್‌ಗಳನ್ನು ಉಡುಗೊರೆಯಾಗಿ ನೀಡಿದರು. ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಬೆಳ್ತಂಗಡಿಯ ಕಾಂಗ್ರೆಸ್ ನಾಯಕ ರಕ್ಷಿತ್ ಶಿವರಾಮ್, ಶಾಲೆಯ ಶಿಕ್ಷಕರು ಇದ್ದರು

ಬೇಡಿಕೆ ಈಡೇರಿಸಲು 45 ದಿನ ಗಡುವು ನೀಡಿದ ಪೌರ ನೌಕರರು

ಪ್ರಜಾವಾಣಿ ವಾರ್ತೆ

ರಾಮನಗರ: ತಮ್ಮನ್ನು ಸರ್ಕಾರಿ ನೌಕರರು ಎಂದು ಪರಿಗಣಿಸುವುದು, ಆರೋಗ್ಯ ಸಂಜೀವಿನಿ ಯೋಜನೆ ಜಾರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ಪೌರ ನೌಕರರ ಸಂಘವು ರಾಜ್ಯ ಸರ್ಕಾರಕ್ಕೆ 45 ದಿನಗಳ ಗಡುವು ನೀಡಿದೆ. ಸರ್ಕಾರ ಸ್ಪಂದಿಸದಿದ್ದರೆ ಎಲ್ಲ ಹಂತದ ನೌಕರರು ಕೆಲಸ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುವ ಎಚ್ಚರಿಕೆ ನೀಡಿದೆ.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ಸಂಘದ ರಾಜ್ಯ ಪರಿಷತ್‌ನ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಕೆ.ಪ್ರಭಾಕರ್, ಸಂಘದ ಬೇಡಿಕೆಗಳನ್ನು ಮಂಡಿಸಿದರು. ಏ.11ಕ್ಕೆ ಬೇಡಿಕೆಗಳ ಮನವಿಯನ್ನು ಪೌರಾಡಳಿತ ಸಚಿವಾಲಯದ ಅಧಿಕಾರಿಗಳಿಗೆ ತಲುಪಿಸಿದ ಮಾರನೇ ದಿನದಿಂದಲೇ ಸಾಂಕೇತಿಕ ಹೋರಾಟ ಆರಂಭಿಸಲು ಸಲಹೆ ನೀಡಿದರು.

ಬೇಡಿಕೆಗಳೇನು?: ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೀರು ಸರಬರಾಜು ಸಹಾಯಕರು, ವಾಹನ ಚಾಲಕರು, ಬೀದಿ ದೀಪ ನಿರ್ವಹಣೆಗಾರರು, ಲೋಡರ್ಸ್, ಉದ್ಯಾನ ನಿರ್ವಹಣೆಗಾರರು, ಕಾವಲುಗಾರರು, ಸ್ಯಾನಿಟರಿ ಮೇಲ್ವಿಚಾರಕರು ಸೇರಿದಂತೆ ವಿವಿಧ ವೃಂದಗಳಲ್ಲಿ ಇರುವವರನ್ನು ನೇರ ಪಾವತಿಗೆ ಒಳಪಡಿಸಬೇಕು.

ಸಮಾನ ಕೆಲಸಕ್ಕೆ ಸಮಾನ ವೇತನದಡಿ ಹಲವು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ದಿನಗೂಲಿ ಮತ್ತು ಕ್ಷೇಮಾಭಿವೃದ್ಧಿ ನೌಕರರನ್ನು ಕಾಯಂಗೊಳಿಸಬೇಕು. ಕಾಯಂ ಪೌರ ಕಾರ್ಮಿಕರಿಗೆ ಎಸ್.ಎಫ್.ಸಿ ಮುಕ್ತ ನಿಧಿಯಿಂದ ವೇತನ ಪಾವತಿಸಬೇಕು. ಯುಜಿಡಿ ನಿರ್ವಹಣೆ ಮಾಡುವವರು ಹಾಗೂ ತ್ಯಾಜ್ಯ ಲೋಡರ್‌ಗಳನ್ನು ಕಾಯಂ ಮಾಡಬೇಕು.

ಸಂಘದ ಕಾರ್ಯಾಧ್ಯಕ್ಷ ಸುರೇಶ್ ಬಬಲಾದ, ಪ್ರಧಾನ ಕಾರ್ಯದರ್ಶಿ ಎಂ.ಗುರುನಾಥ್, ಜಂಟಿ ಕಾರ್ಯದರ್ಶಿ ಮೊಹಮ್ಮದ್ ಗೌಸ್, ಸಹಾಯಕ ಕಾರ್ಯದರ್ಶಿ ರಾಘವೇಂದ್ರ ರಾವ್, ಖಜಾಂಚಿ ಜಯಣ್ಣ, ಮೈಸೂರು ವಿಭಾಗದ ಉಪಾಧ್ಯಕ್ಷ ಆರ್.ನಾಗರಾಜು, ಬೆಂಗಳೂರು ವಿಭಾಗದ ಆರ್. ಕೆ.ಹರೀಶ್ ಕುಮಾರ್, ಕಲಬುರಗಿಯ ಮುತ್ತಣ್ಣ ಭಂಡಾರಿ ಉಪಸ್ಥಿತರಿದ್ದರು.

ತೆಲುಗು ವಿಜ್ಞಾನ ಸಮಿತಿ ಅಧ್ಯಕ್ಷ ರಾಧಾಕೃಷ್ಣ ಮನವಿ

ಆಂಧ್ರದ ನೆಲದಲ್ಲಿ ಕನ್ನಡ ಶಾಲೆ ತೆರೆಯಿರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಂಧ್ರದ ಹಲವು ಜಿಲ್ಲೆಗಳು ಕರ್ನಾಟಕದ ಜತೆಗೆ ಗಡಿ ಹಂಚಿಕೊಂಡಿವೆ. ಅಲ್ಲೆಲ್ಲಾ ಕನ್ನಡಿಗರು ಬಹಳ ಸಂಖ್ಯೆಯಲ್ಲಿದ್ದಾರೆ. ಆದರೆ ಅವರಿಗೆ ಕನ್ನಡ ಶಾಲೆ ಇಲ್ಲ. ಆಂಧ್ರ ಪ್ರದೇಶ ಸರ್ಕಾರದಿಂದ ಕನ್ನಡ ಶಾಲೆ ತೆರೆಯಬೇಕು' ಎಂದು ತೆಲುಗು ವಿಜ್ಞಾನ ಸಮಿತಿ ಅಧ್ಯಕ್ಷ ಎ.ರಾಧಾಕೃಷ್ಣ ರಾಜು ಒತ್ತಾಯಿಸಿದರು.

ತೆಲುಗು ವಿಜ್ಞಾನ ಸಮಿತಿ ವತಿಯಿಂದ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಯುಗಾದಿ ಉತ್ಸವ ಮತ್ತು ಶ್ರೀ ಕೃಷ್ಣದೇವರಾಯ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗಿಯಾಗಿದ್ದ ಆಂಧ್ರ ಪ್ರದೇಶ ವಿಧಾನಸಭೆಯ ಉಪ ಸಭಾಧ್ಯಕ್ಷ ಕೆ.ರಘುರಾಮ ಕೃಷ್ಣರಾಜು ಅವರಿಗೆ ಮನವಿ ಸಲ್ಲಿಸಿದ ಅವರು, 'ಕನ್ನಡ ಮತ್ತು ತೆಲುಗು ಅಣ್ಣ–ತಮ್ಮಂದಿರಂತಿವೆ. ಎರಡೂ ಭಾಷಿಕ ಸಮುದಾಯಗಳ ಜನರ ನಡೆ, ನುಡಿ ಮತ್ತು ಲಿಪಿಯಲ್ಲಿ ಬಹಳ ಸಾಮ್ಯತೆ ಇದೆ. ಕನ್ನಡ ಮತ್ತು ತೆಲುಗು ಲಿಪಿ ಮಧ್ಯೆ ಏಳು ಅಕ್ಷರಗಳ ವ್ಯತ್ಯಾಸವಷ್ಟೇ ಇದೆ' ಎಂದರು.

ಕಾರ್ಯಕ್ರಮದಲ್ಲಿ, ನಟ ಜಗ್ಗೇಶ್ ಅವರಿಗೆ 'ಶ್ರೀ ಕೃಷ್ಣದೇವರಾಯ ಪುರಸ್ಕಾರ' ಮತ್ತು ನಟ ಸಾಯಿಕುಮಾರ್ ಅವರಿಗೆ 'ಸ್ವರ್ಣೋತ್ಸವ ಸತ್ಕಾರ' ನೀಡಿ ಗೌರವಿಸಲಾಯಿತು. ಕೆ. ರಘುರಾಮ ಕೃಷ್ಣರಾಜು, ರಾಧಾಕೃಷ್ಣರಾಜು ಮತ್ತು ಕೆ. ಶ್ಯಾಮರಾಜು ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ಎರಡೂ ಭಾಷೆಗಳ ನಡುವಣ ಈ ಸಂಬಂಧವನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಇಲ್ಲಿ ತೆಲುಗು ಕಲಿಕೆ ಮತ್ತು ಆಂಧ್ರದ ನೆಲದಲ್ಲಿ ಕನ್ನಡ ಕಲಿಕೆ ಮಹತ್ವದ ಪಾತ್ರ ವಹಿಸುತ್ತದೆ. ಈ ವಿಚಾರವನ್ನು ಆಂಧ್ರ ಪ್ರದೇಶ ಸರ್ಕಾರದ ಗಮನಕ್ಕೆ ತಂದು, ಅಲ್ಲಿನ ನೆಲದಲ್ಲಿ ಕನ್ನಡ ಶಾಲೆಗಳಿಗೆ ಶಿಕ್ಷಕರು, ಪಠ್ಯಪುಸ್ತಕ ಮತ್ತಿತರ ಸವಲತ್ತುಗಳನ್ನು ಒದಗಿಸಬೇಕು' ಎಂದು ಕೋರಿದರು.

ರಘುರಾಮ ಕೃಷ್ಣರಾಜು, 'ಈ ಮನವಿಯನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಗಡಿ ಜಿಲ್ಲೆಗಳಲ್ಲಿ ಕನ್ನಡ ಶಾಲೆಗಳ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

ನಟ ಜಗ್ಗೇಶ್, 'ಎರಡೂ ಭಾಷೆಗಳ ಜನರು ಅನ್ಯೋನ್ಯವಾಗಿ ಇರುವುದರಿಂದಲೇ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಮಧ್ಯೆ ಯಾವುದೇ ಸಂಘರ್ಷವಿಲ್ಲ. ಇದನ್ನು ಕಾಪಾಡಿಕೊಳ್ಳಬೇಕು' ಎಂದರು.

'ಜಗ್ಗೇಶ್ ಖಾನ್ ಆಗಿರುತ್ತಿದ್ದೆ'

'ಭಾರತೀಯರೆಲ್ಲರೂ ಕೃಷ್ಣದೇವರಾಯ ಮತ್ತು ಶಿವಾಜಿ ಮಹಾರಾಜರಿಗೆ ಕೃತಜ್ಞರಾಗಿ ಇರಬೇಕು. ಆ ಇಬ್ಬರು ಈ ನಾಡಿನಲ್ಲಿ ಹುಟ್ಟದೇ ಇದ್ದಿದ್ದರೆ, ನಮ್ಮೆಲ್ಲರ ಹೆಸರು ಬೇರೆಯಾಗಿರುತ್ತಿತ್ತು. ನಾನು ಜಗ್ಗೇಶ್ ಅಲ್ಲ, ಜಗ್ಗೇಶ್ ಖಾನ್ ಆಗಿರುತ್ತಿದ್ದೆ' ಎಂದು ರಾಜ್ಯಸಭಾ ಸದಸ್ಯ ಜಗ್ಗೇಶ್ ಹೇಳಿದರು.

ತೆಲುಗು ವಿಜ್ಞಾನ ಸಮಿತಿ ಕೊಡಮಾಡುವ 'ಶ್ರೀ ಕೃಷ್ಣದೇವರಾಯ ಪುರಸ್ಕಾರ' ಸ್ವೀಕರಿಸಿ ಅವರು ಮಾತನಾಡಿದರು. 'ನಾನು ಆರ್‌ಎಸ್‌ಎಸ್‌ನಿಂದ ಬಂದವನು. ಸೇವೆ ಮಾಡುವುದನ್ನೇ ಸಂಘ ನಮಗೆ ಹೇಳಿಕೊಟ್ಟಿದೆ. ನಮ್ಮತನವನ್ನು ಕಾಪಾಡಿದಂತಹ ಕೃಷ್ಣದೇವರಾಯರ ಹೆಸರಿನ ಪ್ರಶಸ್ತಿ ಸ್ವೀಕರಿಸುತ್ತಿರುವುದು, ಜಾಗತಿಕ ಮಟ್ಟದ ಮನ್ನಣೆ ದೊರೆತಷ್ಟು ಸಂತಸ ತಂದಿದೆ' ಎಂದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

'ಉಕ್ಕಿ ಹರಿಯುತ್ತಿರುವ ಮ್ಯಾನ್‌ಹೋಲ್'

ನ್ಯೂ ಬಿಇಎಲ್ ರಸ್ತೆಯ ರಾಮಯ್ಯ ಆಸ್ಪತ್ರೆ ಸಿಗ್ನಲ್ ಬಳಿ ಇರುವ ಮ್ಯಾನ್‌ಹೋಲ್ ಉಕ್ಕಿ ಹರಿಯುತ್ತಿದೆ. ಇದರಿಂದ ಸುತ್ತಲಿನ ವಾತಾವರಣ ಗಬ್ಬೆದ್ದು ನಾರುತ್ತಿದ್ದು, ಸುತ್ತಮುತ್ತಲಿನ ವ್ಯಾಪಾರಿಗಳಿಗೆ ಕಿರಿಕಿರಿ ಉಂಟಾಗಿದೆ. ಈ ಮ್ಯಾನ್‌ಹೋಲ್ ಕಟ್ಟಿಕೊಂಡು ಅನೇಕ ತಿಂಗಳುಗಳೇ ಕಳೆದಿವೆ. ಇದರಿಂದಾಗಿ ಪಾದಚಾರಿಗಳು ಹಾಗೂ ವಾಹನ ಸವಾರರು ಮೂಗು ಮುಚ್ಚಿಕೊಂಡೇ ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ವ್ಯಾಪಾರಿಗಳು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ದೂರು ನೀಡಿದ್ದರೂ ಸಮಸ್ಯೆಗೆ ಪರಿಹಾರ ಒದಗಿಸಿಲ್ಲ. ಮಳೆ ಬಂದಲ್ಲಿ ಇನ್ನಷ್ಟು ಸಮಸ್ಯೆಯಾಗಲಿದೆ. ಆದ್ದರಿಂದ ಕಟ್ಟಿಕೊಂಡ ಒಳಚರಂಡಿಯನ್ನು ಸರಿಪಡಿಸಲು ಕೂಡಲೇ ಕ್ರಮವಹಿಸಬೇಕು.

ಕೆ.ಎಂ. ಪ್ರಕಾಶ್, ನ್ಯೂ ಬಿಇಎಲ್ ರಸ್ತೆ

ನ್ಯೂ ಬಿಇಎಲ್ ರಸ್ತೆಯ ರಾಮಯ್ಯ ಆಸ್ಪತ್ರೆ ಸಿಗ್ನಲ್ ಬಳಿ ಮ್ಯಾನ್‌ಹೋಲ್ ಉಕ್ಕಿ ಹರಿಯುತ್ತಿರುವುದು

'ಬಸ್ ತಂಗುದಾಣ ಅವ್ಯವಸ್ಥೆಯ ಆಗರ'

ಕೊಟ್ಟಿಗೆಪಾಳ್ಯ ಬಸ್ ತಂಗುದಾಣ

ಮಾಗಡಿ ಮುಖ್ಯರಸ್ತೆಯ ಕೊಟ್ಟಿಗೆಪಾಳ್ಯ ಬಸ್ ತಂಗುದಾಣವು ಅವ್ಯವಸ್ಥೆಯ ಆಗರವಾಗಿದೆ. ಈ ಬಸ್ ತಂಗುದಾಣದ ಚಾವಣಿ ಕಿತ್ತುಹೋಗಿದ್ದು, ಮಳೆ ಬಂದಲ್ಲಿ ಸೋರಲಿದೆ. ಈ ತಂಗುದಾಣದಿಂದಲೇ ಪ್ರತಿನಿತ್ಯ ನೂರಾರು ಮಂದಿ ಪ್ರಯಾಣಿಸುತ್ತಾರೆ. ವಿದ್ಯಾರ್ಥಿಗಳು ಬೆಂಗಳೂರು ವಿಶ್ವವಿದ್ಯಾಲಯ, ಕೆಂಗೇರಿ ಉಪನಗರದ ನ್ಯೂ ನ್ಯಾಷನಲ್ ಕಾಲೇಜು, ಮಹೇಶ್ ಪಿಯು ಕಾಲೇಜು, ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ ಸೇರಿದಂತೆ ವಿವಿಧ ಶಾಲಾ-ಕಾಲೇಜುಗಳಿಗೆ ಈ ತಂಗುದಾಣದ ಮೂಲಕವೇ ಪ್ರಯಾಣ ಬೆಳೆಸುತ್ತಾರೆ. ಮಳೆ ಬಂದಾಗ ರಕ್ಷಣೆ ಪಡೆಯಲು ಚಾವಣಿಯೂ ಇಲ್ಲದ ಪರಿಣಾಮ ಪಠ್ಯ ಪುಸ್ತಕಗಳು ಒದ್ದೆಯಾಗುತ್ತವೆ. ಬಿಬಿಎಂಪಿ ನಿರ್ಮಿಸಿರುವ ಈ ಬಸ್ ತಂಗುದಾಣದಲ್ಲಿನ ಆಸನಗಳು ಮುರಿದುಹೋಗಿವೆ. ಇದರಿಂದಾಗಿ ವೃದ್ಧರು, ಅಂಗವಿಕಲರಿಗೆ ಸಹ ಇಲ್ಲಿ ಕುಳಿತುಕೊಳ್ಳಲು ವ್ಯವಸ್ಥೆಯಿಲ್ಲ. ವಿದ್ಯುತ್ ದೀಪದ ವ್ಯವಸ್ಥೆ ಇಲ್ಲದ ಕಾರಣ ಸಂಜೆ ವೇಳೆ ಹೆಣ್ಣು ಮಕ್ಕಳು ಕತ್ತಲೆಯಲ್ಲೇ ಭಯದಿಂದ ಬಸ್‌ಗಾಗಿ ಕಾಯುವ ಸ್ಥಿತಿಯಿದೆ. ಆದ್ದರಿಂದ ಅಗತ್ಯ ಮೂಲಸೌಕರ್ಯ ಕಲ್ಪಿಸಿ, ಸಮಸ್ಯೆ ನಿವಾರಿಸಬೇಕು.

ತನುಜಾ, ಅರ್ಪಿತಾ.ಎ.ಎಂ ಮತ್ತು ಕಾವ್ಯ, ವಿದ್ಯಾರ್ಥಿನಿಯರು

'ವಿದ್ಯುತ್ ಕಂಬವನ್ನು ತೆರವುಗೊಳಿಸಿ'

ಸತ್ಯಾನಗರದಲ್ಲಿ ಶಿಥಿಲಗೊಂಡಿರುವ ವಿದ್ಯುತ್ ಕಂಬ

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಮಾರುತಿ ಸೇವಾ ನಗರ ವಾರ್ಡಿನ 6ನೇ ಅಡ್ಡರಸ್ತೆಯ ಸತ್ಯಾನಗರದಲ್ಲಿ ಇರುವ ವಿದ್ಯುತ್ ಕಂಬವು ಶಿಥಿಲಗೊಂಡಿದೆ. ಈ ಕಂಬವನ್ನು ತೆರವುಗೊಳಿಸಲು ಹಲವಾರು ಬಾರಿ ಬೆಸ್ಕಾಂ ಅಧಿಕಾರಿಗಳಿಗೆ ಇಲ್ಲಿನ ನಿವಾಸಿಗಳು ಮನವಿ ಮಾಡಿದ್ದರೂ, ಅಧಿಕಾರಿಗಳು ಈ ಬಗ್ಗೆ ಗಮನ ಹರಿಸುತ್ತಿಲ್ಲ. ಅನಾಹುತ ಘಟಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಕ್ರಮವಹಿಸಿ, ವಿದ್ಯುತ್ ಕಂಬವನ್ನು ಬದಲಾಯಿಸಬೇಕು. ಈ ಮೂಲಕ ಅನಾಹುತಗಳು ಘಟಿಸದಂತೆ ತಡೆಯಬೇಕು.

ಕರಿಯಪ್ಪ, ಸತ್ಯಾನಗರ

'ರಸ್ತೆಯಲ್ಲಿ ಹರಿಯುವ ಮಾಂಸದಂಗಡಿ ತ್ಯಾಜ್ಯ'

ಮಹದೇವಪುರ ಕ್ಷೇತ್ರದ ಕಾಡುಗೋಡಿ ವಾರ್ಡಿನ ಬಾಪೂಜಿ ವೃತ್ತದಿಂದ ಮಾರ್ಕೆಟ್ ರಸ್ತೆಯ ಅಕ್ಕಪಕ್ಕದಲ್ಲಿರುವ ಮಾಂಸದ ಅಂಗಡಿಗಳ ವ್ಯಾಪಾರಿಗಳು ಕೋಳಿ, ಕುರಿಯ ರಕ್ತ ಹಾಗೂ ಮಾಂಸದ ತ್ಯಾಜ್ಯವನ್ನು ಚರಂಡಿಗೆ ಹಾಕುತ್ತಾರೆ. ಈ ತ್ಯಾಜ್ಯವು ಚರಂಡಿಯಿಂದ ಉಕ್ಕಿ, ರಸ್ತೆಗೆ ಹರಿಯುವ ಪರಿಣಾಮ ದುರ್ವಾಸನೆ ಬೀರುತ್ತಿದೆ. ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯದಿಂದ, ಪಾದಚಾರಿಗಳು ಹಾಗೂ ವಾಹನ ಸವಾರರು ಮೂಗು ಮುಚ್ಚಿಕೊಂಡೇ ಸಾಗುವ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಅಲ್ಲದೆ, ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಉಂಟಾಗಿದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಚರಂಡಿಗಳ ಸ್ವಚ್ಛತೆಗೆ ಸೂಚಿಸಿ, ಚರಂಡಿಯಲ್ಲಿ ರಕ್ತ ಹಾಗೂ ತ್ಯಾಜ್ಯ ಬಿಸಾಡದಂತೆ ಕ್ರಮ ಕೈಗೊಳ್ಳಬೇಕು.

ಕಾಡುಗುಡಿ ಸೊಣ್ಣಪ್ಪ, ಕರ್ನಾಟಕ ದಲಿತ ಕ್ರಿಯಾ ವೇದಿಕೆ ಅಧ್ಯಕ್ಷ

ಕಾಡುಗೋಡಿಯ ಬಾಪೂಜಿ ವೃತ್ತದ ಮಾರ್ಕೆಟ್ ರಸ್ತೆಯಲ್ಲಿ ಹರಿಯುತ್ತಿರುವ ರಕ್ತ

'ನೀರಿನ ಘಟಕ ದುರಸ್ತಿ ಮಾಡಿ'

ನೆಲಮಂಗಲ ತಾಲ್ಲೂಕಿನ ಬರಗೂರಿನಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ ಕಾರ್ಯನಿರ್ವಹಿಸುತ್ತಿಲ್ಲ. ಇದು ಕೆಟ್ಟು ಹೋಗಿ ವರ್ಷಗಳೇ ಕಳೆದಿದ್ದು, ನಾಯಿಗಳ ವಾಸಸ್ಥಾನವಾಗಿದೆ. ಈ ಗ್ರಾಮದಲ್ಲಿ 150 ಮನೆಗಳಿವೆ. ಒಂದು ಸಾವಿರ ಜನಸಂಖ್ಯೆ ಇದೆ. ಕುಡಿಯುವ ನೀರು ತರಲು ಕುಂಟಬೊಮ್ಮನಹಳ್ಳಿ, ಯಲಚಿಗೆರೆ, ಕೋಳಾಲಕ್ಕೆ ತೆರಳಬೇಕಿದ್ದು, 5ರಿಂದ 6 ಕಿ.ಮೀ. ದೂರವಾಗಲಿದೆ. ಇಲ್ಲಿ ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದು, ದೂರದ ಪ್ರದೇಶದಿಂದ ನೀರು ತರುವುದು ಕಷ್ಟಸಾಧ್ಯವಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ಘಟಕವನ್ನು ದುರಸ್ತಿ ಮಾಡಿಸಬೇಕು.

ಗೋವಿಂದರಾಜು ಬಿ.ಎಚ್., ಬರಗೂರು

ಬರಗೂರಿನಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ

ಏ.12–13: ರಾಜ್ಯದ ಅತಿದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್'

ಒಂದೇ ಸೂರಿನಡಿ ಖ್ಯಾತ ಶಿಕ್ಷಣ ಸಂಸ್ಥೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ನೀಟ್, ಸಿಇಟಿ ಫಲಿತಾಂಶದ ನಂತರ ಉತ್ತಮ ಕಾಲೇಜು ಆಯ್ಕೆ ಹೇಗೆ ಮಾಡಿಕೊಳ್ಳಬೇಕು? ಕೋರ್ಸ್‌ಗಳ ಆಯ್ಕೆ, ಪ್ರವೇಶ ಶುಲ್ಕ, ಶೈಕ್ಷಣಿಕ ಸಾಲ ಸೌಲಭ್ಯ, ಭವಿಷ್ಯದಲ್ಲಿನ ಉದ್ಯೋಗಾವಕಾಶಗಳ ಕುರಿತು ಸಮಗ್ರ ಮಾಹಿತಿ ನಿರೀಕ್ಷೆಯಲ್ಲಿದ್ದಾರಾ?

ದ್ವಿತೀಯ ಪಿಯು ಮುಗಿಸಿ, ನೀಟ್ ಹಾಗೂ ಸಿಇಟಿ ಬರೆಯುತ್ತಿರುವ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರೇ ಈ ಕುರಿತು ಹೆಚ್ಚು ಚಿಂತಿಸಬೇಡಿ. ಬೆಂಗಳೂರು ಅರಮನೆ ಮೈದಾನದಲ್ಲಿ (ತ್ರಿಪುರವಾಸಿನಿ) ಕರ್ನಾಟಕದ ವಿಶ್ವಾಸಾರ್ಹ ಪತ್ರಿಕೆಗಳಾದ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿರುವ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್'ನಲ್ಲಿ ಈ ಎಲ್ಲ ಮಾಹಿತಿಯ ಕಣಜವೇ ದೊರಕಲಿದೆ. 60ಕ್ಕೂ ಹೆಚ್ಚು ಹೆಸರಾಂತ ಶಿಕ್ಷಣ ಸಂಸ್ಥೆಗಳು ಒಂದೇ ಸೂರಿನಡಿ ನೆಲೆಗೊಳ್ಳಲಿದ್ದು, ಸಮಗ್ರ ಮಾಹಿತಿ, ಸಂಪೂರ್ಣ ಸಹಕಾರ, ಸಹಾಯಹಸ್ತ ಚಾಚುವ ಜತೆಗೆ, ವಿದ್ಯಾರ್ಥಿಗಳು, ಪೋಷಕರ ಎಲ್ಲ, ಅನುಮಾನ ಗೊಂದಲ ನಿವಾರಣೆ ಮಾಡಲಿವೆ.

ಪ್ರಜಾವಾಣಿ DH ಎಡ್ಯುವರ್ಸ್™ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಪ್ರವೇಶ ನೋಂದಣಿಗಾಗಿ ಉಪಯೋಗಿಸಿ..

ಮುಖ್ಯಾಂಶಗಳು

- ಆಯೋಜನೆ: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'
- ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಂಗಳೂರು
- ದಿನಾಂಕ: ಏಪ್ರಿಲ್ 12–13
- ಸಮಯ: ಬೆಳಿಗ್ಗೆ 10ರಿಂದ

ಈ ಮೇಳದಲ್ಲಿ ಬೆಂಗಳೂರಿನ ಪ್ರಖ್ಯಾತ ಶಿಕ್ಷಣ ಸಂಸ್ಥೆಗಳಾದ ರಾಮಯ್ಯ ವಿಶ್ವವಿದ್ಯಾಲಯ, ಚಾಣಕ್ಯ ವಿಶ್ವವಿದ್ಯಾಲಯ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಪಿಇಎಸ್ ವಿಶ್ವ ವಿದ್ಯಾಲಯ, ರೇವಾ ವಿಶ್ವವಿದ್ಯಾಲಯ, ಸಪ್ತಗಿರಿ ವಿಶ್ವವಿದ್ಯಾಲಯ, ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಈಸ್ಟ್ ಪಾಯಿಂಟ್, ಸಿಎಂಆರ್ ವಿಶ್ವವಿದ್ಯಾಲಯ, ಈಸ್ಟ್–ವೆಸ್ಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಸಂಭ್ರಮ್ ಇನ್‌ಸ್ಟಿಟ್ಯೂಷನ್ಸ್, ಅಮೃತ ವಿಶ್ವವಿದ್ಯಾಪೀಠಂ, ಯೂನಿವರ್ಸಲ್ ಶಿಕ್ಷಣ ಸಂಸ್ಥೆ, ರಾಜರಾಜೇಶ್ವರಿ ಕಾಲೇಜ್ ಆಫ್ ಎಂಜಿನಿಯರಿಂಗ್, ಅಮಿಟಿ ವಿಶ್ವವಿದ್ಯಾಲಯ, ಏಟ್ರಿಯಾ, ಎಸಿಎಸ್ ಕಾಲೇಜು, ಡಾನ್ ಬಾಸ್ಕೊ, ಸಾಯಿ ವಿದ್ಯಾ ಸಂಸ್ಥೆ ಸೇರಿದಂತೆ ಹಲವು ವಿಶ್ವವಿದ್ಯಾಲಯ, ಶಿಕ್ಷಣ ಸಂಸ್ಥೆಗಳು ಭಾಗವಹಿಸುತ್ತಿವೆ.

ದ್ವಿತೀಯ ಪಿಯು ನಂತರ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ಕೋರ್ಸ್ ಓದಿಗಷ್ಟೇ ಸೀಮಿತವಲ್ಲ, ಅದು ಭವಿಷ್ಯದ ಬದುಕಿನ ದಾರಿಯೂ ಆಗಿರುತ್ತದೆ. ಅಂತಹ ದಾರಿ ತೋರುವ ಎಂಜಿನಿಯರಿಂಗ್, ವೈದ್ಯಕೀಯ, ವಾಸ್ತುಶಿಲ್ಪ, ನರ್ಸಿಂಗ್, ಡಿಪ್ಲೊಮಾ, ಬ್ಯುಸಿನೆಸ್ ಮ್ಯಾನೇಜ್‌ಮೆಂಟ್, ಡಿಜಿಟಲ್ ಮಾರ್ಕೆಟಿಂಗ್ ಎಂ.ಬಿ.ಎ, ಬಿ.ಎಸ್‌ಸಿ, ಬಿ.ಟೆಕ್, ರೋಬೋಟಿಕ್ಸ್, ಪ್ರವಾಸೋದ್ಯಮ, ಎಂಸಿಎ, ಫ್ಯಾಷನ್ ಡಿಸೈನ್.. ಹೀಗೆ ವಿವಿಧ ಕೋರ್ಸ್‌ಗಳು ಹಾಗೂ ಕಾಲೇಜುಗಳ ವಿಶೇಷತೆಗಳ ಬಗ್ಗೆ ಮಾಹಿತಿ ಒದಗಿಸಲಿವೆ.

ಬ್ಯಾಂಕ್ ಸಿಬ್ಬಂದಿ ಮೇಲೆ ಗ್ರಾಹಕನಿಂದ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲದ ಕಂತು ವಸೂಲಿಗೆ ಬಂದ ಬ್ಯಾಂಕ್ ಸಿಬ್ಬಂದಿ ಮೇಲೆ ಗ್ರಾಹಕರೊಬ್ಬರು ತೀವ್ರ ಹಲ್ಲೆ ನಡೆಸಿರುವ ಘಟನೆ ನಾಗರಬಾವಿಯ 2ನೇ ಹಂತದಲ್ಲಿರುವ ಬಿಡಿಎ ಕಾಂಪ್ಲೆಕ್ಸ್ ಬಳಿ ನಡೆದಿದೆ.

ಹಲ್ಲೆಗೊಳಗಾದ ಬ್ಯಾಂಕ್ ಸಿಬ್ಬಂದಿ ಬಿ.ಎಂ. ಚಂದನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಳಿಕ ನೀಡಿರುವ ದೂರಿನನ್ವಯ ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು, ರಮೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ದ್ವಿಚಕ್ರ ವಾಹನ ಖರೀದಿಸಲು ಖಾಸಗಿ ಬ್ಯಾಂಕ್‌ನ ಮೂಲಕ ಸಾಲ ಪಡೆದಿದ್ದ ರಮೇಶ್, ಎರಡು ತಿಂಗಳುಗಳಿಂದ ಸಾಲದ ಮಾಸಿಕ ಕಂತು ಪಾವತಿಸಿರಲಿಲ್ಲ. ಫೋನ್ ಮಾಡಿದರೆ ಕರೆ ಸ್ವೀಕರಿಸುತ್ತಿರಲಿಲ್ಲ. ಸಾಕಷ್ಟು ಪ್ರಯತ್ನದ ನಂತರ ಕರೆ ಸ್ವೀಕರಿಸಿ ನಾಗರಬಾವಿಯ ಬಿಡಿಎ ಕಾಂಪ್ಲೆಕ್ಸ್ ಬಳಿ ಬರಲು ಹೇಳಿದ್ದ. ಅಲ್ಲಿಗೆ ತೆರಳಿದ್ದ ವೇಳೆ, 'ಹಣ ಪಾವತಿ ಮಾಡಲ್ಲ' ಎಂದು ಹೇಳಿದ' ಎಂದು ಚಂದನ್ ದೂರಿನಲ್ಲಿ ತಿಳಿಸಿದ್ದಾರೆ.

'ಇಬ್ಬರ ನಡುವೆ ಮಾತಿನ ಚಕಮಕಿ ನಡೆಯಿತು. ಆಗ ಕೈ ಮತ್ತು ಕಲ್ಲುಗಳಿಂದ ಹಲ್ಲೆ ನಡೆಸಿರುವ ರಮೇಶ್, ಜೀವ ಬೆದರಿಕೆ ಹಾಕಿದ. ಸುತ್ತಮುತ್ತಲ ಜನರು ಸೇರುತ್ತಿದ್ದಂತೆ ಅಲ್ಲಿಂದ ಪರಾರಿಯಾದ. ಆರೋಪಿ ವಿರುದ್ಧ ಕಾನೂನುಕ್ರಮ ಜರುಗಿಸಬೇಕು' ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ಸೋಮವಾರ, ಏಪ್ರಿಲ್ 7, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 96 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೌಹಾರ್ದ

ಕಲಬುರಗಿಯಲ್ಲಿ ರಾಮನವಮಿ ಆಚರಣೆ ಅಂಗವಾಗಿ ಭಾನುವಾರ ಶೇಖ್ ರೋಜಾ ಬಳಿ ರಾಮನ ಮೂರ್ತಿಯ ಮೆರವಣಿಗೆಯಲ್ಲಿ ಬಂದ ಹಿಂದೂಗಳಿಗೆ ಮುಸ್ಲಿಂ ಸಮುದಾಯದವರು ಪಾನಕ ವಿತರಿಸಿದರು

ಚಿತ್ರ: ತಾಜುದ್ದೀನ್ ಆಜಾದ್

ಆಳ-ಅಗಲ ಸ್ಮಾರ್ಟ್ ಸಿಟಿ ಈಡೇರಿತೇ ಆಶಯ?

ಆರ್‌ಆರ್‌ಬಿ ವಿಲೀನ ಶೀಘ್ರ: ಕೇಂದ್ರ 8

ವಿನಯ್ ಸಾವಿಗೆ ಬಿಜೆಪಿಯೇ ಹೊಣೆ: ಕಾಂಗ್ರೆಸ್ 5

ನಾಳೆಯಿಂದ ಎಐಸಿಸಿ ಅಧಿವೇಶನ 9

ಟ್ರಂಪ್, ಮಸ್ಕ್ ವಿರುದ್ಧ ಪ್ರತಿಭಟನೆ 8

ಪಂಬನ್ ಲಿಫ್ಟ್ ಸೇತುವೆ ಉದ್ಘಾಟನೆ

ರಾಮೇಶ್ವರ (ತಮಿಳುನಾಡು) (ಪಿಟಿಐ): ರಾಮೇಶ್ವರ ದ್ವೀಪವನ್ನು ರೈಲು ಮೂಲಕ ಸಂಪರ್ಕಿಸಲು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ನಿರ್ಮಿಸಿರುವ ಪಂಬನ್ ಲಿಫ್ಟ್ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಉದ್ಘಾಟಿಸಿದರು.

ರಾಮೇಶ್ವರಂ-ತಂಬರಂ (ಚೆನ್ನೈ) ನಡುವೆ ಹೊಸ ರೈಲು ಸೇವೆಗೆ ಇದೇ ವೇಳೆ ಚಾಲನೆ ನೀಡಿದ ಪ್ರಧಾನಿ, ಸೇತುವೆಯ ಕೆಳಗಿನಿಂದ ಸಂಚರಿಸಿದ ಕರಾವಳಿ ಕಾವಲು ಪಡೆಯ ಹಡಗಿಗೂ ಹಸಿರು ನಿಶಾನೆ ತೋರಿದರು.

ರಾಮೇಶ್ವರಕ್ಕೆ ಭೇಟಿ ನೀಡುವ ಭಕ್ತರು ಮತ್ತು ಪ್ರವಾಸಿಗರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ಈ ಸೇತುವೆಯು ಭಾರತದ ಮೊದಲ 'ಲಿಫ್ಟ್ ಸೇತುವೆ'ಯೂ (ಮೇಲೆತ್ತಲಾಗುವ ಸೇತುವೆ) ಹೌದು.

2.08 ಕಿ.ಮೀ ಸೇತುವೆ ಉದ್ದ

₹550 ಕೋಟಿ ನಿರ್ಮಾಣ ವೆಚ್ಚ

ವೈಶಿಷ್ಟ್ಯಗಳು

- ಸೇತುವೆಯು 72.5 ಮೀ. ಉದ್ದದ ಲಿಫ್ಟ್ ಸ್ಪ್ಯಾನ್ ಒಳಗೊಂಡಿದೆ
- ಲಿಫ್ಟ್ ಸ್ಪ್ಯಾನ್ ಅನ್ನು 17 ಮೀ. ಎತ್ತರದವರೆಗೂ ಏರಿಸುವಂತೆ ಸೇತುವೆ ವಿನ್ಯಾಸಗೊಳಿಸಲಾಗಿದೆ
- ಲಿಫ್ಟ್ ಸ್ಪ್ಯಾನ್ ಮೇಲಕ್ಕೆ ಎತ್ತರಿಸಿ, ಕೆಳಭಾಗದಲ್ಲಿ ಮೀನುಗಾರಿಕೆಯ ಬೃಹತ್ ದೋಣಿಗಳು, ಕರಾವಳಿ ಕಾವಲು ಪಡೆ ಮತ್ತು ಸರಕು ಸಾಗಣೆ ಹಡಗುಗಳು ಸಂಚರಿಸಲು ಅವಕಾಶ ಕಲ್ಪಿಸಲಾಗುತ್ತದೆ
- ಸೇತುವೆಯ ಬಾಳಿಕೆ ಅವಧಿ 100 ವರ್ಷ ಎಂದು ಅಂದಾಜಿಸಲಾಗಿದೆ

ಪಂಬನ್ ಸೇತುವೆಯ ಲಿಫ್ಟ್ ಸ್ಪ್ಯಾನ್ ಮೇಲಕ್ಕೆ ಏರಿಸಿದಾಗ ಆದರ ಕೆಳಗೆ ಸಂಚರಿಸಿದ ಕರಾವಳಿ ಕಾವಲು ಪಡೆಯ ಹಡಗಿನತ್ತ ಪ್ರಧಾನಿ ನರೇಂದ್ರ ಮೋದಿ ಕೈಬೀಸಿದರು —ಪಿಟಿಐ ಚಿತ್ರ

ಕೇಂದ್ರದ ಷರತ್ತು ಬದಲಿಸಿದ ಬೆಸ್ಕಾಂ: ಭಾರಿ ಅಕ್ರಮದ ಆರೋಪ ಹೊರಿಸಿದ ಬಿಜೆಪಿ

ಸ್ಮಾರ್ಟ್ ಮೀಟರ್: ಲಾಭ ಯಾರಿಗೆ?

● ಜಯಸಿಂಹ ಆರ್.

ಬೆಂಗಳೂರು: ಸ್ಮಾರ್ಟ್ ಮೀಟರ್ ಅಳವಡಿಕೆಯಲ್ಲಿ ನಿರ್ದಿಷ್ಟ ಗುತ್ತಿಗೆದಾರರಿಗೆ ಲಾಭ ಮಾಡಿಕೊಡುವ ಏಕೈಕ ಉದ್ದೇಶದಿಂದ, ಟೆಂಡರ್ ಷರತ್ತುಗಳನ್ನೇ ಬದಲಿಸಲಾಗಿದೆ ಎಂಬ ಆಕ್ಷೇಪಕ್ಕೆ ಇಂಧನ ಇಲಾಖೆ ಗುರಿಯಾಗಿದೆ.

ಸ್ಮಾರ್ಟ್ ಮೀಟರ್ ಅಳವಡಿಕೆಯ ಟೆಂಡರ್‌ನಲ್ಲಿ ಭಾರಿ ಅಕ್ರಮವಾಗಿದೆ ಎಂದು ವಿರೋಧ ಪಕ್ಷ ಬಿಜೆಪಿಯು, ವಿಧಾನಸಭೆ ಅಧಿವೇಶನದಲ್ಲೇ ಗಂಭೀರ ಆರೋಪ ಮಾಡಿತ್ತು. ಇದಕ್ಕೆ ಪ್ರತಿಕ್ರಿಯಿಸಿದ್ದ ಇಂಧನ ಇಲಾಖೆ, 'ಕೇಂದ್ರ ಸರ್ಕಾರದ ನಿಯಮಗಳಂತಯೇ ಗುತ್ತಿಗೆ ನೀಡಲಾಗಿದೆ' ಎಂದಿತ್ತು. 'ಕೇಂದ್ರದ ನಿಯಮಗಳಿಗೆ ವ್ಯತಿರಿಕ್ತವಾದ ಷರತ್ತುಗಳನ್ನು ಬೆಸ್ಕಾಂ ರೂಪಿಸಿದೆ' ಎಂಬುದನ್ನು ಟೆಂಡರ್ ದಾಖಲೆಗಳೇ ಹೇಳುತ್ತವೆ.

ಅರ್ಹ ಕಂಪನಿಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ನಿರ್ಬಂಧಿಸಿ, ಒಬ್ಬರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿಯೇ ನಿಯಮಗಳನ್ನು ಬದಲಿಸಲಾಗಿದೆ ಎಂಬುದು ವಿರೋಧ ಪಕ್ಷಗಳ ಆರೋಪ.

9ನೇ ಪುಟ ನೋಡಿ

ಪೂರೈಕೆಗೆ 5 ಕಂಪನಿ

ಸ್ಮಾರ್ಟ್ ಮೀಟರ್ ವ್ಯವಸ್ಥೆಯು ಬಹುತೇಕ ಸ್ಮಾರ್ಟ್‌ಫೋನ್‌ನಂತೆಯೇ ಕೆಲಸ ಮಾಡುತ್ತದೆ. ಸ್ಮಾರ್ಟ್ ಮೀಟರ್ ಒಂದು ಉಪಕರಣವಾದರೆ, ಅದು ಕಾರ್ಯನಿರ್ವಹಿಸಲು ಹಲವು ತಂತ್ರಾಂಶಗಳ (ಸ್ಮಾರ್ಟ್‌ಫೋನ್ ಅಪ್ಲಿಕೇಷನ್‌ಗಳು) ಅಗತ್ಯ ಇದೆ. ಈ ಎಲ್ಲವನ್ನೂ ಒಂದೇ ಕಂಪನಿ ಪೂರೈಸುವುದಿಲ್ಲ.

ಸ್ಮಾರ್ಟ್ ಮೀಟರ್ ಯೋಜನೆಯ ಇಡೀ ಗುತ್ತಿಗೆಯನ್ನು ದಾವಣಗೆರೆಯ ಕಂಪನಿಗೆ ನೀಡಲಾಗಿದೆ. ಸ್ಮಾರ್ಟ್ ಮೀಟರ್ ಪೂರೈಕೆಗೆ ಮೂರು ಕಂಪನಿಗಳನ್ನು (ಜೀನಸ್, ಶಿಂಡರ್ ಮತ್ತು ಎಚ್‌ಪಿಎಲ್) ಆಯ್ಕೆ ಮಾಡಲಾಗಿದೆ. ಸ್ಮಾರ್ಟ್ ಮೀಟರ್ ತಂತ್ರಾಂಶ, ಮೀಟರ್ ದತ್ತಾಂಶ ನಿರ್ವಹಣಾ ತಂತ್ರಾಂಶ, ಮೀಟರ್-ಮೊಬೈಲ್ ಸಂಪರ್ಕ ತಂತ್ರಾಂಶ ಮತ್ತು ಇವೆಲ್ಲವನ್ನೂ ಪರಸ್ಪರ ಸಂಯೋಜಿಸುವ ವ್ಯವಸ್ಥೆ ಪೂರೈಕೆಗೆ ಎರಡು ಕಂಪನಿಗಳನ್ನು (ಜೀನಸ್ ಮತ್ತು ಬಿಸಿಐಟಿಎಸ್) ಆಯ್ಕೆ ಮಾಡಲಾಗಿದೆ. ದಾವಣಗೆರೆಯ ಕಂಪನಿ ಇವೆಲ್ಲವನ್ನೂ ನಿರ್ವಹಣೆ ಮಾಡುತ್ತದೆ.

ಅನುಕೂಲ ಮಾಡಿಕೊಟ್ಟ ಷರತ್ತುಗಳು

ಬೆಸ್ಕಾಂನ ಟೆಂಡರ್ ನಿಯಮ (ಆವರಣದಲ್ಲಿ ಇರುವುದು ಕೇಂದ್ರದ ನಿಯಮ)	ಗುತ್ತಿಗೆ ಪಡೆದುಕೊಂಡ, ಪೂರೈಕೆಗೆ ಆಯ್ಕೆಯಾದ ಕಂಪನಿಗಳಿಗೆ ಅನುಕೂಲ
● ಬಿಡ್ ಸಲ್ಲಿಸುವ ಕಂಪನಿಗೆ ರಾಜ್ಯದಲ್ಲಿ ವಿದ್ಯುತ್ ಮೀಟರ್ ಮಾರಾಟ ಮಳಿಗೆಗಳನ್ನು ತೆರೆದು ಐದು ವರ್ಷ ವಹಿವಾಟು ನಡೆಸಿದ ಅನುಭವ ಇರಬೇಕು (ಕೇಂದ್ರದ ನಿಯಮದಲ್ಲಿ ಈ ಷರತ್ತು ಇಲ್ಲ)	● ಬಿಡ್‌ಪೂರ್ವ ಸಭೆಯಲ್ಲಿ ಭಾಗವಹಿಸಿದ್ದ ಕಂಪನಿಗಳಿಗೆ ಈ ಅನುಭವ ಇರಲಿಲ್ಲ. ಗುತ್ತಿಗೆ ಪಡೆದುಕೊಂಡ ದಾವಣಗೆರೆಯ ಕಂಪನಿಯು ರಾಜ್ಯದ ಹಲವೆಡೆ ವಿದ್ಯುತ್ ಪೂರೈಕೆ ಉಪಕರಣ, ಮೀಟರ್ ಮಳಿಗೆಗಳನ್ನು ಹೊಂದಿದ್ದು, ಅದಕ್ಕಷ್ಟೇ ಅನುಕೂಲವಾಗಿದೆ
● ಮೀಟರ್, ತಂತ್ರಾಂಶ, ಬಿಲ್ಲಿಂಗ್ ವ್ಯವಸ್ಥೆ ಪೂರೈಸುವ ಕಂಪನಿ ಭಾರತದಲ್ಲಿ ಕಾರ್ಯನಿರ್ವಹಿಸಿರಬೇಕು (ಜಾಗತಿಕ ಕಂಪನಿಯೂ ಭಾಗವಹಿಸಬಹುದು: ಕೇಂದ್ರ)	● ಜಾಗತಿಕ ಮಟ್ಟದ ಕಂಪನಿಗಳ ಎಂಬ ಷರತ್ತು ಕೈಬಿಟ್ಟ ಕಾರಣ, ಜೀನಸ್ ಪವರ್ ಮತ್ತು ಬಿಸಿಐಟಿಎಸ್‌ಗೆ ಅನುಕೂಲವಾಯಿತು. ಒಟ್ಟು ಐದು ಷರತ್ತುಗಳಲ್ಲಿ ಈ ಅಂಶವನ್ನು ಕೈಬಿಡಲಾಗಿದೆ
● ಮೀಟರ್-ಮೊಬೈಲ್ ಸಂಪರ್ಕಕ್ಕೆ ರೇಡಿಯೊ ಫ್ರೀಕ್ವೆನ್ಸಿ ಮತ್ತು ಸೆಲ್ಯುಲಾರ್ ತಂತ್ರಾಂಶ ಎರಡನ್ನೂ ಪೂರೈಸಿರುವ ಅನುಭವ ಇರಬೇಕು (ಕೇಂದ್ರದಲ್ಲಿ ಈ ಷರತ್ತಿಲ್ಲ)	● ಬೆಂಗಳೂರಿನ ಜೀನಸ್ ಪವರ್ ಮತ್ತು ಬಿಸಿಐಟಿಎಸ್‌ಗೆ ಮಾತ್ರ ಈ ಅನುಭವ ಇದ್ದು, ಇತರ ಕಂಪನಿಗಳು ಹೊರಗುಳಿಯುವಂತಾಯಿತು
● ಕನಿಷ್ಠ 2 ಲಕ್ಷ ಸ್ಮಾರ್ಟ್ ಮೀಟರ್‌ಗಳಿಗೆ ತಂತ್ರಾಂಶ ಸಂಯೋಜನಾ ವ್ಯವಸ್ಥೆ ಅಳವಡಿಸಿದ ಅನುಭವ ಇರಬೇಕು (ಕೇಂದ್ರದ ನಿಯಮದಲ್ಲಿ ಈ ಷರತ್ತು ಇಲ್ಲ)	● ಇತರ ರಾಜ್ಯಗಳಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆ ಗುತ್ತಿಗೆ ಪಡೆದಿದ್ದ ಬಿಸಿಐಟಿಎಸ್‌ಗೆ ಮಾತ್ರ ಈ ಅನುಭವ ಇದ್ದು, ಇತರ ಕಂಪನಿಗಳು ಅನರ್ಹಗೊಂಡವು
● 2 ಲಕ್ಷ ಸ್ಮಾರ್ಟ್ ಮೀಟರ್‌ಗಳಿಗೆ ರೇಡಿಯೊ ಫ್ರೀಕ್ವೆನ್ಸಿ ಮತ್ತು ಸೆಲ್ಯುಲಾರ್ ತಂತ್ರಾಂಶ ಅಳವಡಿಸಿದ ಅನುಭವ ಇರಬೇಕು (50,000 ಸ್ಮಾರ್ಟ್ ಮೀಟರ್‌ಗಳಿಗೆ ತಂತ್ರಾಂಶ ಅಳವಡಿಸಿದ್ದರೆ ಸಾಕು: ಕೇಂದ್ರ)	● ಜೀನಸ್ ಪವರ್ ಮತ್ತು ಬಿಸಿಐಟಿಎಸ್‌ಗೆ ಮಾತ್ರ ಈ ಅನುಭವ ಇದ್ದು, ಇತರ ಕಂಪನಿಗಳು ಬಿಡ್‌ನಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ

ಭೋವಿ ನಿಗಮ ಅಕ್ರಮ ಹಿಂದಿನ ಎಂ.ಡಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದಲ್ಲಿ, ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಬಿ.ಕೆ.ನಾಗರಾಜಪ್ಪ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) 14 ದಿನಗಳ ಕಸ್ಟಡಿಗೆ ಪಡೆದಿದೆ.

2018-2023ರ ಅವಧಿಯಲ್ಲಿ ನಿಗಮದ ಖಾತೆಯಿಂದ ಅಕ್ರಮವಾಗಿ ₹97 ಕೋಟಿ ವರ್ಗಾವಣೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಸಿಐಡಿ ತನಿಖೆ ನಡೆಸುತ್ತಿದ್ದು, ಇ.ಡಿ ಸಹ ತನಿಖೆ ಆರಂಭಿಸಿದೆ. ಭೋವಿ ನಿಗಮದ ಕಚೇರಿ, ನಾಗರಾಜಪ್ಪ ಮತ್ತು ಅವರ ಆಪ್ತರ ಮನೆಗಳಲ್ಲಿ ಇದೇ ಶುಕ್ರವಾರ ಇ.ಡಿ ಅಧಿಕಾರಿಗಳು ಶೋಧ ಆರಂಭಿಸಿದ್ದರು.

ನಾಗರಾಜಪ್ಪ

'ನಾಗರಾಜಪ್ಪ ಅವರನ್ನು ಶನಿವಾರ ಸಂಜೆ ವಶಕ್ಕೆ ಪಡೆದು, ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು. ವಿಚಾರಣೆಗಾಗಿ ಅವರನ್ನು 14 ದಿನಗಳವರೆಗೆ ಕಸ್ಟಡಿಗೆ ಪಡೆಯಲಾಯಿತು' ಎಂದು ಇ.ಡಿ ತಿಳಿಸಿದೆ.

'ನಿಗಮದ ಹಣ ದುರ್ಬಳಕೆ ಸಂಬಂಧ ಕರ್ನಾಟಕ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಅದರ ಆಧಾರದಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು. ಹಣ ದುರ್ಬಳಕೆ ಮತ್ತು ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ನಾಗರಾಜಪ್ಪ ಅವರದ್ದೇ ಪ್ರಮುಖ ಪಾತ್ರ ಎಂಬುದನ್ನು ಪುಷ್ಟೀಕರಿಸುವ ದಾಖಲೆಗಳು ಪತ್ತೆಯಾಗಿವೆ' ಎಂದು ತಿಳಿಸಿದೆ.

'ಫಲಾನುಭವಿಗಳ ಹೆಸರಿನಲ್ಲಿ ನಾಗರಾಜಪ್ಪ ತಾನೇ ಬ್ಯಾಂಕ್ ಖಾತೆ ತೆರೆದು, ಅವುಗಳಿಗೆ ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ. ವಿವಿಧ ಯೋಜನೆ ಅಡಿ ತಮ್ಮ ಪಾಲುದಾರಿಕೆ ಇರುವ ಕಂಪನಿಗಳಿಗೆ ಹಣ ವರ್ಗಾವಣೆ ಮಾಡಿದ್ದಾರೆ' ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ.

ಇ.ಡಿ ಹೇಳಿದ್ದು

- ಇನ್ನೂ ಕೆಲ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗಿ ಶಂಕೆ
- ಸಂಬಂಧಿಸಿದ ದಾಖಲೆಗಳನ್ನು ಕಲೆ ಹಾಕಲಾಗಿದೆ
- ಮತ್ತಷ್ಟು ಮಂದಿ ವಿಚಾರಣೆಗೆ ನಿರ್ಧಾರ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಭಕ್ತಿ ಪರಾಕಾಷ್ಠೆ: ದ್ವಾರಕೆ ಪ್ರವೇಶಿಸಿದ ಅನಂತ

ಭಾನುವಾರ, ರಾಮನವಮಿಯಂದು ಅನಂತ ಅಂಬಾನಿ ಅವರು ಪವಿತ್ರ ನಗರ ದ್ವಾರಕೆಯನ್ನು ಪ್ರವೇಶಿಸಿದರು. ಜಾಮ್‌ನಗರದಿಂದ ದ್ವಾರಕೆವರೆಗೆ ಸುಮಾರು 180 ಕಿ.ಮೀ ಪಾದಯಾತ್ರೆಯನ್ನು ಕೈಗೊಳ್ಳಬೇಕೆಂಬ ತಮ್ಮ ಶಪಥವನ್ನು ಪೂರ್ಣಗೊಳಿಸಿದರು. ವಿಶೇಷ ಏನೆಂದರೆ, ಹಿಂದೂ ಧಾರ್ಮಿಕ ಪಂಚಾಂಗದ ಪ್ರಕಾರ ರಾಮನವಮಿಯ ದಿನವೇ ಅನಂತ ಅಂಬಾನಿ ಅವರ ಜನ್ಮದಿನವೂ ಆಗಿದೆ.

ಪಾದಯಾತ್ರೆಯು ಅನಂತ ಅವರ ಆಧ್ಯಾತ್ಮಿಕ ಅನ್ವೇಷಣೆಯಾಗಿತ್ತೇ ವಿನಃ ವ್ಯಾವಹಾರಿಕ ಸಮಾರಂಭ ಆಗಿರಲಿಲ್ಲ. ಮಾರ್ಚ್ 29ರಿಂದ ಅವರು ತಮ್ಮ ಪಾದಯಾತ್ರೆಯನ್ನು ಆರಂಭಿಸಿ, ಪ್ರತಿದಿನ 12ರಿಂದ 15 ಕಿ.ಮೀ ನಡೆದರು.

ಪಾದಯಾತ್ರೆಯು ನಮ್ಮ ಇಡೀ ದೇಹವನ್ನು, ಮನಸ್ಸನ್ನು ಕೃಷ್ಣನಿಗೆ ಅರ್ಪಿಸುವ ಸಂಪೂರ್ಣ ಆಧ್ಯಾತ್ಮದ ಪ್ರಕ್ರಿಯೆಯಾಗಿತ್ತು. ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನಂತ ಅವರು ದ್ವಾರಕಾಧೀಶನಿಗೆ ಮತ್ತು ಸನಾತನ ಧರ್ಮದ ಆದರ್ಶಗಳಿಗೆ ಶರಣಾಗುತ್ತಿದ್ದರು. ಅನಂತ ಅವರಿಗೆ ಪಾದಯಾತ್ರೆಯು ಅಚಲತೆ, ಏಕಾಂತ ಮತ್ತು ಬೆವರಿನಲ್ಲಿ ದೈವತ್ವವನ್ನು ಕಂಡುಕೊಳ್ಳುವ ಪ್ರಕ್ರಿಯೆಯಾಗಿತ್ತು. ಪಾದಯಾತ್ರೆ ಅವರಿಗೆ ಪ್ರಚಾರವಾಗಿರಲಿಲ್ಲ.

ಎಂಥಾ ಬಲಶಾಲಿ ವ್ಯಕ್ತಿಯನ್ನೂ ಪಾದಯಾತ್ರೆಯು ಬಳಲುವಂತೆ ಮಾಡುತ್ತದೆ. ಅದರಲ್ಲಿಯೂ ಹಾರ್ಮೋನ್ ಸಮಸ್ಯೆಯಿಂದ ಉಂಟಾಗುವ 'ಕುಶಿಂಗ್ ಸಿಂಡ್ರೋಮ್' (ತೀವ್ರ ಸ್ಥೂಲಕಾಯ ಸಮಸ್ಯೆ), ಅಸ್ತಮಾ ಮತ್ತು ಫೈಬ್ರೋಸಿಸ್‌ನಂಥ ಗಂಭೀರ ರೋಗಗಳಿಂದ ಬಳಲುತ್ತಿರುವಾಗ ಪಾದಯಾತ್ರೆಯು ಇನ್ನಷ್ಟು ಕಠಿಣವಾಗುತ್ತದೆ.

ಹಾಗಿದ್ದರೂ ಅನಂತ ಅವರಿಗೆ ತಮ್ಮ ಶಕ್ತಿಯನ್ನು ಪ್ರದರ್ಶನ ಮಾಡಿಕೊಳ್ಳುವ ಪ್ರಕ್ರಿಯೆ ಇದಾಗಿರಲಿಲ್ಲ. ಅನಂತ ಅವರಿಗೆ ಈ ಪಾದಯಾತ್ರೆಯು ಭಯವನ್ನು ಹತ್ತಿಕ್ಕಿ ಭರವಸೆಯನ್ನು ಸಾಧಿಸುವ, ತೊಂದರೆಗಳನ್ನು ಮೀರಿ ಭಕ್ತಿ ಮೆರೆಯುವ, ಸುಖವನ್ನು ತ್ಯಜಿಸಿ ಶಿಸ್ತು ಸಾಧಿಸುವ ನಡಿಗೆಯಾಗಿತ್ತು.

ಇದೊಂದು ಏಕಾಂತದ ಅನ್ವೇಷಣೆ. ತೀರಾ ಹತ್ತಿರದವರು, ಆಧ್ಯಾತ್ಮ ಮಾರ್ಗದರ್ಶಕರನ್ನು ಬಿಟ್ಟು ಪಾದಯಾತ್ರೆಯಲ್ಲಿ ಅನಂತ ಅವರೊಂದಿಗೆ ಬೇರೆಯಾರೂ ಇರಲಿಲ್ಲ. ಯಾವುದೇ ಕ್ಯಾಮೆರಾ ಇರಲಿಲ್ಲ, ಮಾಧ್ಯಮಗಳ ವರದಿಗಾರಿಕೆ ಇರಲಿಲ್ಲ, ಸಾಮಾಜಿಕ ಮಾಧ್ಯಮಗಳ ಪ್ರಚಾರ ಇರಲಿಲ್ಲ. ಅಲ್ಲಿ ಇದ್ದದ್ದು ಹೆಜ್ಜೆ ಸಪ್ಪಳ, ಅಚಲ ನಂಬಿಕೆಯ ಮೆಲುದನಿಯಷ್ಟೆ.

ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಅನಂತ ಅಂಬಾನಿ ಕುಟುಂಬ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ನಡಿಗೆ ಹೊಗಳಿಕೆಗಲ್ಲ; ಶಾಂತಿಗಾಗಿ

ಶಬ್ದವೇ ತುಂಬಿರುವ, ಅಂತ್ಯವೇ ಕಾಣದಷ್ಟಿರುವ ಚಿತ್ತಭ್ರಮಣೆ, ಮೌಲ್ಯಗಳು ಅಪಮೌಲ್ಯಗಳಾಗುತ್ತಿರುವ ಈ ಜಗತ್ತಿನಲ್ಲಿ, ಅನಂತ ಅಂಬಾನಿ ಅವರದ್ದು ಅತ್ಯಂತ ಸ್ಪಷ್ಟತೆಯುಳ್ಳ, ಎದೆಗಾರಿಕೆ ಮತ್ತು ಅಚಲ ನಿರ್ಧಾರದ ನಡಿಗೆಯಾಗಿತ್ತು. ಅನಂತ ಅವರ ನಡಿಗೆಯು ಸಂಪ್ರದಾಯವಾಗಿರಲಿಲ್ಲ. ಅಥವಾ ಅದೊಂದು ಧಾರ್ಮಿಕ ಆಚರಣೆಯೂ ಆಗಿರಲಿಲ್ಲ. ಆದರೆ, ಅದೊಂದು ಜವಾಬ್ದಾರಿಯಾಗಿತ್ತು. ತನಗೆ ತಾನೇ ವಿಧಿಸಿಕೊಳ್ಳುವ ಹೊಣೆಗಾರಿಕೆ.

ಪ್ರತಿನಿತ್ಯವೂ ನಡೆಯುವುದು, ಕಠಿಣ ಮಾರ್ಗವನ್ನೇ ಆಯ್ದುಗೊಳ್ಳುವುದು- ಇದು ಪ್ರಚಾರ ಪಡೆಯಲು, ಹೊಗಳಿಕೆ ಗಳಿಸಲು ಆಗಿರಲಿಲ್ಲ. ಬದಲಿಗೆ ಶಾಂತಿ ಹೊಂದುವುದಾಗಿತ್ತು. ಜಗತ್ತಿಗೆ ಏನನ್ನೋ ಸಾಧಿಸಿ ತೋರಿಸುವ ಆಕಾಂಕ್ಷೆ ಇರಲಿಲ್ಲ. ಬದಲಿಗೆ ದೇವರಿಗೆ ಭಕ್ತಿಯನ್ನು ಧಾರೆ ಎರೆಯುವುದಾಗಿತ್ತು.

'ಭಕ್ತಿಯೇ ಮುನ್ನಡೆಸಲಿ'

ನೋವಿನಲ್ಲಿಯೂ ನಡೆಯುತ್ತೇನೆ, ಕೃತಜ್ಞತೆ ಸಲ್ಲಿಸಲು. ಕಷ್ಟಗಳನ್ನು ಸಹಿಸಿಕೊಳ್ಳುತ್ತೇನೆ, ನನ್ನ ಭಕ್ತಿಯನ್ನು ತೋರಿಸುವುದಕ್ಕಾಗಿ. ನಾನು ತಲೆಬಾಗುತ್ತೇನೆ, ನಾನು ದುರ್ಬಲ ಎನ್ನುವುದಕ್ಕಾಗಿ ಅಲ್ಲ. ಅಹಂಕಾರವನ್ನು ತೊರೆದು, ನಾನು ನಂಬಿಕೆ ಇಟ್ಟು ದೇವರ ಮುಂದೆ ತಲೆಬಾಗುತ್ತೇನೆ. ನಿಮ್ಮ ಭಕ್ತಿಯೇ ನಿಮ್ಮನ್ನು ಮುನ್ನಡೆಸಲಿ. ಭಕ್ತಿ ನಿಮ್ಮನ್ನು ವಿನಮ್ರವಾಗಿಸಲಿ.

ಅನಂತ ಅಂಬಾನಿ

ಬಿಜೆಪಿ ಜನಾಕ್ರೋಶ ಯಾತ್ರೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಮತ್ತು ಬೆಲೆ ಏರಿಕೆ ವಿಪರೀತವಾಗಿದೆ ಎಂದು ಆರೋಪಿಸಿ ಬಿಜೆಪಿ ಆಯೋಜಿಸಿರುವ 16 ದಿನಗಳ ಜನಾಕ್ರೋಶ ಯಾತ್ರೆಯು ಸೋಮವಾರ ಮೈಸೂರಿನಲ್ಲಿ ಆರಂಭವಾಗಲಿದೆ.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, 'ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಚಾಮುಂಡಿ ಬೆಟ್ಟದಲ್ಲಿ ಪೂಜೆ ಸಲ್ಲಿಸುವ ಮೂಲಕ ಯಾತ್ರೆಗೆ ಚಾಲನೆ ನೀಡಲಿದ್ದಾರೆ. ಒಟ್ಟು ನಾಲ್ಕು ಹಂತಗಳಲ್ಲಿ ಯಾತ್ರೆ ನಡೆಯಲಿದೆ. ಏಪ್ರಿಲ್ 7ರಿಂದ 10ರವರೆಗೆ ಮೊದಲ ಹಂತದಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು, ಮಂಗಳೂರು, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಯಾತ್ರೆ ನಡೆಯಲಿದೆ' ಎಂದರು.

'ಏಪ್ರಿಲ್ 13ರಿಂದ 18ರವರೆಗೆ ಎರಡನೇ ಹಂತದಲ್ಲಿ ಶಿವಮೊಗ್ಗ, ಉತ್ತರ ಕನ್ನಡ, ಬೀದರ್, ಕಲಬುರಗಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಹುಬ್ಬಳ್ಳಿಯಲ್ಲಿ ಯಾತ್ರೆ ನಡೆಯಲಿದೆ' ಎಂದು ಮಾಹಿತಿ ನೀಡಿದರು.

'ಏಪ್ರಿಲ್ 21ರಿಂದ 24ರವರೆಗೆ ಮೂರನೇ ಹಂತದಲ್ಲಿ ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ಕೊಪ್ಪಳ, ಗದಗ, ಹಾವೇರಿ, ದಾವಣಗೆರೆ ಹಾಗೂ ಏಪ್ರಿಲ್ 27ರಿಂದ ಮೇ 3ರವರೆಗೆ ನಾಲ್ಕನೇ ಹಂತದಲ್ಲಿ ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ ಯಾತ್ರೆ ಸಾಗಲಿದೆ' ಎಂದು ವಿವರಿಸಿದರು.

ಛಲವಾದಿ ನಾರಾಯಣಸ್ವಾಮಿ, ಆರ್.ಅಶೋಕ ಯಾತ್ರೆಯ ಪೋಸ್ಟರ್ ಬಿಡುಗಡೆ ಮಾಡಿದರು

ರಾಜ್ಯದಲ್ಲಿ ಬೆಲೆ ಏರಿಕೆ, ಮುಸ್ಲಿಂ ತುಷ್ಟೀಕರಣ ಹೆಚ್ಚಾಗಿದೆ. ವಿರೋಧ ಪಕ್ಷಗಳ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಇವೆಲ್ಲದರ ವಿರುದ್ಧ ನಮ್ಮ ಜನಾಕ್ರೋಶ

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ತಮ್ಮ ಅಸ್ತಿತ್ವ ತೋರಿಸಿಕೊಳ್ಳಲು ವಿರೋಧ ಪಕ್ಷದವರು ಜನಾಕ್ರೋಶ ಯಾತ್ರೆ ಮಾಡುತ್ತಿದ್ದಾರೆ. ಆದರೆ, ಜನರಿಗೆ ಆಕ್ರೋಶವಿಲ್ಲ. ಅವರಿಗೆ ಗ್ಯಾರಂಟಿಗಳಿಂದ ನೆಮ್ಮದಿ ಸಿಕ್ಕಿದೆ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಬಾಲಕನಿಗೆ ಚಿತ್ರಹಿಂಸೆ 9 ಜನರ ಬಂಧನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕಳವು ಆರೋಪ ಎದುರಿಸುತ್ತಿದ್ದ ಬಾಲಕನನ್ನು ಅರೆಬೆತ್ತಲೆಗೊಳಿಸಿ, ಅಡಿಕೆ ಮರಕ್ಕೆ ಕಟ್ಟಿಹಾಕಿ, ಕೆಂಪಿರುವೆ ಬಿಟ್ಟು ಚಿತ್ರಹಿಂಸೆ ನೀಡಿದ್ದ 9 ಜನರನ್ನು ಚನ್ನಗಿರಿ ಠಾಣೆಯ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಚನ್ನಗಿರಿ ತಾಲ್ಲೂಕಿನ ಅಸ್ತಾಪನಹಳ್ಳಿಯ ಸುಭಾಷ್ (21), ಲಕ್ಕಿ (21), ಪರಶು (25), ದರ್ಶನ್ (22), ಶಿವದರ್ಶನ್ (20), ಹರೀಶ್ (25), ರಾಜು (25), ಭೋಣಿ (18) ಹಾಗೂ ಸುಧನ್ (32) ಬಂಧಿತರು.

ಮನೆಗೆ ನುಗ್ಗಿ ಕಳವು ಮಾಡಲು ಯತ್ನಿಸಿದ ಆರೋಪದ ಮೇರೆಗೆ 17 ವರ್ಷದ ಬಾಲಕನನ್ನು ಹಿಡಿದಿದ್ದ ಗ್ರಾಮಸ್ಥರು ಅಡಿಕೆ ಮರಕ್ಕೆ ಕಟ್ಟಿ ಏ.2ರಂದು ಹಲ್ಲೆ ನಡೆಸಿದ್ದರು. ಬಾಲಕನಿಗೆ ಥಳಿಸುವ ಹಾಗೂ ಕೆಂಪು ಇರುವೆ ಬಿಟ್ಟು ಚಿತ್ರಹಿಂಸೆ ನೀಡುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಬಾಲಕನ ತಾತ ದೂರು ನೀಡಿದ್ದು ಅಮಾನವೀಯವಾಗಿ ವರ್ತಿಸಿದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಶವಾಗಾರ ಕೊಠಡಿ ಸಮಸ್ಯೆ ● ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಇಂಥದ್ದೇ ಸ್ಥಿತಿ

ಬಯಲಿನಲ್ಲಿಯೇ ಮರಣೋತ್ತರ ಪರೀಕ್ಷೆ?

● ಶ್ರೀನಿಧಿ ಆರ್.

ಧಾರವಾಡ: ರಾಜ್ಯದ ಶೇ 50ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ (ಪಿಎಚ್‌ಸಿ) ಶವಾಗಾರ ಕೊಠಡಿಗಳಿಲ್ಲ. ಮರಣೋತ್ತರ ಪರೀಕ್ಷೆ ಮಾಡಲು ವೈದ್ಯಾಧಿಕಾರಿಗಳು ಸಮಸ್ಯೆ ಎದುರಿಸುತ್ತಿದ್ದು, ಆಸ್ಪತ್ರೆಯ ಹೊರಗಿನ ಬಯಲು ಜಾಗ ಇಲ್ಲವೇ ಹೊಲಗಳಲ್ಲಿ ಮರಣೋತ್ತರ ಪರೀಕ್ಷೆ ಮಾಡುವಂತಹ ಸ್ಥಿತಿ ಎದುರಾಗಿದೆ.

ಬಾಗಲಕೋಟೆ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯೊಬ್ಬರು ಕಳೆದ 12 ತಿಂಗಳಲ್ಲಿ ಅರ್ಧ ಡಜನ್‌ಗೂ ಹೆಚ್ಚು ಮರಣೋತ್ತರ ಪರೀಕ್ಷೆಯನ್ನು ಮೈದಾನದಲ್ಲಿಯೇ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ.

1990ರ ಮುಂಚೆ ನಿರ್ಮಿಸಲಾದ 650 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಶವಾಗಾರ ಕೊಠಡಿಗಳನ್ನು ಹೊಂದಿವೆ. ಆದರೆ, ಅವು ಕಾರ್ಯ ನಿರ್ವಹಿಸುತ್ತಿಲ್ಲ. ನಂತರ ನಿರ್ಮಿಸಲಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೌಲಭ್ಯಗಳಿಲ್ಲ. ಮರಣೋತ್ತರ ಪರೀಕ್ಷೆಗೆ ಕೊಠಡಿ ಇಲ್ಲ. ಉತ್ತರ ಕರ್ನಾಟಕ ಭಾಗದಲ್ಲಿ ಈ ಸಮಸ್ಯೆ ತೀವ್ರವಾಗಿದ್ದು, ಇಲ್ಲಿನ ಕೆಲ ಜಿಲ್ಲೆಗಳಲ್ಲಿನ ನಾಲ್ಕು ಅಥವಾ ಆರು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಒಂದರಲ್ಲಿ ಮಾತ್ರ ಶವಾಗಾರ ಕೊಠಡಿಯಿದೆ.

'ಧಾರವಾಡ ಜಿಲ್ಲೆಯಲ್ಲಿ ಒಂದು ತಿಂಗಳಲ್ಲಿ ಅಸಹಜ ಸಾವುಗಳಿಗೆ ಸರಾಸರಿ 20 ಮರಣೋತ್ತರ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಅವುಗಳಲ್ಲಿ ಸುಮಾರು 14 ಜಿಲ್ಲಾ ಆಸ್ಪತ್ರೆಯಲ್ಲಿ ನಡೆಯುತ್ತವೆ. ಆದರೆ ಜಿಲ್ಲಾ ಆಸ್ಪತ್ರೆಯ ವೈದ್ಯರು ಈಗ ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಮರಣೋತ್ತರ ಪರೀಕ್ಷೆ ಮಾಡಬೇಕೆಂದು ಒತ್ತಾಯಿಸುತ್ತಿದ್ದಾರೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಶಿ ಪಾಟೀಲ್ ಹೇಳಿದರು.

'ಧಾರವಾಡ ಜಿಲ್ಲೆಯಲ್ಲಿ ಸುಮಾರು 53 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು, ಅವುಗಳಲ್ಲಿ 50 ವರ್ಷಗಳ ಹಿಂದೆ ನಿರ್ಮಿಸಲಾದ 20 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಶವಾಗಾರ ಕೊಠಡಿಯನ್ನು ಹೊಂದಿವೆ. ಆದರೆ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇಂತಹ ಕೊಠಡಿ ಇಲ್ಲ. ಶವಾಗಾರವನ್ನು ಸ್ಥಾಪಿಸಲು ಆರೋಗ್ಯ ಇಲಾಖೆಯು ಜಿಲ್ಲಾ ಪಂಚಾಯಿತಿಯಿಂದ ಅನುದಾನ ಪಡೆದಿದ್ದು ಸರಾಸರಿ, ಒಂದು ವರ್ಷದಲ್ಲಿ ಒಂದು ಶವಾಗಾರವನ್ನು ನಿರ್ಮಿಸಲಾಗುತ್ತಿದೆ' ಎಂದು ಅವರು ಹೇಳಿದರು.

9ನೇ ಪುಟ ನೋಡಿ

ಮರಣೋತ್ತರ ಪರೀಕ್ಷೆಯ ವೆಚ್ಚವನ್ನು ಮೃತರ ಕುಟುಂಬದ ಸದಸ್ಯರಿಗೆ ವರ್ಗಾಯಿಸಬಾರದು. ಇಲಾಖೆಯೇ ಭರಿಸುತ್ತದೆ

ಶಿವಕುಮಾರ್ ಕೆ. ಬಿ., ಆಯುಕ್ತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಗ್ರಾಮೀಣ ಪ್ರದೇಶಗಳಲ್ಲಿ ಸಂಕಷ್ಟ

ಬೆಳಗಾವಿ ವಿಭಾಗ-59 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ 43 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶವಾಗಾರವಿಲ್ಲ, ಚಿಕ್ಕೋಡಿ ವಿಭಾಗ-80 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 57ರಲ್ಲಿ ಶವಾಗಾರವಿಲ್ಲ. ಧಾರವಾಡ ಜಿಲ್ಲೆ-53 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 33 ಕೇಂದ್ರಗಳಲ್ಲಿ ಶವಾಗಾರವಿಲ್ಲ. ಈ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೊಲಗಳಲ್ಲಿ ಮರಣೋತ್ತರ ಪರೀಕ್ಷೆ ನಡೆಸುವ ಪ್ರಕರಣಗಳು ಹೆಚ್ಚಿವೆ. ಇನ್ನೂ ಕೆಲವೆಡೆ ವೈದ್ಯರು ಪರೀಕ್ಷೆಗಾಗಿ ದೇಹವನ್ನು ತಾಲ್ಲೂಕು ಅಥವಾ ಜಿಲ್ಲಾ ಆಸ್ಪತ್ರೆಗೆ ಸ್ಥಳಾಂತರಿಸುತ್ತಾರೆ. ಹಲವೆಡೆ, ಮರಣೋತ್ತರ ಪರೀಕ್ಷೆ ಮಾಡಲು ವೈದ್ಯರು ಹಾಗೂ ತರಬೇತಿ ಪಡೆದ ಸಿಬ್ಬಂದಿ ಕೊರತೆ ಇರುವುದು ಕೂಡ ಸಮಸ್ಯೆಗೆ ಕಾರಣವಾಗಿದೆ.

ಜಯನಗರದ ಜಯರಾಮ ಸೇವಾ ಮಂಡಳಿಯಲ್ಲಿ ವಿಶೇಷ ಪೂಜೆ ನಡೆಯಿತು (ಎಡಚಿತ್ರ) ಹನುಮಂತನಗರದ ಶ್ರೀ ರಾಮಾಂಜನೇಯ ದೇವಸ್ಥಾನದ ಬಳಿ ಹೆಣ್ಣುಮಕ್ಕಳು ನೃತ್ಯದೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡರು ಪ್ರಜಾವಾಣಿ ಚಿತ್ರಗಳು

ವಿವಿಧೆಡೆ ರಥೋತ್ಸವ, ಪಾನಕ, ಕೋಸಂಬರಿ ವಿತರಣೆ • ದೇವಾಲಯಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ನಗರದಾದ್ಯಂತ ಸಂಭ್ರಮದ ರಾಮನವಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಕ್ತಿ, ಸಡಗರ, ಸಂಭ್ರಮದೊಂದಿಗೆ ನಗರದಾದ್ಯಂತ ಶ್ರೀರಾಮನವಮಿಯನ್ನು ಭಾನುವಾರ ಆಚರಿಸಲಾಯಿತು.

ದೇವಾಲಯಗಳಲ್ಲಿ ಶ್ರೀರಾಮ ಸ್ಮರಣೆಯೊಂದಿಗೆ ವಿಶೇಷ ಪೂಜೆ ಮತ್ತು ಅಭಿಷೇಕ ಕಾರ್ಯಕ್ರಮಗಳು ನಡೆದವು. ಅಲ್ಲಲ್ಲಿ ನಡೆದ ರಥೋತ್ಸವಗಳು ಹಬ್ಬದ ಸಂಭ್ರಮವನ್ನು ಹೆಚ್ಚಿಸಿದವು.

ಆಂಜನೇಯ ಹಾಗೂ ಶ್ರೀರಾಮ ದೇವಾಲಯಗಳನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಬೆಳಿಗ್ಗೆಯಿಂದಲೇ ದೇವಸ್ಥಾನಗಳಲ್ಲಿ ಭಕ್ತರು ಸಾಲಾಗಿ ನಿಂತು ದೇವರ ದರ್ಶನ ಪಡೆದರು. ಭಕ್ತರಿಗೆ ಪಾನಕ, ಕೋಸಂಬರಿ, ಮಜ್ಜಿಗೆ ವಿತರಿಸಲಾಯಿತು.

ಹಲವು ಸಂಘಟನೆಗಳು ನಗರದ ವಿವಿಧೆಡೆ ಆಯೋಜಿಸಿದ್ದ ಶ್ರೀರಾಮನ ಉತ್ಸವ ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಿತು. ಬಸವನಗುಡಿ, ಬನಶಂಕರಿ, ಮೈಸೂರು ರಸ್ತೆ ಸೇರಿದಂತೆ ವಿವಿಧೆಡೆ ಶಾಮಿಯಾನಗಳನ್ನು ಹಾಕಿ, ಶ್ರೀರಾಮನ ಭಾವಚಿತ್ರವಿಟ್ಟು ಪೂಜೆ ಸಲ್ಲಿಸಿ, ಪಾನಕ, ಕೋಸಂಬರಿ ವಿತರಿಸಲಾಯಿತು.

ಇಂದಿರಾನಗರ, ಮೈಸೂರು ರಸ್ತೆಯ ಗಾಳಿ ಆಂಜನೇಯಸ್ವಾಮಿ ದೇವಾಲಯದಲ್ಲಿ ರಥೋತ್ಸವ ನಡೆಯಿತು. ಇಂದಿರಾ ನಗರದಲ್ಲಿ ಪುಷ್ಪಾಲಂಕೃತ ವಾಹನಗಳಲ್ಲಿ ಉತ್ಸವಗಳು ನಡೆದವು. ಸಂಪಂಗಿರಾಮ ನಗರದಲ್ಲಿ ಶ್ರೀರಾಮದೇವರ ಭಾವಚಿತ್ರಕ್ಕೆ ವಿಶೇಷ ಅಲಂಕಾರ ಮಾಡಲಾಗಿತ್ತು. ಶ್ರೀರಾಮನ ಘೋಷಣೆಯೊಂದಿಗೆ ಹಬ್ಬ ಆಚರಿಸಿದರು. ರಾಮ, ಲಕ್ಷ್ಮಣ, ಸೀತೆ ವೇಷಧಾರಿ ಮಕ್ಕಳು ಗಮನ ಸೆಳೆದರು.

ರಾಜಾಜಿನಗರದ ಶ್ರೀರಾಮ ಮಂದಿರದಲ್ಲಿ ಇಡೀ ದಿನ ವಿಶೇಷ ಪೂಜೆಗಳು ನಡೆದವು. ಭಜನೆ, ರಥೋತ್ಸವವೂ ನಡೆಯಿತು. ಬೆಂಗಳೂರಿನ ರಂಗಪುತ್ಥಳಿ ತಂಡದಿಂದ ‘ಸೀತಾಪಹರಣ’ ತೊಗಲು ಬೊಂಬೆ ಯಾಟವನ್ನು ಪ್ರದರ್ಶಿಸಲಾಯಿತು.

ವಿಜಯನಗರದ ಮಾರುತಿ ಮಂದಿರದಲ್ಲಿ ಇಡೀ ದಿನ ವಿಶೇಷ ಪೂಜೆಗಳು, ರಥೋತ್ಸವ ನಡೆದವು. ನಗರದ ವಿವಿಧೆಡೆ ರಾಮನ ವೇಷಧಾರಿಗಳು ಸಹ ಪಾನಕ ವಿತರಿಸಿದರು. ರಾಮನಾಮ ಸಂಕೀರ್ತನೆ, ಭಜನೆ ನಡೆಸಿ ತಮ್ಮ ಭಕ್ತಿ ಮೆರೆದರು.

ರಾಜಾಜಿನಗರದ ಇಸ್ಕಾನ್ ದೇವಸ್ಥಾನದಲ್ಲಿ ರಾಮನವಮಿ ಅಂಗವಾಗಿ ಶ್ರೀಕೃಷ್ಣ ಬಲರಾಮರ ವಿಗ್ರಹಗಳನ್ನು ರಾಮ ಮತ್ತು ಲಕ್ಷ್ಮಣರಂತೆ ಅಲಂಕರಿಸಲಾಗಿತ್ತು.

ಮಲ್ಲೇಶ್ವರದ ಕೋದಂಡರಾಮಪುರದ ಕೋದಂಡರಾಮ ಭಜನಾ ಮಂದಿರ, ಯಶವಂತಪುರ ವೃತ್ತದಲ್ಲಿರುವ ದಾರಿ ಆಂಜನೇಯಸ್ವಾಮಿ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆಯ ಆಂಜನೇಯ ದೇವಸ್ಥಾನ, ರಾಗಿಗುಡ್ಡದ ಆಂಜನೇಯ ದೇವಾಲಯ ಸೇರಿದಂತೆ ನಗರದ ವಿವಿಧ ಆಂಜನೇಯ ದೇಗುಲಗಳು ಹಾಗೂ ರಾಮಮಂದಿರಗಳಲ್ಲಿ ವಿಶೇಷ ಪೂಜೆ, ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಬೆಳಿಗ್ಗೆಯಿಂದಲೇ ಜರುಗಿದವು. ವಿವಿಧ ದೇವಾಲಯಗಳಲ್ಲಿ ಸಂಗೀತೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ನಾಗದೇವನಹಳ್ಳಿಯ ವಿನಾಯಕ ಬಡಾವಣೆಯಲ್ಲಿ ಹಮ್ಮಿಕೊಂಡಿದ್ದ ಶ್ರೀರಾಮೋತ್ಸವ ಕಾರ್ಯಕ್ರಮಕ್ಕೆ ಬಿಜೆಪಿ ಮುಖಂಡ ಎನ್‌.ಸಿ.ಕುಮಾರ್ ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು

ಸಂಗೀತೋತ್ಸವದ ಮೆರುಗು

ಬ್ಯಾಟರಾಯನಪುರ ಕ್ಷೇತ್ರದ ಅಮೃತಹಳ್ಳಿಯ ಶ್ರೀರಾಮ ದೇವಾಲಯದಲ್ಲಿ ರಾಮನವಮಿಯ ಪ್ರಯುಕ್ತ ಸೀತಾರಾಮ, ಲಕ್ಷ್ಮಣ ಸಮೇತ ಆಂಜನೇಯ ದೇವರಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಅಮೃತಹಳ್ಳಿಯ ಶ್ರೀರಾಮ ದೇವಾಲಯದಲ್ಲಿ ರಾಮನವಮಿಯ ಪ್ರಯುಕ್ತ ವಿವಿಧ ಧಾರ್ಮಿಕ ಮತ್ತು ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಬೆಳಗ್ಗೆಯಿಂದಲೇ ಶ್ರೀರಾಮ ದೇವರಿಗೆ ಪಂಚಾಮೃತಾಭಿಷೇಕ, ವಿಶೇಷ ಹೂವಿನ ಅಲಂಕಾರ ಹಾಗೂ ಮಹಾಮಂಗಳಾರತಿ ಸೇರಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಭಕ್ತರಿಂದ ವಿಷ್ಣುಸಹಸ್ರನಾಮ ಪಾರಾಯಣ, ಶ್ರೀರಾಮ ಭಜನಾ ಮಂಡಳಿಯವರಿಂದ ಭಜನೆ, ಆರ್ಟ್ ಆಫ್ ಲಿವಿಂಗ್‌ನ ಗುರು ಕಿರಣ್ ರೆಡ್ಡಿ ಮಧು ಮತ್ತು ತಂಡದವರಿಂದ ಸತ್ಸಂಗ ಮತ್ತು ಭಜನೆ ನಡೆಯಿತು.

ಉಭಯ ಮಾರಮ್ಮ ಭಜನಾಮಂಡಳಿ ಮತ್ತು ಸೀತಾರಾಮ ಭಜನಾ ಮಂಡಳಿಯವರಿಂದ ಭಜನೆ, ಶ್ರೀರಾಮ ಸಂಗೀತ ಶಾಲೆಯ ವಿದ್ಯಾರ್ಥಿಗಳಿಂದ ಭಕ್ತಿ ಸಂಗೀತ ಹಾಗೂ ವಾಗ್ದೇವಿ ಸ್ಕೂಲ್ ಆಫ್ ಮ್ಯೂಸಿಕ್‌ನ ವಿದುಷಿ ಸೀತಾಲಕ್ಷ್ಮೀ ವೆಂಕಟೇಶ್ ಮತ್ತು ಶಿಷ್ಯರಿಂದ ದೇವರನಾಮಗಳ ಗಾಯನ ಏರ್ಪಡಿಸಲಾಗಿತ್ತು.

ಭಕ್ತರು ಬೆಳಿಗ್ಗೆಯಿಂದಲೇ ದೇವಸ್ಥಾನಕ್ಕೆ ಆಗಮಿಸಿ, ದೇವರ ದರ್ಶನ ಪಡೆದರು. ಸಂಜೆ ‘ಸೀತಾರಾಮರ ಕಲ್ಯಾಣೋತ್ಸವ’ ನೆರವೇರಿತು. ದೇವಾಲಯದ ಆವರಣದಲ್ಲಿ ಕೋಸಂಬರಿ, ಮಜ್ಜಿಗೆ, ಪಾನಕ ವಿತರಣೆಯ ಜೊತೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಈ ವೇಳೆ ಮಾತನಾಡಿದ ಶ್ರೀರಾಮಸೇವಾ ಪ್ರತಿಷ್ಠಾನ ಟ್ರಸ್ಟ್‌ನ ಸಂಸ್ಥಾಪನಾ ಅಧ್ಯಕ್ಷ ಎಂ.ಕೋದಂಡರಾಮ, 17ನೇ ವರ್ಷದ ಶ್ರೀರಾಮನವಮಿಯ ಪ್ರಯುಕ್ತ ಸೀತಾರಾಮರ ಕಲ್ಯಾಣೋತ್ಸವ, ರಥೋತ್ಸವ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಸೋಮವಾರ ಸಂಜೆ ಅಮೃತಹಳ್ಳಿಯ ಪ್ರಮುಖ ಬೀದಿಗಳಲ್ಲಿ ಸೀತಾರಾಮರ ರಥೋತ್ಸವ ಹಾಗೂ ಏಪ್ರಿಲ್ 8ರಿಂದ 15 ರವರೆಗೆ ಪ್ರತಿದಿನ ಸಂಜೆ 6.45ಕ್ಕೆ ಸಂಗೀತ ವಿದ್ವಾಂಸರಿಂದ ವಿವಿಧ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ಬೆಟ್ಟಿಂಗ್ ದಂಧೆ: ನಾಗರಿಕರಿಗೆ ಎಚ್ಚರಿಕೆ

ಬೆಂಗಳೂರು: ಐಪಿಎಲ್ ಪಂದ್ಯಗಳ ಸೋಗಿನಲ್ಲಿ ಬುಕ್ಕಿಗಳು ಬೆಟ್ಟಿಂಗ್ ದಂಧೆಯಲ್ಲಿ ನಿರತರಾಗಿದ್ದು, ಆನ್‌ಲೈನ್ ಮೂಲಕ ಲಿಂಕ್‌ಗಳನ್ನು ಕಳುಹಿಸಿ ಪ್ರಚೋದಿಸುತ್ತಿದ್ದಾರೆ. ಈ ಬಗ್ಗೆ ಎಚ್ಚರದಿಂದ ಇರುವಂತೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಸಾರ್ವಜನಿಕರಿಗೆ ಕಿವಿಮಾತು ಹೇಳಿದ್ದಾರೆ. ಬೆಟ್ಟಿಂಗ್ ಪ್ರೋತ್ಸಾಹಿಸುವ ವಾಟ್ಸ್‌ಆ್ಯಪ್ ಗ್ರೂಪ್‌ಗಳಿಗೆ ಸದಸ್ಯರಾಗದಿರಿ. ಅಪರಿಚಿತ ವ್ಯಕ್ತಿಗಳಿಗೆ ವೈಯಕ್ತಿಕ ವಿವರ ನೀಡಬಾರದು. ಆನ್‌ಲೈನ್ ಬೆಟ್ಟಿಂಗ್ ಕಾನೂನುಬಾಹಿರ ಹಾಗೂ ಅಪಾಯಕಾರಿ. 1930ಕ್ಕೆ ಕರೆ ಮಾಡಿ ಬೆಟ್ಟಿಂಗ್ ಬಗ್ಗೆ ಮಾಹಿತಿ ನೀಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 01/2025, ದಿನಾಂಕ: 03.04.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್8246681ಎ	ಸಿಎಎಂಸಿ ಯ ಸ್ಥಿತಿಯಲ್ಲಿರುವ ಅಡ್ವಾನ್ಸ್‌ಡ್ ಫೇಕೋ–ಎಮಲ್ಸಿಫಿಕೇಷನ್ ಮಶೀನ್‌ನ ಪೂರೈಕೆ. (ಪರಿಮಾಣ: 1 ನಂ.)

ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: 28.04.2025, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು / ಬೆಂಗಳೂರು

PUB/11/AAMO/PRB/SWR/2025-26

South Western Railway - SWR | SWRRLY | SWRRLY

ಟ್ರ್ಯಾಕ್ಟರ್ ಉರುಳಿ ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆ ಏರಿ ಮೇಲೆ ಚಲಿಸುತ್ತಿದ್ದ ಟ್ರ್ಯಾಕ್ಟರ್ ಉರುಳಿ ಬಿದ್ದ ಪರಿಣಾಮ 9 ವರ್ಷದ ಬಾಲಕಿ ಮೃತಪಟ್ಟಿರುವ ಘಟನೆ ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಇಸಿನಾಕಾ ಭಟ್ (9) ಮೃತ ಬಾಲಕಿ. ಘಟನೆಯಲ್ಲಿ ಚಾಲಕ ಹಾಗೂ ಆರು ವರ್ಷದ ಬಾಲಕಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

‘ಚಾಲಕ ತನ್ನ ಆರು ಮತ್ತು ಒಂಬತ್ತು ವರ್ಷದ ಮಕ್ಕಳನ್ನು ಟ್ರ್ಯಾಕ್ಟರ್ ನಲ್ಲಿ ಕೂರಿಸಿಕೊಂಡು ತನ್ನ ಶೆಡ್‌ಗೆ ಹೋಗುತ್ತಿದ್ದರು. ಪಟ್ಟಂದೂರು ಅಗ್ರಹಾರ ಕೆರೆ ಏರಿ ಮೇಲೆ ಹೋಗುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ಉರುಳಿದ ಟ್ರ್ಯಾಕ್ಟರ್ ಕೆರೆಗೆ ಬಿದ್ದಿದೆ. ಆಗ ಟ್ರ್ಯಾಕ್ಟರ್ ಕೆಳಗೆ ಸಿಲುಕಿಕೊಂಡ ಬಾಲಕಿ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಚಾಲಕ ಮತ್ತು ಆರು ವರ್ಷದ ಬಾಲಕಿಗೆ ಸಣ್ಣ ಪುಟ್ಟ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದರು.

ವೈಟ್‌ಫೀಲ್ಡ್ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘ಅಪಘಾತಕ್ಕೆ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯೇ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಟ್ರ್ಯಾಕ್ಟರ್ ವಶಪಡಿಸಿಕೊಂಡಿದ್ದು, ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಯುವತಿ ಜೊತೆ ಅನುಚಿತ ವರ್ತನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಯುವತಿಯನ್ನು ಹಿಂಬಾಲಿಸಿ ಬಂದ ಯುವಕನೊಬ್ಬ ಅವರನ್ನು ಬಲವಂತವಾಗಿ ತಬ್ಬಿಕೊಳ್ಳಲು ಯತ್ನಿಸಿ, ಎದೆಯ ಭಾಗವನ್ನು ಮುಟ್ಟಿ ಪರಾರಿಯಾಗಿರುವ ಘಟನೆ ಸುದ್ದಗುಂಟೆ ಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಸುದ್ದಗುಂಟೆಪಾಳ್ಯದ ಭಾರತಿ ಲೇಔಟ್‌ನ 1ನೇ ಕ್ರಾಸ್‌ನಲ್ಲಿ ಏಪ್ರಿಲ್ 3ರ ಮಧ್ಯರಾತ್ರಿ ಈ ಘಟನೆ ನಡೆದಿದ್ದು, ಈ ದೃಶ್ಯ ಸ್ಥಳೀಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಘಟನೆ ಸಂಬಂಧ ಸ್ಥಳೀಯ ನಿವಾಸಿ ಲೋಕೇಶ್‌ಗೌಡ ಅವರ ದೂರು ಆಧರಿಸಿ, ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು, ಆರೋಪಿಗಾಗಿ ಶೋಧ ಕಾರ್ಯ ನಡೆಸುತ್ತಿದ್ದಾರೆ.

ಇಬ್ಬರು ಯುವತಿಯರು ಸುದ್ದಗುಂಟೆ ಪಾಳ್ಯದ ಭಾರತಿ ಲೇಔಟ್‌ನ 1ನೇ ಕ್ರಾಸ್‌ನಲ್ಲಿ ರಾತ್ರಿ 1.52ರ ವೇಳೆ ನಡೆದುಕೊಂಡು ಬಂದಿದ್ದಾರೆ. ಈ ವೇಳೆ ಅವರನ್ನು ಹಿಂಬಾಲಿಸಿಕೊಂಡ ಬಂದ ಯುವಕ, ಏಕಾಏಕಿ ಒಬ್ಬ ಯುವತಿಯನ್ನು ಎಳೆದಾಡಿ, ತಬ್ಬಿಕೊಳ್ಳಲು ಯತ್ನಿಸಿದ್ದಾನೆ. ಅವರ ಎದೆಯ ಭಾಗವನ್ನು ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದಾನೆ. ಈ ವೇಳೆ ಯುವತಿಯರು ಜೋರಾಗಿ ಕಿರುಚಿಕೊಂಡಾಗ ಆತ ಸ್ಥಳದಿಂದ ಪರಾರಿಯಾಗಿದ್ದಾನೆ.

ಘಟನೆ ಸಂಬಂಧ ಸಂತ್ರಸ್ತ ಯುವತಿಯರು ದೂರು ನೀಡಿಲ್ಲ. ಆದರೆ, ಸ್ಥಳೀಯ ನಿವಾಸಿಯೊಬ್ಬರು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯದೊಂದಿಗೆ ಠಾಣೆಗೆ ದೂರು ನೀಡಿದ್ದಾರೆ.

ರೌಡಿಶೀಟರ್ ವಿಷ್ಣು ಬಂಧನ

ಬೆಂಗಳೂರು: ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ರೌಡಿಶೀಟರ್ ವಿಷ್ಣು (23) ಎಂಬಾತನನ್ನು ಇಂದಿರಾನಗರ ಠಾಣೆ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿ, ಕಲಬುರಗಿ ಜೈಲಿಗೆ ಕಳುಹಿಸಿದ್ದಾರೆ.

ನ್ಯೂಬಿನ್ನಮಂಗಲ ನಿವಾಸಿ ವಿಷ್ಣು, 2018ರಿಂದಲೂ ಅಪರಾಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ. ಈತನ ವಿರುದ್ಧ ಕೊಲೆ , ಕೊಲೆಗೆ ಸುಪಾರಿ, ಹಲ್ಲೆ, ಸುಲಿಗೆ, ವಾಹನ ಕಳವು ಸೇರಿ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ 11 ಪ್ರಕರಣ ದಾಖಲಾಗಿವೆ.

ಆರೋಪಿಯು ಕೆಲ ಪ್ರಕರಣಗಳಲ್ಲಿ ಜಾಮೀನಿನ ಮೇಲೆ ಹೊರ ಬಂದು ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಈತನ ತಂದೆ ಹಾಗೂ ಸಹೋದರ ಸಹ ರೌಡಿಶೀಟರ್‌ಗಳಾಗಿದ್ದು, ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ರೌಡಿ ವಿಷ್ಣುನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಇಂದಿರಾನಗರ ಠಾಣೆ ಪೊಲೀಸರು ನಗರ ಪೊಲೀಸ್ ಕಮಿಷನರ್ ಅವರಿಗೆ ಪ್ರಸ್ತಾವ ಸಲ್ಲಿಸಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business Offers

Finance

URGENT LOAN AVAIL @ 3.5% per annum Personal, Business, Housing take over all types loan. Shivganga Finance. Phone: 8826494700.

PERSONAL

Change of Name

I, ASHWINI Ningappa Kademani R/o.A/P: Shivanagi tq.&`Dist Vijayapur 586127 My mother name is changed as MANDAKANI to MANDAKINI. Vide`affidavit dated:23.7.2024 sworn`before 1.addl civil judge J.M.F.C-1 Vijayapur.

REAL ESTATE SELLING

Residential/ Commercial

Devanahalli

18 GUNTA converted 15 furnished AC rooms rental income 6Lac Nandi hills road 9Cr sale Ph:7019346409

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

JOB OPPORTUNITIES

General

CONSTRUCTION SITE Supervisor with 3 + years experience at KIADB Hardware Park (Near Bagaluru). Should have 2 wheeler & construction knowledge. Contact : 080- 26603729, 080-26602089. Email: anvesh@mahendraperfumery.com

HRD & Admin

WANTED FEMALE Office Assistant Any Degree Fluent in English, Kannada, Hindi, Location: Rajajinagar. Contact: 9108458798/ 9845579620

DH Classifieds ಪ್ರಜಾವಾಣಿ

RECRUITMENT

BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY

*Conditions apply

CLASSIFIED DISPLAY @ 550/-* PER SQCM

SINGLE / DOUBLE / MULTIPLE COLUMN

www.dhclassifieds.com BOOK NOW

For more details contact: 9901641752 9845114560 9900428036 9731810277

ಸಂಸದ ಖಂಡ್ರೆ ಮನೆಗೆ ವಿದ್ಯುತ್ ಸಂಪರ್ಕ ಕಡಿತ: ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ಸಾಗರ್ ಖಂಡ್ರೆ ಅವರ ಮನೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ ವ್ಯಕ್ತಿ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಶ್ರೀ ಕೃಷ್ಣ ಅಪಾರ್ಟ್ ಮೆಂಟ್ ನ ನಂ-103, ಬ್ಲಾಕ್-01ನಲ್ಲಿ ಅರಣ್ಯ ಇಲಾಖೆ ಸಚಿವ ಈಶ್ವರ ಖಂಡ್ರೆ ಪುತ್ರ, ಸಂಸದ ಸಾಗರ ಖಂಡ್ರೆ ವಾಸವಾಗಿದ್ದಾರೆ.

ಪ್ರಸ್ತುತ ಈ ಮನೆಯನ್ನು ಕೃಷ್ಣ ಅಪಾರ್ಟ್‌ಮೆಂಟ್ ಸೊಸೈಟಿಯಿಂದ ಪೂರ್ವಾನುಮತಿ ಪಡೆದುಕೊಂಡು ನವೀಕರಣ ಮಾಡಲಾಗುತ್ತಿದೆ. ನವೀಕರಣದ ವೇಳೆ ಮೆಟ್ಟಿಲುಗಳಿಗೆ ಬೆಳಕಿನ ವ್ಯವಸ್ಥೆ ಮಾಡಲು ವೈರ್ ಎಳೆಯಲಾಗಿದೆ. ಈ ವಿಚಾರವನ್ನು ಮುಂದಿಟ್ಟುಕೊಂಡು ಅಪಾರ್ಟ್ ಮೆಂಟ್ ನ ವ್ಯವಸ್ಥಾಪಕ ಚಂದ್ರಕುಮಾರ ಅವರು ಕಾಮಗಾರಿ ಮಾಡುತ್ತಿದ್ದ ಕಾರ್ಮಿಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಬಗ್ಗೆ ಮನೆಯ ಮಾಲೀಕ ಸಾಗರ ಖಂಡ್ರೆ ಅಥವಾ ಕುಟುಂಬ ಸದಸ್ಯರಿಗಾಗಲಿ ಮಾಹಿತಿ ನೀಡದೆ ಏಕಾಏಕಿ ಮನೆಯ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಈ ವಿಚಾರವಾಗಿ ಮ್ಯಾನೇಜರ್‌ಗೆ ಅದೇ ದಿನ ಸಂಜೆ ಕರೆ ಮಾಡಿ ಸಚಿವರ ಆಪ್ತ ಸಹಾಯಕ ವಿಚಾರಿಸಿದಾಗ, ಕೃಷ್ಣ ಅಪಾರ್ಟಮೆಂಟ್ ಕಾರ್ಯದರ್ಶಿ ಆದೇಶದಂತೆ ವಿದ್ಯುತ್ ಕಡಿತಗೊಳಿಸಿದ್ದೇನೆ ಎಂದು ಹೇಳಿ ಫೋನ್ ಸ್ವಿಚ್ ಆಫ್ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿನಾಕಾರಣ ತಗಾದೆ ತೆಗೆದು ತೊಂದರೆ ನೀಡುತ್ತಿರುವ ಕೃಷ್ಣ ಅಪಾರ್ಟ್‌ಮೆಂಟ್ ವ್ಯವಸ್ಥಾಪಕ ಹಾಗೂ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಹೇಳಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ತಿಳಿಸಿದ್ದಾರೆ.

ಪೊದೆಯಲ್ಲಿ ಕಾರ್ಮಿಕನ ಶವ ಪತ್ತೆ

ಬೆಂಗಳೂರು: ಪೀಣ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಕರಿಓಬನಹಳ್ಳಿಯ ಪಂಚಮುಖಿ ಬಡಾವಣೆಯ ಪೊದೆಯ ಬಳಿ 25 ವರ್ಷದ ಯುವಕನ ಶವ ಪತ್ತೆಯಾಗಿದ್ದು, ಬೇರೆಡೆ ಕೊಲೆ ಮಾಡಿ ಬಿಸಾಡಿ ಹೋಗಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಮೃತ ಯುವಕನನ್ನು ಬಿಹಾರದ ವಿಕಾಸ್ ಕುಮಾರ್ ಮಾಹೋತ್ (25) ಎಂದು ಗುರುತಿಸಲಾಗಿದೆ. ಕಟ್ಟಡ ಕಾರ್ಮಿಕರಾಗಿದ್ದ ವಿಕಾಸ್, ಕಾಚೋಹಳ್ಳಿಯಲ್ಲಿರುವ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ವಾಸವಾಗಿದ್ದರು. ಅವರ ಮುಖ ಹಾಗೂ ಕೈ ಮೇಲೆ ಗಾಯದ ಗುರುತುಗಳು ಪತ್ತೆಯಾಗಿವೆ.

ಮೃತನ ಕುಟುಂಬದವರಿಗೆ ವಿಷಯ ತಿಳಿಸಲಾಗಿದ್ದು, ಅವರು ಬಂದ ಬಳಿಕ ಮತ್ತಷ್ಟು ಮಾಹಿತಿ ಗೊತ್ತಾಗಲಿದೆ. ಮೃತದೇಹ ಪತ್ತೆಯಾದ ಸಮೀಪದಲ್ಲಿ ಮದ್ಯದ ಬಾಟಲಿಗಳು ಸಿಕ್ಕಿದ್ದು, ಕೆಲವರು ಪಾರ್ಟಿ ಮಾಡಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾನುವಾರ ಬೆಳಿಗ್ಗೆ ದಾರಿಹೋಕರು ಪೊದೆಯಲ್ಲಿ ಮೃತದೇಹ ಕಂಡು ಪೊಲೀಸ್ ಸಹಾಯವಾಣಿ ಸಂಖ್ಯೆ 112ಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಪೊಲೀಸ್ ನಿಯಂತ್ರಣ ಕೊಠಡಿಯಿಂದ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಯಿತು.

ಪೀಣ್ಯ ಠಾಣೆ ಪೊಲೀಸರು, ಶ್ವಾನದಳ, ಬೆರಳಚ್ಚು ತಂಡ, ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಮೃತದೇಹವನ್ನು ಆಸ್ಪತ್ರೆಗೆ ರವಾನಿಸಲಾಗಿದೆ.

ಘಟನಾ ಸ್ಥಳದ ಸುತ್ತಮುತ್ತಲ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಬೆಂಗಳೂರು ಕರಗ ಮಹೋತ್ಸವ ಮೂರನೇ ದಿನ ಧರ್ಮರಾಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಭಕ್ತರು ಪೂಜೆಯಲ್ಲಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ನಟಿ ಸಂಜನಾಗೆ ವಂಚನೆ: ಅಪರಾಧಿಗೆ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ ಸಂಜನಾ ಗಲ್ರಾನಿ ಅವರಿಗೆ ಹಣ ವಂಚಿಸಿದ ಪ್ರಕರಣದ ಅಪರಾಧಿ ರಾಹುಲ್ ತೋನ್ಸೆಗೆ ₹61.50 ಲಕ್ಷ ದಂಡ ಮತ್ತು 6 ತಿಂಗಳು ಜೈಲು ಶಿಕ್ಷೆ ವಿಧಿಸಿ 33ನೇ ಎಸಿಜೆಎಂ ನ್ಯಾಯಾಲಯ ಆದೇಶಿಸಿದೆ.

ಬನಶಂಕರಿ 3ನೇ ಹಂತದ ನಿವಾಸಿ ರಾಹುಲ್ ತೋನ್ಸೆ ಅಲಿಯಾಸ್ ರಾಹುಲ್ ಶೆಟ್ಟಿ ವಿರುದ್ಧ 2018-19ರಲ್ಲಿ ಸಂಜನಾ ಗಲ್ರಾನಿ ಅವರಿಂದ ದ ₹45 ಲಕ್ಷ ಪಡೆದು ವಂಚಿಸಿದ್ದ ಆರೋಪವಿತ್ತು.

ಸಂಜನಾ ಗಲ್ರಾನಿ

ದಂಡದ ಮೊತ್ತದಲ್ಲಿ ₹10 ಸಾವಿರ ಕೋರ್ಟ್ ಶುಲ್ಕವನ್ನು ಕಡಿತಗೊಳಿಸಿ ಉಳಿದ ₹61.40 ಲಕ್ಷವನ್ನು ದೂರುದಾರೆ ಸಂಜನಾಗೆ ನೀಡಬೇಕು. ನಿಗದಿತ ಸಮಯದಲ್ಲಿ ದಂಡದ ಮೊತ್ತವನ್ನು ಪಾವತಿ ಮಾಡಿದರೆ 6 ತಿಂಗಳ ಶಿಕ್ಷೆಯನ್ನು ಮಾಫಿ ಮಾಡಲಾಗುತ್ತದೆ. ಇಲ್ಲವಾದರೆ, 6 ತಿಂಗಳು ಜೈಲು ಮತ್ತು ದಂಡವನ್ನು ಪಾವತಿ ಮಾಡಬೇಕೆಂದು ನ್ಯಾಯಾಲಯ ಆದೇಶಿಸಿದೆ.

ಸಂಜನಾಗೆ ಸ್ನೇಹಿತನಾಗಿದ್ದ ರಾಹುಲ್ ತೋನ್ಸೆ, ‘ಗೋವಾ ಮತ್ತು ಕೊಲಂಬೊದಲ್ಲಿ ಕ್ಯಾಸಿನೋಗಳ ವ್ಯವಸ್ಥಾಪಕ ನಿರ್ದೇಶಕನಾಗಿದ್ದೇನೆ. ನಾನು ಹೇಳಿದ ಕಡೆಗಳಲ್ಲಿ ಹಣವನ್ನು ಹೂಡಿಕೆ ಮಾಡಿದರೆ ಅಧಿಕ ಲಾಭಾಂಶ ಸಿಗಲಿದೆ’ ಎಂದು ಆಮಿಷವೊಡ್ಡಿದ್ದ.

‘ರಾಹುಲ್ ಮಾತು ನಂಬಿ ₹45 ಲಕ್ಷ ಅನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಿದ್ದೆ. ಆದರೆ, ಯಾವುದೇ ಆಸ್ತಿಯನ್ನು ನೋಂದಣಿ ಮಾಡಿಸಿಕೊಡಲಿಲ್ಲ. ನಂತರ ನಾನು ಹಣಕ್ಕೆ ಒತ್ತಾಯ ಮಾಡಿದಾಗ ರಾಹುಲ್ ನೀಡಲಿಲ್ಲ’ ಎಂದು ಆರೋಪಿಸಿ ದೂರು ದಾಖಲಿಸಿದ್ದರು.

ನಗರದಲ್ಲಿ ಇಂದು

‘ಭಾರತೀಯ ಸಾಹಿತ್ಯ: ಬಹುತ್ವದ ನೆಲೆಗಳು’ ಅಂತರರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಎಲ್. ಎನ್. ಮುಕುಂದರಾಜ್, ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ಕೇಂದ್ರದ ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಮುಖ್ಯ ಅತಿಥಿ: ಶ್ರೀಧರ್ ಅಘಲಯ, ಅಧ್ಯಕ್ಷತೆ: ವಿಕ್ಟರ್ ಲೋಬೊ ಎಸ್.ಜೆ., ಆಯೋಜನೆ ಹಾಗೂ ಸ್ಥಳ: ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 9.30

ಬೆಳ್ಳಿ ಮಹೋತ್ಸವದ ಪ್ರಯುಕ್ತ ಪೌರಕಾರ್ಮಿಕರಿಗೆ ಅರಿವು ಕಾರ್ಯಕ್ರಮ ಹಾಗೂ ಬೃಹತ್ ಸಮಾವೇಶ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಡಿ.ಕೆ. ಶಿವಕುಮಾರ್, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಜಿ. ಪರಮೇಶ್ವರ, ಆಯೋಜನೆ: ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ, ಸ್ಥಳ: ಗಾಯತ್ರಿ ವಿಹಾರ್, ಗೇಟ್ ಸಂಖ್ಯೆ 4, ಅರಮನೆ ಮೈದಾನ, ಬೆಳಿಗ್ಗೆ 11

ಪಿ.ವಿ. ನಾರಾಯಣ ಅವರಿಗೆ ನುಡಿನಮನ: ಹಂ.ಪ. ನಾಗರಾಜಯ್ಯ, ಮಲ್ಲೇಪುರಂ ಜಿ. ವೆಂಕಟೇಶ್, ಮನು ಬಳಿಗಾರ್, ಆರ್. ಲಕ್ಷ್ಮೀನಾರಾಯಣ, ದೇವರಕೊಂಡಾರೆಡ್ಡಿ, ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ, ರಾಧಾಕೃಷ್ಣ ಕೆ.ವಿ., ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಉದಯಭಾನು ಕಲಾಸಂಘ, ಕರ್ನಾಟಕ ವಿಕಾಸರಂಗ, ಕನ್ನಡ ಗೆಳೆಯರ ಬಳಗ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4



ಪಿ.ವಿ. ನಾರಾಯಣ

ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ: ಉದ್ಘಾಟನೆ: ಶುಭ, ಅಧ್ಯಕ್ಷತೆ: ರಾಜೇಶ್ವರಿ, ಆಯೋಜನೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯನಗರ, ಸ್ಥಳ: ಕರ್ನಾಟಕ ಪಬ್ಲಿಕ್ ಶಾಲೆ, ಹೊನ್ನಗನಹಟ್ಟಿ, ಮಾಗಡಿ ಮುಖ್ಯರಸ್ತೆ, ಸಂಜೆ 4

ಶರಣ ಸಂಗಮ: ‘ಕಾಯಕದಿಂದಲೇ ಜೀವನ ಮುಕ್ತಿ’, ಸಾನ್ನಿಧ್ಯ: ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು: ಕೃಷ್ಣಬಾಯಿ ಹಾಗಲವಾಡಿ, ಸುಭದ್ರಮ್ಮ, ಗೌರವ ಸಮರ್ಪಣೆ: ಕಾವ್ಯಶ್ರೀ ಸಿ., ಅರುಣಕುಮಾರ್ ಡಿ.ಟಿ., ಆಯೋಜನೆ: ರಾಷ್ಟ್ರೀಯ ಬಸವತತ್ವ ಪರಿಷತ್ತು, ಸ್ಥಳ: ಡಾ.ಎಂ. ಚಿದಾನಂದಮೂರ್ತಿ ಸಭಾಂಗಣ, ಪಾಲಿಕೆ ಸೌಧ, ವಿಜಯನಗರ, ಸಂಜೆ 4.30

ರಾಮನವಮಿ ಮಹೋತ್ಸವ ವಿಶೇಷ

ರಾಮನವಮಿಯ 67ನೇ ವಾರ್ಷಿಕೋತ್ಸವ: ಬೆಳಿಗ್ಗೆ 9ರಿಂದ ರಾಮತಾರಕ ಹೋಮ, 11ರಿಂದ ಸೀತಾರಾಮ ಕಲ್ಯಾಣೋತ್ಸವ, ಸಂಜೆ 5ರಿಂದ ಊಜಲೋತ್ಸವ, ಸಂಜೆ 6ರಿಂದ ರಾಜಬೀದಿಗಳಲ್ಲಿ ಕೋದಂಡರಾಮ ದೇವರ ಪಲ್ಲಕ್ಕಿ ಉತ್ಸವ, ಆಯೋಜನೆ ಹಾಗೂ ಸ್ಥಳ: ಕೋದಂಡರಾಮ ದೇವಸ್ಥಾನ, ಶ್ರೀರಾಮಮಂದಿರ ರಸ್ತೆ, ಸಂಪಂಗಿರಾಮನಗರ

87ನೇ ರಾಮೋತ್ಸವ ಸಮಾರಂಭ: ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ: ಸಿರಿ ಗಿರೀಶ್, ಪಿಟೀಲು: ಪ್ರಣವಿ ಗುರುಪ್ರಸನ್ನ, ಮೃದಂಗ: ಕೃಷ್ಣ ವೇದಾಂತ, ‘ರಾಮಾಯಣದಲ್ಲಿನ ಪಾತ್ರ ಪರಿಚಯ’ ಪ್ರವಚನ: ಪಾವಗಡ ಪ್ರಕಾಶ್ ರಾವ್, ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ: ಕುನ್ನುಕುಡಿ ಬಾಲಮುರಳಿ ಕೃಷ್ಣ, ಪಿಟೀಲು: ಎಚ್.ಎಂ. ಸ್ಮಿತಾ, ಮೃದಂಗ: ತುಮಕೂರು ರವಿಶಂಕರ್, ಆಯೋಜನೆ: ಎನ್.ಆರ್. ಕಾಲೊನಿ ಶ್ರೀರಾಮಮಂದಿರಂ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 4.15ರಿಂದ

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಆಶ್ವೀಜ ಉಡುಪ, ಮೇಧಾ ಉಡುಪ, ಕರ್ನಾಟಕ- ಹಿಂದೂಸ್ತಾನಿ ಸಂಗೀತ ಜುಗಲ್ ಬಂದಿ: ಯು. ರಾಜೇಶ್, ಜಯತೀರ್ಥ ಮೇವುಂಡಿ, ವಾದ್ಯ ಸಹಕಾರ: ಬೆಂಗಳೂರು ವಿ. ಪ್ರವೀಣ್, ವ್ಯಾಸಮೂರ್ತಿ ಕಟ್ಟಿ, ಗುರುಮೂರ್ತಿ ವೈದ್ಯ, ಬಿ. ರಾಜಶೇಖರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ, ಚಾಮರಾಜಪೇಟೆ, ಸಂಜೆ 5

ಜಯತೀರ್ಥ ಮೇವುಂಡಿ

32ನೇ ಶ್ರೀರಾಮನವಮಿ ಸಂಗೀತೋತ್ಸವ: ಕರ್ನಾಟಕ ಸಂಗೀತ: ವಿದ್ಯಾಭಾರತಿ ಸಂಗೀತ ವಿದ್ಯಾಲಯ, ಗಾಯನ: ಯೋಗ ಕೀರ್ತನ, ಪಿಟೀಲು: ಸಿಂಧು ಸುಚೇತನ್, ಮೃದಂಗ: ಫಣೀಂದ್ರ ಭಾಸ್ಕರ್, ಖಂಜೀರ: ಕಾರ್ತಿಕ್ ಆರ್., ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5.15ರಿಂದ

ವಸಂತ ನವರಾತ್ರಿ ಶ್ರೀರಾಮೋತ್ಸವ: ಪಿಟೀಲು: ಎಸ್. ಶಶಿಧರ್, ಜಯಶ್ರೀ ಬಾಲಾಜಿ, ಆದಿತ್ಯ ಬಾಲಾಜಿ, ಮೃದಂಗ: ಬಿ.ಎಲ್. ರಮೇಶ್, ಘಟ: ಎನ್.ಎಸ್. ಕೃಷ್ಣಪ್ರಸಾದ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

71ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಗಾಯನ: ಅಂಜಲಿ ಶ್ರೀರಾಮ್, ಪಿಟೀಲು: ವಿಶ್ವಜಿತ್ ಮತ್ತೂರ್, ಮೃದಂಗ: ನಾಗೇಂದ್ರ ಪ್ರಸಾದ್ ಎಸ್. ಪಿ., ಆಯೋಜನೆ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 7

ಹನುಮಗಿರಿ ಮೇಳದಿಂದ ಯಕ್ಷಗಾನ-ಪ್ರಸಂಗ: ‘ಶನೀಶ್ವರ ಮಹಾತ್ಮೆ’, ಆಯೋಜನೆ: ಯಕ್ಷಗಾನ ಅಭಿಮಾನಿಗಳು, ಸ್ಥಳ: ಸರ್ಕಾರಿ ಶಾಲೆ ಮೈದಾನ, ಮಲ್ಲೇಶ್ವರ ಪೊಲೀಸ್ ಠಾಣೆ ಎದುರು, ಮಲ್ಲೇಶ್ವರ, ಸಂಜೆ 5

25ನೇ ವರ್ಷದ ಪ್ರವಚನ ವಾಹಿನಿ: ‘ರಾಮಾಯಣದ ಆಯ್ದ ಭಾಗಗಳು’ ಉಪನ್ಯಾಸ: ಕೆ. ಲಕ್ಷ್ಮೀನಾರಾಯಣ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿ ಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಬೆಂಗಳೂರು ಕರಗ ಮಹೋತ್ಸವ: ವಿಶೇಷ ಪೂಜೆಗಳು ಮತ್ತು ಮಹಾಮಂಗಳಾರತಿ, ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಭ್ರಷ್ಟ ಕಾಂಗ್ರೆಸ್ ಸರ್ಕಾರದ
ಬೆಲೆ ಏರಿಕೆ
ಮುಸ್ಲಿಂ ಓಲೈಕೆ
ದಲಿತರ ಹಣ ಲೂಟಿ
ವಿರುದ್ಧ
BJP
ರಾಜ್ಯಾದ್ಯಂತ
ಜನಾಕ್ರೋಶ ಯಾತ್ರೆ
ಹಂತ 1
ದಿನಾಂಕ : 07-04-2025
ಮೈಸೂರು & ಚಾಮರಾಜನಗರ
ದಿನಾಂಕ : 08-04-2025
ಮಂಡ್ಯ ಹಾಸನ
ದಿನಾಂಕ : 09-04-2025
ಕೊಡಗು ಮಂಗಳೂರು
ದಿನಾಂಕ : 10-04-2025
ಉಡುಪಿ ಚಿಕ್ಕಮಗಳೂರು
ದಿನಾಂಕ : 11-04-2025
ಉತ್ತರಕನ್ನಡ
ದಿನಾಂಕ : 12-04-2025
ಶಿವಮೊಗ್ಗ
ಹಂತ 2
ದಿನಾಂಕ : 16-04-2025
ಬೆಳಗಾವಿ ಹುಬ್ಬಳ್ಳಿ
ದಿನಾಂಕ : 17-04-2025
ಬಾಗಲಕೋಟೆ ವಿಜಯಪುರ
ದಿನಾಂಕ : 18-04-2025
ಕಲ್ಬುರ್ಗಿ ಬೀದರ್
ಹಂತ 3
ದಿನಾಂಕ : 21-04-2025
ದಾವಣಗೆರೆ ಹಾವೇರಿ
ದಿನಾಂಕ : 22-04-2025
ಗದಗ ಕೊಪ್ಪಳ
ದಿನಾಂಕ : 23-04-2025
ಯಾದಗಿರಿ ರಾಯಚೂರು
ದಿನಾಂಕ : 24-04-2025
ಬಳ್ಳಾರಿ ವಿಜಯನಗರ
ದಿನಾಂಕ : 25-04-2025
ಚಿತ್ರದುರ್ಗ ತುಮಕೂರು
ಹಂತ 4
ದಿನಾಂಕ : 27-04-2025
ಕೋಲಾರ ಚಿಕ್ಕಬಳ್ಳಾಪುರ
ದಿನಾಂಕ : 03-05-2025
ಬೆಂಗಳೂರು ಮಹಾನಗರ ಬೆಂಗಳೂರು ಗ್ರಾಮಾಂತರ ರಾಮನಗರ
ಬನ್ನಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ - ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ತೊಲಗಿಸೋಣ
ಪ್ರಕಟಣೆ: ಸಮಸ್ತ ಬಿಜೆಪಿ ಕಾರ್ಯಕರ್ತರು



ಉದ್ಯೋಗಕ್ಕಾಗಿ ಜಿಟಿಟಿಸಿ ಕೋರ್ಸ್‌ಗಳು

ಆರ್.ಬಿ.ಗುರುಬಸವರಾಜ್

ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಿರುದ್ಯೋಗ ಬಹು ದೊಡ್ಡ ಸಮಸ್ಯೆಯಾಗಿದೆ. ಯುವಕರು ಕೌಶಲಾಧಾರಿತ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

ಇತ್ತೀಚಿನ ವರ್ಷಗಳಲ್ಲಿ ಕೌಶಲಾಧಾರಿತ ಕೋರ್ಸ್‌ಗಳಿಗೆ ಮತ್ತು ಕೌಶಲಾಧಾರಿತ ವ್ಯಕ್ತಿಗಳಿಗೆ ಬೇಡಿಕೆ ಸಿಗುತ್ತಿದೆ. ಬೇಡಿಕೆ ಇರುವಂಥ ಕೋರ್ಸ್‌ಗಳನ್ನು ಆಯ್ಕೆ ಮಾಡಿ ಉದ್ಯೋಗದ ಭರವಸೆ ಹೊಂದಬಹುದು.

ಉದ್ಯೋಗ ಭರವಸೆಯ ಕೋರ್ಸ್‌ಗಳನ್ನು ನೀಡುವಲ್ಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) ಮುಂಚೂಣಿಯಲ್ಲಿದೆ. ಜಿಟಿಟಿಟಿಸಿಯು ಕೌನ್ಸಿಲ್ ಫಾರ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್‌ನಿಂದ ಮಾನ್ಯತೆ ಪಡೆದ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆಯಾಗಿದೆ. ಇಲ್ಲಿ ಉತ್ತಮ ಗುಣಮಟ್ಟದ ಉದ್ಯಮ ಆಧಾರಿತ ತಾಂತ್ರಿಕ ತರಬೇತಿ ನೀಡಲಾಗುತ್ತದೆ.

ಜಿಟಿಟಿಸಿಯಲ್ಲಿ ಕೋರ್ಸ್ ಮಾಡಿದವರಿಗೆ ಹೆಚ್ಚು ಬೇಡಿಕೆ ಇದೆ. ಕರ್ನಾಟಕದಾದ್ಯಂತ 35 ಕೇಂದ್ರಗಳಿದ್ದು ಪ್ರತಿ ಕೇಂದ್ರಕ್ಕೂ ಪ್ರತಿ ವರ್ಷ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಜಿಟಿಟಿಸಿಯಲ್ಲಿ ಲಭ್ಯವಿರುವ ಡಿಪ್ಲೊಮಾ ಕೋರ್ಸ್‌ಗಳು ಇತರೆ ಡಿಪ್ಲೊಮಾ ಕೋರ್ಸ್‌ಗಳಿಗಿಂತ ಭಿನ್ನವಾಗಿವೆ. ತಾತ್ವಿಕ ತರಬೇತಿಗಿಂತ ಪ್ರಾಯೋಗಿಕ ತರಬೇತಿಗೆ ಹೆಚ್ಚು ಮಹತ್ವ ನೀಡಲಾಗುತ್ತದೆ. ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಕೌಶಲಗಳನ್ನು ಇಲ್ಲಿ ಕಲಿಸಲಾಗುತ್ತದೆ. ಹಾಗಾಗಿ ಜಿಟಿಟಿಸಿ ಕೋರ್ಸ್‌ಗಳು ಭಿನ್ನವಾಗಿವೆ.

ಅರ್ಹತೆ ಮತ್ತು ಆಯ್ಕೆ : ರಾಜ್ಯ ಪಠ್ಯಕ್ರಮ, ಸಿಬಿಎಸ್‌ಇ ಅಥವಾ ಐಸಿಎಸ್‌ಇ ಪಠ್ಯಕ್ರಮದ 10ನೇ ತರಗತಿ ಉತ್ತೀರ್ಣರಾಗಿರಬೇಕು. ವಿದ್ಯಾರ್ಥಿಯು ಕರ್ನಾಟಕದಲ್ಲಿ ಕನಿಷ್ಠ 5 ವರ್ಷಗಳ ಶಿಕ್ಷಣವನ್ನು ಮಾಡಿರಬೇಕು. ವಿದ್ಯಾರ್ಥಿಗಳ ಅಂಕಗಳ ಆಧಾರದ ಮೇಲೆ ಅಂದರೆ ಮೆರಿಟ್ ಕಮ್ ರೋಸ್ಟರ್ ಪದ್ಧತಿಯಲ್ಲಿ ಆಯ್ಕೆ ಮಾಡಲಾಗುತ್ತದೆ. ಮಹಿಳಾ ಅಭ್ಯರ್ಥಿಗಳಿಗೆ ಶೇಕಡಾ 33 ಸೀಟುಗಳನ್ನು ಕಾಯ್ದಿರಿಸಲಾಗಿರುತ್ತದೆ.

ಅರ್ಜಿ ಸಲ್ಲಿಕೆ : ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಮುಗಿದ ನಂತರ https://www.gttc.karnataka.gov.in/ ಅರ್ಜಿ ಸಲ್ಲಿಸಿ ಅಥವಾ 155267 ಸಂಖ್ಯೆಗೆ ಕರೆಮಾಡಿ ಹೆಸರು ನೋಂದಾಯಿಸಬೇಕು. ಆಯ್ಕೆಯಾದ ವಿದ್ಯಾರ್ಥಿಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಸಲಾಗುತ್ತದೆ ಮತ್ತು ಅಭ್ಯರ್ಥಿಗಳ ವೈಯಕ್ತಿಕ ವಾಟ್ಸಪ್ ಸಂಖ್ಯೆಗೆ ಸಂದೇಶ ಕಳಿಸಲಾಗುತ್ತದೆ.

ಇನ್‌ಪ್ಲಾಂಟ್ ತರಬೇತಿ: ಜಿಟಿಟಿಸಿಯಲ್ಲಿ 3 ವರ್ಷದ ತರಬೇತಿಯನ್ನು ಪೂರೈಸಿದ ವಿದ್ಯಾರ್ಥಿಗಳಿಗೆ ಅವರ ಪ್ರಾಯೋಗಿಕ ಜ್ಞಾನವನ್ನು ಹೆಚ್ಚಿಸಲು ದೇಶದಾದ್ಯಂತ ಸಂಬಂಧಿಸಿದ ಕೈಗಾರಿಕೆಗಳಲ್ಲಿ ಒಂದು ವರ್ಷ ಅವಧಿಗೆ ಕಡ್ಡಾಯ ಇನ್‌ಪ್ಲಾಂಟ್ ತರಬೇತಿಗೆ ನಿಯೋಜಿಸಲಾಗುತ್ತದೆ. ಇಲ್ಲಿ ವಿದ್ಯಾರ್ಥಿಗಳು ಡಿಸೈನ್, ಪ್ರೋಸೆಸ್ ಪ್ಲಾನಿಂಗ್, ಉತ್ಪಾದನಾ ತಂತ್ರಗಳು, ಪರೀಕ್ಷಾ ವಿಧಾನಗಳು ಇತ್ಯಾದಿ ಕೌಶಲಗಳನ್ನು ಪಡೆದುಕೊಳ್ಳುತ್ತಾರೆ. ತರಬೇತಿ ಅವಧಿಯಲ್ಲಿ, ಶಿಕ್ಷಣಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಲಾಗುತ್ತದೆ.

> ನಾನು ಕಳೆದ ವರ್ಷ ಎಸ್.ಎಸ್.ಎಲ್.ಸಿ, ಫೇಲಾಗಿದ್ದೆ. ಹುಬ್ಬಳ್ಳಿ ಜಿಟಿಟಿಸಿಯವರು ನನಗೆ ಫೋನ್ ಮಾಡಿ ಕೆಲವು ಕೋರ್ಸ್‌ಗಳ ಬಗ್ಗೆ ಹೇಳಿದರು. ಅದರಲ್ಲಿ ನಾನು ಮಲ್ಟಿ ಸ್ಕಿಲ್ ಟೆಕ್ನಿಷಿಯನ್ ಕೋರ್ಸ್ ಆಯ್ಕೆ ಮಾಡಿಕೊಂಡೆ. ಕೋರ್ಸ್ ಮುಗಿಯುತ್ತಾ ಬಂದಿದೆ. ಈಗಾಗಲೇ ಖಾಸಗೀ ಕಂಪನಿಯೊಂದರಲ್ಲಿ ಕೆಲಸಕ್ಕೆ ನೇಮಕಾತಿ ಆದೇಶ ಸಿಕ್ಕಿದೆ.
>
> **ಮಂಜುನಾಥ ಯರಿನಾರಾಯಣಪುರ,** ಹುಬ್ಬಳ್ಳಿ

> ಕೈಗಾರಿಕೋದ್ಯಮದ ಬೇಡಿಕೆಗೆ ಅನುಗುಣವಾದ ಕೌಶಲಗಳನ್ನು ಕಲಿಯುವಂತೆ ಜಿಟಿಟಿಸಿ ಕೋರ್ಸ್‌ಗಳನ್ನು ರೂಪಿಸಲಾಗಿದೆ. ಇಲ್ಲಿ ದಾಖಲಾದ ಪ್ರತಿ ವಿದ್ಯಾರ್ಥಿಯು ನೇಮಕಾತಿ ಹೊಂದಲು ಬೇಕಾದ ಎಲ್ಲಾ ಅರ್ಹತೆ ಮತ್ತು ಕೌಶಲಗಳನ್ನು ಕಲಿಸುತ್ತೇವೆ. ಕೋರ್ಸ್ ಪೂರ್ಣಗೊಳಿಸಿದ ಪ್ರತಿ ವಿದ್ಯಾರ್ಥಿಗೆ ನೇಮಕಾತಿ ಆದೇಶ ಕೊಡಿಸುವವರೆಗೂ ನಮ್ಮ ಜವಾಬ್ದಾರಿ ಇರುತ್ತದೆ.
>
> **ಮಾರುತಿ ಭಜಂತ್ರಿ,** ಕೇಂದ್ರದ ಮುಖ್ಯಸ್ಥರು. ಜಿಟಿಟಿಸಿ ಹುಬ್ಬಳ್ಳಿ

ಲಭ್ಯವಿರುವ ಡಿಪ್ಲೊಮಾ ಕೋರ್ಸ್‌ಗಳು
ಟೂಲ್ ಅಂಡ್ ಡೈ ಮೇಕಿಂಗ್ ಡಿಪ್ಲೊಮಾ
ಪ್ರಿಶಿಷನ್ ಮ್ಯಾನುಫ್ಯಾಕ್ಚರಿಂಗ್ ಡಿಪ್ಲೊಮಾ
ಮೆಕಟ್ರಾನಿಕ್ಸ್ ಡಿಪ್ಲೊಮಾ
ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಡಿಪ್ಲೊಮಾ
ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಡಿಪ್ಲೊಮಾ
ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಡಿಪ್ಲೊಮಾ
ಆಟೋಮೇಷನ್ ಮತ್ತು ರೊಬೊಟಿಕ್ಸ್ ಡಿಪ್ಲೊಮಾ

ಹಲವಾರು ಅಭ್ಯರ್ಥಿಗಳು ಕೋರ್ಸ್ ನಂತರ ಕಾಯಂ ಕೆಲಸ ಪಡೆಯುತ್ತಾರೆ. ತರಬೇತಿಯನ್ನು ಪೂರ್ಣಗೊಳಿಸಿದ ನಂತರ ದೇಶ ವಿದೇಶಗಳಲ್ಲಿ ಉದ್ಯೋಗ ಪಡೆಯಬಹುದು.

ಉದ್ಯೋಗಾವಕಾಶಗಳು

ಕೋರ್ಸ್ ನಂತರ ಟೂಲ್ ರೂಮ್, ಆಟೊಮೊಬೈಲ್, ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್ಸ್, ಗೃಹೋಪಯೋಗಿ ಉಪಕರಣ ತಯಾರಿಕಾ ಕೈಗಾರಿಕೆಗಳು, ಏರೋಸ್ಪೇಸ್, ಮೆಕ್ಯಾನಿಕಲ್, ಡಿಸೈನ್ ಇಂಜಿನಿಯರ್, ಸರ್ವಿಸ್ ಮೆಂಟೆನೆನ್ಸ್ ಎಂಜಿನಿಯರಿಂಗ್, ಪ್ರೊಡಕ್ಷನ್ ಎಂಜಿನಿಯರಿಂಗ್, ಪ್ರೋಗ್ರಾಮಿಂಗ್ ಎಂಜಿನಿಯರಿಂಗ್, ಮೊಬೈಲ್ ಸಂವಹನ, ವೆರಿ ಲಾರ್ಜ್ಸ್ಕೈಲ್ ಇಂಟಿಗ್ರೇಷನ್, ಡಿಜಿಟಲ್ ಸಿಗ್ನಲ್ ಪ್ರೊಸೆಸಿಂಗ್, ವಯರ್‌ಲೆಸ್ ಕಮ್ಯೂನಿಕೇಷನ್, ಬಯೋಟೆಕ್ನಾಲಜಿ, ಮಾಹಿತಿ ತಂತ್ರಜ್ಞಾನ, ಕೈಗಾರಿಕೆ, ಕಾರ್ಪೊರೇಟ್, ಮಾಧ್ಯಮ ಹಾಗೂ ಸೆಮಿಕಂಡಕ್ಟರ್, ಬಹು ಡೇಟಾ ವಿಶ್ಲೇಷಕ, ಬಳಕೆದಾರರ ಅನುಭವ, ಡಿಸೈನ್ ಡೆವೆಲಪರ್, ಲ್ಯಾಂಗ್ರೇಜ್ ಪ್ರೋಸೆಸಿಂಗ್ ಎಂಜಿನಿಯರ್, ಸಂಶೋಧನಾ ವಿಜ್ಞಾನಿ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಎಂಜಿನಿಯರ್, ಏರೋಸ್ಪೇಸ್ ತಂತ್ರಜ್ಞ, ಸರ್ಕೀಟ್ ವಿನ್ಯಾಸ ತಂತ್ರಜ್ಞ, ಪ್ರಸಾರ ತಂತ್ರಜ್ಞ, ಪವರ್ ಎಂಜಿನಿಯರ್, ಮೈಕ್ರೋ ಎಲೆಕ್ಟ್ರಿಕಲ್ ಎಂಜಿನಿಯರ್ ಕ್ಷೇತ್ರಗಳಲ್ಲಿ ಸಾಕಷ್ಟು ಉದ್ಯೋಗ ಅವಕಾಶಗಳಿವೆ.

ಎಸ್ಸೆಸ್ಸೆಲ್ಸಿ ಫೇಲಾದವರಿಗೂ ಕೋರ್ಸ್

ಎಸ್ಸೆಸ್ಸೆಲ್ಸಿ ಫೇಲಾದವರಿಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನೀಡಲಾಗುತ್ತದೆ. ಟೂಲ್ ರೂಮ್ ಮೆಕ್ಯಾನಿಸ್ಟ್ (2 ವರ್ಷ) ಹಾಗೂ ಮಲ್ಟಿ ಸ್ಕಿಲ್ ಟೆಕ್ನಿಷಿಯನ್ (6 ತಿಂಗಳು) ಕೋರ್ಸ್ ಆಗಿದೆ.

ಅಲ್ಪಾವಧಿಯ ಸ್ಪರ್ಧಾತ್ಮಕ ಕೋರ್ಸ್‌ಗಳು: ವೃತ್ತಿಯಲ್ಲಿ ನಾವೀನ್ಯ ಕೌಶಲ ಹೊಂದಲು ಐಟಿಐ, ಡಿಪ್ಲಾಮೊ, ಬಿ.ಇ, ವಿದ್ಯಾರ್ಥಿಗಳಿಗಾಗಿ ವಿವಿಧ ಕೌಶಲಾಭಿವೃದ್ಧಿ ಹಾಗೂ ಕೌಶಲವರ್ಧನೆಗಾಗಿ ವಿವಿಧ ಅಲ್ಪಾವಧಿಯ ಕೋರ್ಸ್‌ಗಳು ಲಭ್ಯ ಇದೆ. 2 ವಾರದಿಂದ 3 ತಿಂಗಳವರೆಗೆ ಕೋರ್ಸ್‌ಗಳಿವೆ.

ವಿದ್ಯಾರ್ಥಿ ವೇತನ ಕೈಪಿಡಿ

ಕ್ಯಾಡೆನ್ಸ್ ಸ್ಕಾಲರ್‌ಷಿಪ್

ಕ್ಯಾಡೆನ್ಸ್ ಸ್ಕಾಲರ್‌ಷಿಪ್ ಪದವಿಪೂರ್ವ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಕಲಿಯುತ್ತಿರುವವರಿಗೆ ಆರ್ಥಿಕ ನೆರವು ನೀಡುತ್ತದೆ.

ಅರ್ಹತೆ: ಭಾರತೀಯ ಪ್ರಜೆಯಾಗಿರಬೇಕು. ಪದವಿಪೂರ್ವ ಕೋರ್ಸ್‌ಗಳಿಗೆ, ಅರ್ಜಿದಾರರು ಕನಿಷ್ಠ ಶೇ 60ರಷ್ಟು ಅಂಕಗಳೊಂದಿಗೆ 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಕಡಿಮೆ ಆದಾಯದ ಇರುವ ಕುಟುಂಬದಿಂದ ಬಂದಿರಬೇಕು. ಎಸ್‌ಟಿಯಿಎಂ ವಿದ್ಯಾರ್ಥಿಗಳು, ಮಹಿಳೆಯರು ಮತ್ತು ಅಂಗವಿಕಲರು ಮತ್ತು ಲೈಂಗಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಆರ್ಥಿಕ ಸಹಾಯ: ಪ್ರಮುಖ ಶೈಕ್ಷಣಿಕ ವೆಚ್ಚಗಳನ್ನು ಭರಿಸಲು ಆರ್ಥಿಕ ನೆರವು

ಅರ್ಜಿ ಸಲ್ಲಿಸಲು ಕೊನೆ ದಿನ: 31-05-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/TCSP5

ದ ಡೂನ್ ಸ್ಕೂಲ್ ಪ್ರವೇಶಕ್ಕೆ...

ದ ಡೂನ್ ಸ್ಕೂಲ್ ಸ್ಕಾಲರ್‌ಷಿಪ್ ಎಕ್ಸಾಮಿನೇಷನ್ (ಡಿಎಸ್‌ಎಸ್‌ಇ), ಇದು ಡೂನ್ ಸ್ಕೂಲ್, ಡೆಹ್ರಾಡೂನ್, ಉತ್ತರಾಖಂಡ ನಡೆಸುವ ವಾರ್ಷಿಕ ಪ್ರವೇಶ ಪರೀಕ್ಷೆಯಾಗಿದೆ. ಶಾಲಾ ಶುಲ್ಕವನ್ನು ಪಾವತಿಸಲು ಅಸಮರ್ಥರಾದಂತಹ ಕುಟುಂಬಗಳ, 7 ಅಥವಾ 8ನೇ ತರಗತಿಗೆ ದಾಖಲಾಗುವಂಥ ಬಾಲಕರಿಗೆ ಈ ವಿದ್ಯಾರ್ಥಿವೇತನ ಪರೀಕ್ಷೆಯು ಲಭ್ಯವಿರುತ್ತದೆ.

ಅರ್ಹತೆ: ಭಾರತೀಯ ವಿದ್ಯಾರ್ಥಿಗಳಾಗಿರಬೇಕು. ಅಭ್ಯರ್ಥಿಗಳು 2025ರ ಸೆಪ್ಟೆಂಬರ್ 30ಕ್ಕೆ 11ರಿಂದ 13 ವರ್ಷ ವಯಸ್ಸಿನವರಾಗಿರಬೇಕು. ವಿದ್ಯಾರ್ಥಿಗಳು ಮುಂಬರುವ ಶೈಕ್ಷಣಿಕ ವರ್ಷಕ್ಕೆ 7 ಅಥವಾ 8ನೇ ತರಗತಿಗೆ ದಾಖಲಾತಿಯನ್ನು ಪಡೆದಿರಬೇಕು.

ಆರ್ಥಿಕ ಸಹಾಯ: ವಿದ್ಯಾರ್ಥಿವೇತನದ ರೂಪದಲ್ಲಿ ಆರ್ಥಿಕ ಬೆಂಬಲದ ಸಹಿತ ಡೂನ್ ಸ್ಕೂಲ್‌ನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸುವ ಅವಕಾಶ.

ಅರ್ಜಿ ಸಲ್ಲಿಸಲು ಕೊನೆ ದಿನ: 15-04-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮತ್ತು ಆಫ್‌ಲೈನ್ ಇ-ಮೇಲ್ ಮೂಲಕ: admissions@doonschool.com

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/DSSE2

ಫ್ಲಿಪ್‌ಕಾರ್ಟ್ ಫೌಂಡೇಷನ್ ಸ್ಕಾಲರ್‌ಷಿಪ್

ಕಿರಾಣಿ ಅಂಗಡಿ ಮಾಲೀಕರ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ನಿರ್ಮಿಸಲು ಫ್ಲಿಪ್‌ಕಾರ್ಟ್ ಫೌಂಡೇಷನ್ ವಿದ್ಯಾರ್ಥಿವೇತನವನ್ನು ನೀಡುತ್ತಿದೆ. ವೃತ್ತಿಪರ ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಮ್ಯಾಥಮ್ಯಾಟಿಕ್ಸ್) ಪದವಿ ಕೋರ್ಸ್‌ಗಳಿಗೆ ದಾಖಲಾಗಿರುವ ಕಿರಾಣಿ ಅಂಗಡಿ ಮಾಲೀಕರ ಮಕ್ಕಳ ಸಬಲೀಕರಣಕ್ಕಾಗಿ ಈ ವಿದ್ಯಾರ್ಥಿವೇತನವು ಮೀಸಲಾಗಿದೆ.

ಅರ್ಹತೆ: ಅಭ್ಯರ್ಥಿಗಳು ಪ್ರಸ್ತುತ ಭಾರತದಲ್ಲಿನ ಸರ್ಕಾರಿ ಕಾಲೇಜುಗಳಲ್ಲಿ ವೃತ್ತಿಪರ ಪದವಿ ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಮ್ಯಾಥಮ್ಯಾಟಿಕ್ಸ್) ಕೋರ್ಸ್‌ಗಳ 1ನೇ ವರ್ಷದಲ್ಲಿ ಅಭ್ಯಾಸ ಮಾಡುತ್ತಿರಬೇಕು. ಹೆತ್ತವರಲ್ಲಿ ಒಬ್ಬರು ಕಿರಾಣಿ ಅಂಗಡಿಯ ಮಾಲೀಕರಾಗಿರಬೇಕು (ಕೆಎಸ್‌ಒ). ಅಭ್ಯರ್ಥಿಗಳು ತಮ್ಮ 12ನೇ ತರಗತಿಯ ಪರೀಕ್ಷೆಗಳಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ಸೇರಿ ₹ 5 ಲಕ್ಷವನ್ನು ಮೀರಬಾರದು.

ಆರ್ಥಿಕ ಸಹಾಯ: ₹ 50,000 ನಿಗದಿತ ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೆ ದಿನ: 16-04-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/pjvi/FLIP1

ಅಮ್ಮನೇ ಮಾತು ಬಿಟ್ಟರೆ...

ನನ್ನ ಗೆಳತಿಯ ಮಗಳು ಎಸ್ಸೆಸೆಲ್ಸಿ ವಿದ್ಯಾರ್ಥಿನಿ. ಅವಳ ಬಗ್ಗೆ ಶಾಲೆಯಿಂದ ದೂರು ಬಂತು ಎಂದು ಅವಳ ಅಮ್ಮ ಮಗಳತ್ರ ಮಾತಾಡುವುದನ್ನೇ ಬಿಟ್ಟಿದ್ದಾಳೆ. ಆಕೆಯ ಪತಿ ವಿದೇಶದಲ್ಲಿ ಕೆಲಸದಲ್ಲಿದ್ದಾರೆ. ಮನೆಯಲ್ಲಿ ಆಕೆ, ಮಗಳು, ಮಗ, ಗಂಡನ ಅಪ್ಪ ಹಾಗೂ ಅಮ್ಮ ಇಷ್ಟೇ ಜನ ಇರೋದು. ಗೆಳತಿಗೆ ಬುದ್ಧಿಮಾತು ಹೇಳಲಿಕ್ಕೆ ಪ್ರಯತ್ನಿಸಿದೆ. ತಾಯಿಯ ಮೌನದಿಂದ ಮಗಳು ಮಾನಸಿಕವಾಗಿ ಕುಗ್ಗುತ್ತಿದ್ದಾಳೆ ಎಂದು ಅನ್ನಿಸಿತು. ಅಮ್ಮ - ಮಗಳ ಸಂಬಂಧವನ್ನು ಚೆನ್ನಾಗಿ ಮಾಡುವುದು ಹೇಗೆ?

ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

ಇಲ್ಲಿ ತಾಯಿಯೇ ತನ್ನ ಮಗಳಿಗಿಂತಲೂ ಚಿಕ್ಕವಳ ಹಾಗೆ ಹಟ ಮಾಡಿದರೆ ಹೇಗೆ? ಸೋಷಿಯಲ್ ಮೀಡಿಯಾ ಹಾವಳಿಯಿಂದ ಬಹುತೇಕ ಎಲ್ಲರ ಮನಸ್ಸು ಅಲ್ಲೋಲಕಲ್ಲೋಲವಾಗುತ್ತಿರುತ್ತದೆ. ಇನ್ನು ಹದಿಹರೆಯದವರ ಪಾಡಂತೂ ಹೇಳಿ ಮುಗಿಸಲಾಗದು. ಮಕ್ಕಳ ಕೈಲಿರುವ ಮೊಬೈಲಿನೊಳಗಿನ ಪ್ರಪಂಚಕ್ಕೂ, ಹೊರಗೆ ಕಾಣುವ ಪ್ರಪಂಚಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಇವುಗಳಿಂದ ಉಂಟಾಗುವ ದ್ವಂದ್ವ, ಅತಿರೇಕದ ಮಾನಸಿಕ ತೊಳಲಾಟಗಳನ್ನು ನಿಯಂತ್ರಿಸಿಕೊಳ್ಳಲು ಮಕ್ಕಳು ಹೆಣಗಾಡುತ್ತಾರೆ. ಕೆಲವರು ಸೋಲುತ್ತಾರೆ.

ಹದಿಹರೆಯದವರಿಗೆ ಪ್ರತಿದಿನವೂ ಹೊಸದಿನ. ಹೊಸ ಹೊಸ ಭರವಸೆಗಳ, ಕನಸುಗಳ, ಕುತೂಹಲಗಳ ಬೆಳಗು. ಹೊಸ ಹೊಸ ಸಮಸ್ಯೆಗಳ, ಆತಂಕಗಳ, ಪ್ರಶ್ನೆಗಳ ದಿನಗಳು. ಪಾಲಕರು ಸದಾ ಮಕ್ಕಳನ್ನು ಸಾಧ್ಯವಿರುವಷ್ಟೂ ಕಾಳಜಿಯಿಂದ ಗಮನಿಸುತ್ತಿರಬೇಕು. ಮಕ್ಕಳು ತಪ್ಪು ಮಾಡಿದರೂಂತ ಅವರನ್ನು ಅತಿಯಾಗಿ ಶಿಕ್ಷಿಸಬಾರದು. ಮಕ್ಕಳು ಮಾಡಿದ ತಪ್ಪೆಲ್ಲವೂ ಪಾಲಕರದ್ದೇ ತಪ್ಪು ಎನ್ನುವಷ್ಟು ವಿಕೋಪಕ್ಕೂ ಹೋಗಬಾರದು. ಇಲ್ಲಿ ಮಕ್ಕಳೊಂದಿಗೆ ಪಾಲಕರೂ ಕಲಿಯುತ್ತಲೇ ಇರುತ್ತಾರೆ. ಪರಸ್ಪರ ಇಬ್ಬರೂ ಕಲಿಯುತ್ತ, ಹೊಂದುತ್ತ, ಮಾಗುತ್ತ ಸಾಗುವುದೇ ಬದುಕಿನ ಸಹಜ ರೀತಿ. ಪಾಲಕರಿಗೆ ಎಲ್ಲವೂ ಗೊತ್ತದೆ ಎನ್ನುವ ಹಾಗಿಲ್ಲ. ಮಕ್ಕಳಿಗೆ ಏನೂ ಗೊತ್ತಿಲ್ಲ ಎನ್ನುವ ಹಾಗೂ ಇಲ್ಲ.

ಈ ಪ್ರಕರಣದಲ್ಲಿ ಅಮ್ಮನೇ ಮಗುವಿನ ಬಳಿ ಮಾತು ಬಿಡುವುದು ಅನಗತ್ಯ. ಉಪ್ಪಿಗಿಂತ ರುಚಿ ಇಲ್ಲ. ತಾಯಿಗಿಂತ ಬಂಧುವಿಲ್ಲ. ಆಕೆ ಹದಿಹರೆಯದ ಹುಡುಗಿ. ಅವಳಿಗೆ ಮಾನಸಿಕ ಹಾಗೂ ದೈಹಿಕ ಸಮಸ್ಯೆಗಳು ಹೆಚ್ಚು. ಅವುಗಳನ್ನೆಲ್ಲಾ ಆಕೆ ಒಂಟಿಯಾಗಿ ಎದುರಿಸಲಾರಳು. ಮನೆಯಲ್ಲಿರುವವರ ನಡುವೆ ಸಂಬಂಧದ ಸ್ಪಷ್ಟನೆ ಇದ್ದರೆ ಒಳ್ಳೆಯದಿತ್ತು.

ಮಗಳ ಮೇಲೆ ಶಾಲೆಯಿಂದ ದೂರು ಬಂದಾಗ, ತಾಯಿ ಏಕಮುಖವಾಗಿ, ಮಗಳಿಗೆ ಶಿಕ್ಷಿಸುವ ಬದಲಿಗೆ ಸಮಾಧಾನದಿಂದ ತಪ್ಪನ್ನು ಸರಿ ಪಡಿಸಿಕೊಳ್ಳಲು ತಿಳಿಹೇಳಲಿ. ಮಗುವಿಗೆ ಆಘಾತವಾಗಿ ತೀವ್ರ ಒಂಟಿತನ ಕಾಡುತ್ತದೆ. ಕೀಳರಿಮೆಯುಂಟಾಗುತ್ತದೆ. ಮಾನಸಿಕ ಹಾಗೂ ದೈಹಿಕ ಸಮಸ್ಯೆಗಳನ್ನು ಸರಿಯಾಗಿ ನಿರ್ವಹಿಸಲಾಗದೇ ಆತಂಕಕ್ಕೊಳಗಾಗಬಹುದು. ಮುಂದೆ ಮಾನವ ಸಂಬಂಧಗಳ ಬಗ್ಗೆ ನಂಬುಗೆ ಇಲ್ಲದಂತಾಗಬಹುದು. ಮಗಳ ಜೀವನವೂ ಸಮಸ್ಯೆಗಳ ಸರಮಾಲೆಯಾಗುವ ಸಾಧ್ಯತೆಗಳನ್ನು ಅಲ್ಲಗಳೆಯಲ್ಲಿಕ್ಕಾಗದು. ಇನ್ನು, ಮನೆ ಮಂದಿಯ ಮನಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುವ, ಹಿರಿಯರು ಇದ್ದರೆ, ಅವರಿಂದ ಎಲ್ಲರಲ್ಲಿಯೂ ಪರಸ್ಪರ ಅಪ್ಪಿಷ್ಟು ಸೌಹಾರ್ದತೆ ಇರಲಿಕ್ಕೆ ಅನುಕೂಲತೆಗಳಾಗಬಹುದು.

ಮಾತು ಕೇಳದ ಮಕ್ಕಳನ್ನು ಶಿಕ್ಷಿಸುವ ಬದಲಿಗೆ ಪ್ರೀತಿಸಿ ಸರಿದಾರಿಗೆ ತರಬಹುದು. ಅಮ್ಮ ಅಮ್ಮನಾಗಿರಬೇಕು. ಮಕ್ಕಳ ಪಾಲಿನ ಗುಮ್ಮನಾಗಬಾರದು.

ನಿಮ್ಮ ಗೆಳತಿಯು ತನ್ನ ಬಾಲ್ಯದಲ್ಲಿ ಅವಳ ತಾಯಿಯಿಂದ ಅತಿಯಾದ ನೋವನ್ನು ಅನುಭವಿಸಿದ್ದು ಇದ್ದರೆ ಈಗ ತನ್ನ ಮಗಳ ಮೇಲೆ ಆ ಸೇಡನ್ನು ತೀರಿಸಿಕೊಳ್ಳುತ್ತಿರಬಹುದು. ಆಕೆಯೊಳಗಿನ ಅವ್ಯಕ್ತ ಸಿಟ್ಟು ಹೀಗೆ ವ್ಯಕ್ತವಾಗುತ್ತಿರಬಹುದು. ಇದರ ಬಗ್ಗೆ ನಿಮ್ಮ ಗೆಳತಿಗೆ ನೆನಪು ಇಲ್ಲದಿರಬಹುದು. ಆಕೆಯ ಮನಸ್ಥಿತಿಯೂ ಅಷ್ಟಾಗಿ ಸರಿ ಇಲ್ಲವಾಗಿದ್ದರೆ ಮೊದಲು ಆಕೆ ನಂತರ ಅಗತ್ಯವೆನ್ನಿಸಿದರೆ ಮಗಳು ಆಪ್ತ ಸಮಾಲೋಚಕರನ್ನು ಕಾಣಬೇಕು. ಇದರಿಂದ ಇಬ್ಬರಿಗೂ ಅನುಕೂಲವಾಗುತ್ತದೆ.

ಸಿಇಟಿ- ನೀಟ್ ಪರೀಕ್ಷೆ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ ಪರೀಕ್ಷೆ ದಿಕ್ಸೂಚಿ

PUC: CET-MATHEMATICS

MULTIPLE CHOICE QUESTIONS

35) If a, b, c are in A.P. then the value of the determinant $\begin{vmatrix} x+2 & x+3 & x+2a \\ x+3 & x+4 & x+2b \\ x+4 & x+5 & x+2c \end{vmatrix}$ **is**

(A) 0 (B) 1
(C) x (D) 2x

Ans: (A) 0

Expln:-The transformations $R_2 - R_1$, $R_3 - R_2$ give

$$\Delta = \begin{vmatrix} x+2 & x+3 & x+2a \\ 1 & 1 & 2b-2a \\ 1 & 1 & 2c-2b \end{vmatrix} \sim R_3 - R_2 \begin{vmatrix} x+2 & x+3 & x+2a \\ 1 & 1 & 2b-2a \\ 0 & 0 & 2c-4b+2a \end{vmatrix}$$

$$= 2\begin{vmatrix} x+2 & x+3 & x+2a \\ 1 & 1 & 2b-2a \\ 0 & 0 & c-2b+a \end{vmatrix} \text{ As a, b, c are in A.P., } a+c=2b$$

$$\therefore \Delta = 2\begin{vmatrix} x+2 & x+3 & x+2a \\ 1 & 1 & 2b-2a \\ 0 & 0 & 0 \end{vmatrix} = 0.$$

36) If $A = \begin{bmatrix} a & 0 & 0 \\ 0 & a & 0 \\ 0 & 0 & a \end{bmatrix}$, then det (adj A) is

(A) a^{27} (B) a^9 (C) a^6 (D) a^2

Ans : (C) a^6

Note : If A is a square matrix of order 3 then $|\text{adj } A| = |A|^2$ and if A is a square matrix of order 2 then $|\text{adj } A| = |A|$.

Here A is of order 3. $\therefore |\text{adj } A| = |A|^2$

$|A| = a^3$. $\therefore |A|^2 = a^6$.

37) If 1, w, w^2 are three cube roots of unity, then $(1 - w + w^2)(1 + w - w^2)$ is........................

(A) 2 (B) 4
(C) 1 (D) 3

Ans: (B) 4

Expln:- We know $1 + w + w^2 = 0$. $\therefore 1 + w = -w^2$ and

$1 + w^2 = -w$.

$\therefore (1 - w + w^2)(1 + w - w^2)$

$= (-2w)(-2w^2) = 4w^3 = 4$.

38) The shaded region in the figure given in the solution of which of the in equations ?



(A) $x+y \geq 7, 2x-3y+6 \geq 0, x \geq 0, y \geq 0$ (B) $x+y \leq 7, 2x-3y+6 \leq 0, x \geq 0, y \geq 0$
(C) $x+y \leq 7, 2x-3y+6 \geq 0, x \geq 0, y \geq 0$ (D) $x+y \geq 7, 2x-3y+6 \leq 0, x \geq 0, y \geq 0$

Ansp:-C

39) Solve for x

$\tan^{-1}\left(\frac{1-x}{1+x}\right) = \frac{1}{2}\tan^{-1} x, x > 0$

(A) 1 (B) $\frac{1}{\sqrt{3}}$
(C) $\sqrt{3}$ (D) −1

Ans : (B) $\frac{1}{\sqrt{3}}$

Exp ln :− $\tan^{-1}\left(\frac{1-x}{1+x}\right) = \frac{1}{2}\tan^{-1} x$

$\therefore 2\tan^{-1}\left(\frac{1-x}{1+x}\right) = \tan^{-1} x, x > 0$

Put $x = \tan\theta$. Then $\frac{1-x}{1+x} = \frac{1-\tan\theta}{1+\tan\theta} = \tan\left(\frac{\pi}{4} - \theta\right)$

$\therefore 2\tan^{-1}\tan\left(\frac{\pi}{4} - \theta\right) = \theta$

i.e., $2\left(\frac{\pi}{4} - \theta\right) = \theta \therefore \frac{\pi}{2} = 3\theta$ or $\theta = \frac{\pi}{6}$

$x = \tan\frac{\pi}{6} = \frac{1}{\sqrt{3}}$.

40) The differential equation of the family of parabolas $y^2 = 4ax$, where a is parameter, is

(A) $\frac{dy}{dx} = \frac{y}{2x}$ (B) $\frac{dy}{dx} = -\frac{y}{2x}$

(C) $\frac{dy}{dx} = -\frac{2y}{x}$ (D) $\frac{dy}{dx} = \frac{2y}{x}$

Ans : (A) $\frac{dy}{dx} = \frac{y}{2x}$

Exp ln :−

$y^2 = 4ax$. $\therefore 2y\frac{dy}{dx} = 4a$ i.e., $\frac{dy}{dx} = \frac{4a}{2y}$

But $4a = \frac{y^2}{x}$ $\therefore \frac{dy}{dx} = \frac{y^2}{2y.\,x} = \frac{y}{2x}$.

41) If $\frac{dy}{dx} = \frac{y + x\tan\frac{y}{x}}{x}$, then $\sin\frac{y}{x} =$

(A) cx^2 (B) cx
(C) cx^3 (D) log x

Ans: (B) cx

Expln:-

$\frac{dy}{dx} = \frac{y}{x} + \tan\frac{y}{x}$

Put $\frac{y}{x} = v$ i.e., $y = vx$. Then $\frac{dy}{dx} = v + x\frac{dv}{dx}$

$\therefore v + x\frac{dv}{dx} = v + \tan v$.

i.e., $x\frac{dv}{dx} = \tan v$

$\therefore \frac{dv}{\tan v} = \frac{dx}{x}$ i.e., $\cot v\, dv = \frac{dx}{x}$

Integrating, $\log \sin v = \log x + \log c$

$\sin v = cx$

$\sin\frac{y}{x} = cx$

NEET: BIOLOGY

46) There is no natural death in single celled organisms like Amoeba and bacteria because:

a) They cannot reproduce sexually
b) They reproduce by binary fission
c) Parental body is distributed among the offspring
d) They are microscopic

Ans:- c

47) There are various types of reproduction. The type of reproduction adopted by an organism depends on:

a) The habitat and morphology of the organism
b) Morphology of the organism
c) Morphology and physiology of the organism
d) The organism's habitat, physiology and genetic makeup

Ans:- d

48) Given below are two statements: One is labelled as Assertion A and the other islabeled as Reason R

__Assertion A:__ A flower is defined as modified shoot wherein the shoot apical meristem changes to floral meristem.

__Reason R:__ Internode of the shoot gets condensed to produce different floral appendages laterally at successive nodes instead of leaves. In the light of the above statements,

choose the correct answer from the options given below:

a) A is false but R is true.
b) Both A and R are true and R is the correct explanation of A.
c) Both A and R are true but R is NOT the correct explanation of A.
d) A is true but R is false.

Ans:- (b) A flower is a modified shoot wherein the shoot apical meristem changes to floral meristem. Internodes do not elongate and the axis gets condensed. The apex produces different kinds of floral appendages laterally at successive nodes instead of leaves.

49) Match List I with List II

	List-I		List-II
A.	*Rhizopus*	I.	Mushroom
B.	*Ustilago*	II.	Smut fungus
C.	*Puccinia*	III.	Bread mould
D.	*Agaricus*	IV.	Rust fungus

Choose the correct answer from the options given below:

(a) A-III, B-II, C-IV, D-I (b)A-I, B-III, C-II, D-IV
(c) A-III, B-II, C-I, D-IV (d) A-IV, B-III, C-II, D-I

Ans; (a)

50) Identify the incorrect statement.

a) In asexual reproduction, the offspring produced are morphologically and genetically identical to the parent
b) Zoospores are sexual reproductive structures
c) In asexual reproduction, a single parent produces offspring with or without the formation of gametes
d) Conidia are asexual structures in Penicillium

Ans:- b

51) The capacity to generate a whole plant from any cell of the plant is called:

(a) Totipotency (b) Micropropagation
(c) Differentiation (d) Somatic hybridization

Ans:- (a)

Expln:- Totipotency is defined as the capacity to generate a whole plant from any cell of the plant

52) Which of the following is a post-fertilization event in flowering plants?

a) Transfer of pollen grains
b) Embryo development **c)** Formation of flower
d) Formation of pollen grains

Ans:- b

53) The number of chromosomes in the shoot tip cells of a maize plant is 20. The number of chromosomes in the microspore mother cells of the same plant shall be:

a) 20 b) 10
c) 40 d) 15

Ans:- a

54) Among the terms listed below, those that of are not technically correct names for a floral whorl are –

i. Androecium ii. Carpel
iii. Corolla iv. Sepal

a) i and iv b) iii and iv
c) ii and iv d) i and ii

Ans:- c

55) Embryo sac is to ovule as ……………. is to an anther.

a) Stamen b) Filament
c) Pollen grain d) Androecium

Ans:- c

56) A dicotyledonous plant bears flowers but never produces fruits and seeds. The most probable cause for the above situation is -

a) Plant is dioecious and bears only pistillate flowers
b) Plant is dioecious and bears both pistillate and staminate flowers
c) Plant is monoecious
d) Plant is dioecious and bears only staminate flowers

Ans:- d

(Contd…..)

ಮಡಿಕೇರಿಯಲ್ಲಿ ಪ್ರತಾಪಸಿಂಹ ಪ್ರತಿಕೃತಿ ದಹಿಸಿ ಕಾಂಗ್ರೆಸ್ ಕಾರ್ಯಕರ್ತರ ಆಕ್ರೋಶ

‘ವಿನಯ್ ಸಾವಿಗೆ ಬಿಜೆಪಿಯೇ ಹೊಣೆ’

ಪ್ರಜಾವಾಣಿ ವಾರ್ತೆ

ಮಡಿಕೇರಿ: ‘ಸಾವಿನ ಮೇಲೆ ಬಿಜೆಪಿ ರಾಜಕೀಯ ಮಾಡುತ್ತಿದೆ’ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಭಾನುವಾರ ಇಲ್ಲಿನ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

‘ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕರ ಹೆಸರನ್ನು ಬಿಜೆಪಿಯವರು ಅನಗತ್ಯವಾಗಿ ಎಳೆದು ತರುತ್ತಿದ್ದಾರೆ’ ಎಂದು ಆರೋಪಿಸಿದರು. ಬಿಜೆಪಿ ಮುಖಂಡ ಪ್ರತಾಪಸಿಂಹ ಅವರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಗಾಂಧಿ ಮೈದಾನದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ‘ವಿನಯ್ ಸೋಮಯ್ಯ ಆತ್ಮಹತ್ಯೆಗೆ ಬಿಜೆಪಿಯೇ ಹೊಣೆ. ಈ ಕುರಿತು ತನಿಖೆ ನಡೆಯಬೇಕು’ ಎಂದು ಒತ್ತಾಯಿಸಿದರು.

‘ವಿನಯ್ ಅವರನ್ನು ಬಿಜೆಪಿ ಬಲಿ ಕೊಟ್ಟಿದೆಯಾ ಅಥವಾ ಆತ್ಮಹತ್ಯೆ ನಡೆದಾಗ ಸಿಕ್ಕ ಅವಕಾಶವನ್ನೇ ಬಳಸಿಕೊಂಡಿದೆಯಾ? ಬಿಜೆಪಿಯ ‘ಐಟಿ ಸೆಲ್’ ಕಾರ್ಯವೈಖರಿ ಹೇಗಿದೆ ಎಂಬ ಬಗ್ಗೆ ತನಿಖೆ ನಡೆಯಬೇಕು’ ಎಂದು ಆಗ್ರಹಿಸಿದರು.

‘ಬಿಜೆಪಿಯಲ್ಲಿ ಸಜ್ಜನರಿದ್ದಾರೆ. ಅದಕ್ಕಾಗಿಯೇ ಶನಿವಾರ ನಡೆದ ಪ್ರತಿಭಟನೆಯಲ್ಲಿ ಕೆಲವು ಮಂದಿಯಷ್ಟೇ ಭಾಗಿ ಆದರು. ಹೆಣದ ಮೇಲಿನ ರಾಜಕಾರಣವನ್ನು ಆ ಪಕ್ಷದ ಕಾರ್ಯಕರ್ತರೇ ತಿರಸ್ಕರಿಸಿದರು’ ಎಂದರು.

‘ನನಗೆ ಘೇರಾವ್ ಹಾಕುವಂತೆ ಬಿಜೆಪಿ ಮುಖಂಡರೊಬ್ಬರು ಶನಿವಾರ ಕರೆಕೊಟ್ಟರು. ಆ್ಯಸಿಡ್‌ನಿಂದ ತೊಳೆದರೂ ಸ್ವಚ್ಛವಾಗದ ವ್ಯಕ್ತಿಯವರು. ಬಿಜೆಪಿಯೇ ಬೂಟಲ್ಲಿ ಒದ್ದು ಕಸದ ಡಬ್ಬಿಗೆ ಹಾಕಿದರೂ ಅವರು ಪಾಠ ಕಲಿತಿಲ್ಲ. ಆ ಪಕ್ಷದ ನಿರ್ನಾಮಕ್ಕೆ ಹೊರಟಿರುವ ಅವರಿಗೆ ಘೇರಾವ್ ಹಾಕಲಿ’ ಎಂದು ಯಾರ ಹೆಸರು ಹೇಳದೆ ಟೀಕಿಸಿದರು.

ಇದಕ್ಕೂ ಮುನ್ನ, ವಿನಯ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ‘ಅವರ ಕುಟುಂಬದ ಜೊತೆ ನಿಲ್ಲುತ್ತೇನೆ’ ಎಂದು ಪೊನ್ನಣ್ಣ ಹೇಳಿದರು.

ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಧರ್ಮಜ ಉತ್ತಪ್ಪ, ‘ಬಿಜೆಪಿಯ ವಿರುದ್ಧ ತಾಲ್ಲೂಕುಮಟ್ಟದಲ್ಲಿ ಪ್ರತಿಭಟಿಸಲಾಗುವುದು’ ಎಂದು ತಿಳಿಸಿದರು.

ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ವಿನಯ್ ಮರಣ ಪತ್ರ: ಹೆಣ್ಣೂರು ಪೊಲೀಸರಿಂದ ತನಿಖೆ ಶುರು

ಬೆಂಗಳೂರು: ಕೊಡಗು ಜಿಲ್ಲೆಯ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಹೆಣ್ಣೂರು ಠಾಣೆ ಪೊಲೀಸರು, ವಿನಯ್ ಜತೆ ಸಂಪರ್ಕ ಹೊಂದಿದ್ದ ವ್ಯಕ್ತಿಗಳ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ವಿನಯ್ ಅವರ ಮರಣ ಪತ್ರ ಆಧರಿಸಿ ಕೊಡಗು ಜಿಲ್ಲಾ ಕಾಂಗ್ರೆಸ್ ವಕ್ತಾರ ತೆನ್ನಿರಾ ಮೈನಾ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ವಿನಯ್ ಅವರ ಮೊಬೈಲ್, ಲ್ಯಾಪ್‌ಟಾಪ್, ಮರಣಪತ್ರವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿದ್ದು, ಎರಡು ದಿನಗಳಲ್ಲಿ ವರದಿ ಬರಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿನಯ್ ಬೆಂಗಳೂರಿಗೆ ಯಾವಾಗ ಬಂದರು? ಯಾರ ಜತೆ ಸಂಪರ್ಕದಲ್ಲಿದ್ದರು? ಯಾರಿಗೆಲ್ಲಾ ಕರೆ ಮಾಡಿದ್ದರು? ಕೊನೆಯ ಬಾರಿಗೆ ಯಾರ ಜತೆ ಮಾತನಾಡಿದ್ದರು? ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ. ಕರೆಗಳ ವಿವರ (ಸಿಡಿಆರ್) ಪರಿಶೀಲನೆ ನಡೆಸಲಾಗುತ್ತಿದೆ.

ವಿನಯ್ ಅವರೇ ಮರಣ ಪತ್ರ ಬರೆದಿದ್ದಾ ಅಥವಾ ಬರೆಸಿದ್ದಾ? ಮರಣ ಪತ್ರ ಬರೆಯಲು ಯಾರಾದರೂ ಸೂಚಿಸಿದ್ದರೆ? ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಮರಣ ಪತ್ರ ಹಾಕಿದ್ದಾ? ಲ್ಯಾಪ್‌ಟಾಪ್‌ನಲ್ಲಿ ಮರಣ ಪತ್ರ ಬರೆದು ಬಳಿಕ ಪೋಸ್ಟ್ ಮಾಡಿದ್ರಾ? ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿದ್ದು ಯಾವಾಗ? ರಾತ್ರಿಯಾದರೂ ಗೋದಾಮಿನಲ್ಲಿ ಉಳಿದಿದ್ದು ಏಕೆ? ಕಂಪನಿಯಲ್ಲಿ ಯಾರೆಲ್ಲಾ ಇದ್ದರು? ಮೊಬೈಲ್‌ನಲ್ಲಿ ಸುದೀರ್ಘ ಮರಣ ಪತ್ರ ಬರೆದಿದ್ದಾರೂ ಹೇಗೆ? ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೊಬೈಲ್‌ನಿಂದ ಅಳಿಸಿ ಹಾಕಿದ್ದ ದತ್ತಾಂಶವನ್ನು ಮರುಸಂಗ್ರಹಿಸಲು ಎಫ್‌ಎಸ್‌ಎಲ್ ತಜ್ಞರು ಪ್ರಯತ್ನಿಸುತ್ತಿದ್ದಾರೆ. ಮರಣಪತ್ರದ ನೈಜತೆ ಬಗ್ಗೆಯೂ ಪರಿಶೀಲನೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ರಾಜಕೀಯ ಲಾಭಕ್ಕೆ ಬಳಕೆ’

ಬೆಂಗಳೂರು: ‘ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣವನ್ನು ಬಿಜೆಪಿ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದೆ’ ಎಂದು ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಧನಂಜಯ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಶಾಸಕರಾದ ಎ.ಎಸ್. ಪೊನ್ನಣ್ಣ ಮತ್ತು ಮಂತರ್‌ಗೌಡ ಅವರಿಗೂ ವಿನಯ್ ಸೋಮಯ್ಯ ಆತ್ಮಹತ್ಯೆಗೂ ಯಾವುದೇ ಸಂಬಂಧವಿಲ್ಲ’ ಎಂದರು.

‘ಪೊನ್ನಣ್ಣ ಅವರ ಬಗ್ಗೆ ಮಾತನಾಡುವ ನೈತಿಕತೆ ಪ್ರತಾಪ್ ಸಿಂಹ ಅವರಿಗೆ ಇಲ್ಲ. ಇದೇ ಚಾಳಿಯನ್ನು ಮುಂದುವರೆಸಿದರೆ ಮುಂದಿನ ದಿನಗಳಲ್ಲಿ ಮೈಸೂರಿನಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

‘ಕಾಂಗ್ರೆಸ್ ಪಕ್ಷದ, ಸರ್ಕಾರದ ಕೆಲಸಗಳ ಮೇಲೆ ನಿರಂತರ ಅಪಪ್ರಚಾರ ಮಾಡಲಾಗುತ್ತಿದೆ. ಇದರ ಹಿಂದೆ ದೊಡ್ಡ ಚಿತಾವಣೆ ಅಡಗಿದೆ’ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಹೇಳಿದರು.

‘ಮಹಾನ್ ನಾಟಕಕಾರರಾದ ವಿಜಯೇಂದ್ರ, ಪ್ರತಾಪ್ ಸಿಂಹ, ಛಲವಾದಿ ನಾರಾಯಣಸ್ವಾಮಿ ಅವರು ಮೃತ ವಿನಯ್ ಸೋಮಯ್ಯ ಮನೆಗೆ ಹೋಗಿ ಸಾಂತ್ವನ ಹೇಳಲಿಲ್ಲ. ಸಾವನ್ನು ರಾಜಕೀಯ ತೆವಲಿಗೆ ಬಳಸಿಕೊಂಡರು’ ಎಂದರು.

ರಥೋತ್ಸವ ಹೊಸಪೇಟೆ ತಾಲ್ಲೂಕು ಮರಿಯಮ್ಮನಹಳ್ಳಿಯ ಲಕ್ಷ್ಮೀನಾರಾಯಣಸ್ವಾಮಿ ಮತ್ತು ಆಂಜನೇಯ ಸ್ವಾಮಿಯ ಜೋಡಿ ರಥೋತ್ಸವ ಭಾನುವಾರ ಸಂಜೆ ವಿಜೃಂಭಣೆಯಿಂದ ನಡೆಯಿತು ಪ್ರಜಾವಾಣಿ ಚಿತ್ರ: ಎಚ್.ಎಸ್.ಶ್ರೀಹರಪ್ರಸಾದ್

‘ರಾಜೀನಾಮೆ ನೀಡಿ ಚುನಾವಣೆ ಎದುರಿಸಲಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೀನು ಮತ್ತೊಬ್ಬರ ಭಿಕ್ಷೆಯ ಮೇಲೆ ಶಾಸಕನಾಗಿರುವೆ. ಧಮ್ ಇದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮತ್ತೊಮ್ಮೆ ಚುನಾವಣೆ ಎದುರಿಸು. ನಾನೂ ನನ್ನ ಕ್ಷೇತ್ರಕ್ಕೆ ರಾಜೀನಾಮೆ ನೀಡಿ, ಭಗವಾಧ್ವಜದ ಮೇಲೆ ಚುನಾವಣೆ ಎದುರಿಸುವೆ. ನನಗೆ ಮುಸ್ಲಿಂ ಮತಗಳು ಬೇಕಿಲ್ಲ’ ಎಂದು ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸವಾಲೆಸೆದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಭ್ರಷ್ಟಾಚಾರ, ಕುಟುಂಬ ರಾಜಕಾರಣದ ಬಗ್ಗೆ ನಿಷ್ಠುರವಾಗಿ ಮಾತನಾಡಿದ ಕಾರಣಕ್ಕೆ ನನ್ನನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ. ನಾನು ಯಾವುದೇ ಪಕ್ಷ ಕಟ್ಟಲ್ಲ. ಕಾಂಗ್ರೆಸ್‌ಗೆ ಸೇರಲ್ಲ. ಹಿಂದುತ್ವದಿಂದ ದೂರ ಸರಿದಿರುವ ಬಿಜೆಪಿಯನ್ನು ಮತ್ತೆ ಹಿಂದುತ್ವಕ್ಕೆ ಮರಳಿ ತರಲು ಹೋರಾಟ ನಡೆಸುತ್ತೇನೆ’ ಎಂದು ಪುನರುಚ್ಚರಿಸಿದರು.

‘ಉಚ್ಚಾಟನೆಯನ್ನು ಖಂಡಿಸಿ, ಈಗಾಗಲೇ ಪಂಚಮಸಾಲಿ ಸಮಾಜದಿಂದ ಹಾಗೂ ಹಿಂದೂ ಸಂಘಟನೆಗಳಿಂದ ರಾಜ್ಯದಲ್ಲಿ ಪ್ರತಿಭಟನೆ ನಡೆದಿವೆ. ನಾನು ಯಾರಿಗೂ ದುಡ್ಡುಕೊಟ್ಟು ನನ್ನ ಪರವಾಗಿ ಹೋರಾಟ ಮಾಡಿ ಎಂದು ಹೇಳಿಲ್ಲ. ಅಭಿಮಾನ, ಪ್ರೀತಿ, ವಿಶ್ವಾಸದಿಂದ ನನ್ನ ಪರವಾಗಿ ಹೋರಾಟ ಮಾಡುತ್ತಿದ್ದಾರೆ’ ಎಂದರು.

ಸ್ವಾಗತಾರ್ಹ: ‘ಬೆಳಗಾವಿಯಲ್ಲಿ ಈ ಹಿಂದೆ ನಡೆದ ಅಧಿವೇಶನದ ವೇಳೆ ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ನಡೆದ ಲಾಠಿ ಚಾರ್ಜ್ ಪ್ರಕರಣವನ್ನು ಧಾರವಾಡ ಹೈಕೋರ್ಟ್ ಪೀಠ ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಯಿಂದ ತನಿಖೆ ನಡೆಸಿ, ಕಾಲಮಿತಿಯಲ್ಲಿ ವರದಿ ನೀಡುವಂತೆಯೂ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿರುವುದು ಸ್ವಾಗತಾರ್ಹ. ನಮ್ಮ ಸಮುದಾಯಕ್ಕೆ 2ಎ ಮೀಸಲಾತಿ ನೀಡಬೇಕು ಎಂದು ಕೇಳುತ್ತಿರುವುದು ನಮ್ಮ ನ್ಯಾಯಯುತವಾದ ಹಕ್ಕು’ ಎಂದರು.

‘ಹಿಂದೂ ಕಾರ್ಯಕರ್ತರ ಮೇಲೆ ಹಲ್ಲೆಗಳು ನಡೆಯುತ್ತಿದ್ದು, ಅವರ ರಕ್ಷಣೆಗಾಗಿ ಶೀಘ್ರದಲ್ಲಿಯೇ ಬೆಂಗಳೂರಿನಲ್ಲಿ ಕಾನೂನು ಘಟಕ ಸ್ಥಾಪನೆ ಮಾಡಲಾಗುವುದು’ ಎಂದು ಹೇಳಿದರು.

ತಿರುಪತಿ ಒಪ್ಪಂದ: ಯತ್ನಾಳ

‘ಬಿ.ಎಸ್.ಯಡಿಯೂರಪ್ಪ ಆಶೀರ್ವಾದದಿಂದ ಸದಾನಂದ ಗೌಡ, ಜಗದೀಶ ಶೆಟ್ಟರ್ ಹಾಗೂ ಬಸವರಾಜ ಬೊಮ್ಮಾಯಿ ಈ ಮೂವರೂ ಮುಖ್ಯಮಂತ್ರಿಯಾಗಿದ್ದಾರೆ. ಕೋವಿಡ್ ಸಮಯದಲ್ಲಿ ಬಸವರಾಜ ಬೊಮ್ಮಾಯಿ ಅವರನ್ನು ಸಿಎಂ ಮಾಡುವ ಮುಂಚೆ ತಿರುಪತಿಯಲ್ಲಿ ಮಹತ್ವವಾದ ಒಪ್ಪಂದವಾಗಿತ್ತು. ಅದುವೇ ‘ತಿರುಪತಿ ಒಪ್ಪಂದ’. ಈ ವೇಳೆ ಮೂರು ಷರತ್ತು ಹಾಕಲಾಗಿತ್ತು. ಅವಕ್ಕೆಲ್ಲ ಒಪ್ಪಿದ ಮೇಲೆಯೇ ಅವರನ್ನು ಮುಖ್ಯಮಂತ್ರಿ ಮಾಡಲಾಯಿತು’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

‘ಯಾವುದೇ ಕಾರಣಕ್ಕೂ ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡಬಾರದು. ಬಸನಗೌಡ ಯತ್ನಾಳ ಅವರನ್ನು ಮಂತ್ರಿಯನ್ನಾಗಿ ಮಾಡಬಾರದು. ನೀನು ಮುಖ್ಯಮಂತ್ರಿ ಸ್ಥಾನದಿಂದ ಇಳಿಯುವಾಗ ನನ್ನ ಕೊನೆಯ ಮಗನನ್ನು ಮುಖ್ಯಮಂತ್ರಿಯಾಗಿ ಮಾಡಬೇಕು’ ಎಂಬ ಮೂರು ಷರತ್ತುಗಳನ್ನು ಬೊಮ್ಮಾಯಿ ಅವರಿಗೆ ವಿಧಿಸಲಾಗಿತ್ತು’ ಎಂದು ಯತ್ನಾಳ ಒಪ್ಪಂದದ ಮಾಹಿತಿ ಬಿಚ್ಚಿಟ್ಟರು.

‘ವಿರಳ ಕಾಯಿಲೆ: ಮಕ್ಕಳ ಚಿಕಿತ್ಸೆಗೆ ಯೋಜನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರಳ ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳಿಗೆ ಸಮರ್ಪಕ ಚಿಕಿತ್ಸೆ ಒದಗಿಸಲು ಕಾರ್ಪೊರೇಟ್ ಸಂಸ್ಥೆಗಳ ಸಹಯೋಗದಲ್ಲಿ ಯೋಜನೆ ರೂಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಕೇಂದ್ರ ಆರೋಗ್ಯ ಸಚಿವಾಲಯವು ‘ವಿರಳ ರೋಗಗಳ ರಾಷ್ಟ್ರೀಯ ನೀತಿ–2021’ರ (ತಿದ್ದುಪಡಿ) ಅಡಿ ತಲಾ ₹50 ಲಕ್ಷದವರೆಗೆ ಉಚಿತ ಚಿಕಿತ್ಸೆ ಹಾಗೂ ಔಷಧ ಒದಗಿಸುತ್ತಿದೆ. 2016ರಿಂದ ರಾಜ್ಯದಲ್ಲಿ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿಯೂ (ಐಜಿಐಸಿಎಚ್) ಚಿಕಿತ್ಸೆ ನೀಡಲಾಗುತ್ತಿದೆ. ಈ ಸಂಸ್ಥೆಯಲ್ಲಿ 22 ಮಕ್ಕಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಈವರೆಗೆ ಮಕ್ಕಳಲ್ಲಿನ ವಿರಳ ಕಾಯಿಲೆಗಳ ಚಿಕಿತ್ಸೆಗಾಗಿ ಸಂಸ್ಥೆಗೆ ರಾಜ್ಯ ಸರ್ಕಾರದಿಂದ ₹76 ಕೋಟಿ ಅನುದಾನ ಒದಗಿಸಲಾಗಿದೆ. ಈಗ ಹೆಚ್ಚಿನ ಅನುದಾನಕ್ಕೆ ಕೇಂದ್ರ ಸರ್ಕಾರಕ್ಕೂ ಮನವಿ ಮಾಡಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯು ತಿಳಿಸಿದೆ.

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಇರಿಸಲಾಗಿರುವ ಮೂಲ ನಿಧಿಯಲ್ಲಿ ಅಲ್ಪ ಭಾಗವನ್ನು ವಿರಳ ಕಾಯಿಲೆ ಎದುರಿಸುತ್ತಿರುವ ಮಕ್ಕಳ ಚಿಕಿತ್ಸೆಗೆ ಬಳಸಬೇಕು ಎಂದು ಐಜಿಐಸಿಎಚ್ ನಿರ್ದೇಶಕ ಡಾ.ಕೆ.ಎಸ್. ಸಂಜಯ್ ಅವರಿಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ನಿರ್ದೇಶನ ನೀಡಿದ್ದಾರೆ.

ಅನುವಂಶಿಕ ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳಿಗೆ ಸೂಕ್ತ ಚಿಕಿತ್ಸೆ ಒದಗಿಸಲು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ನೆರವಾಗುವಂತೆ ಕಾರ್ಪೊರೇಟ್ ಸಂಸ್ಥೆಗಳಿಗೆ ವೈದ್ಯಕೀಯ ಶಿಕ್ಷಣ ಇಲಾಖೆ ಮನವಿ ಮಾಡಿದೆ.

ವಿರಳ ಕಾಯಿಲೆ ಪೀಡಿತರ ಕುಟುಂಬಸ್ಥರು ಆರ್ಥಿಕ ನೆರವಿನ ನಿರೀಕ್ಷೆಯಲ್ಲಿ ಇರುವ ಬಗ್ಗೆ ‘ಏರುತ್ತಲೇ ಇದೆ ಚಿಕಿತ್ಸಾ ವೆಚ್ಚ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಫೆ.26ರಂದು ವಿಶೇಷ ವರದಿ ಪ್ರಕಟವಾಗಿತ್ತು.

‘ಲಿಂಗಾಯತ ಧರ್ಮದ ವಿರುದ್ಧ ಆರ್‌ಎಸ್‌ಎಸ್ ಸಂಚು’

ಪ್ರಜಾವಾಣಿ ವಾರ್ತೆ

ಮೈಸೂರು: ‘ಆರ್‌ಎಸ್‌ಎಸ್, ವಿಶ್ವ ಹಿಂದೂ ಪರಿಷತ್‌ನಂತಹ ಸಂಘಟನೆಗಳು ಲಿಂಗಾಯತರನ್ನೇ ಮುಂದಿಟ್ಟುಕೊಂಡು ಲಿಂಗಾಯತ ಧರ್ಮದ ಅವಹೇಳನ ಮಾಡುತ್ತಿವೆ’ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಮಹಾ ಪ್ರಧಾನ ಕಾರ್ಯದರ್ಶಿ ಶಿವಾನಂದ ಜಾಮದಾರ ದೂರಿದರು.

ಜಾಗತಿಕ ಲಿಂಗಾಯತ ಮಹಾಸಭಾ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಲಿಂಗಾಯತ ಸಾಂಸ್ಕೃತಿಕ ಸಮಿತಿ ಸಹಯೋಗದಲ್ಲಿ ನಗರದಲ್ಲಿ ಭಾನುವಾರ ಟಿ.ಆರ್. ಚಂದ್ರಶೇಖರ್ ಸಂಪಾದನೆಯ ‘ವಚನ ದರ್ಶನ– ಮಿಥ್ಯ v/s ಸತ್ಯ’ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬ್ರಾಹ್ಮಣರೆಲ್ಲ ಒಗ್ಗೂಡಿ ಬಸವ ಧರ್ಮದ ವಿರುದ್ಧ ದೊಡ್ಡ ಯುದ್ಧವನ್ನೇ ಸಾರಿದ್ದಾರೆ. ಅದರ ಮೊದಲ ಭಾಗವಾಗಿ 'ವಚನ ದರ್ಶನ' ಎನ್ನುವ ಕೃತಿಯನ್ನು ಕಳೆದ ವರ್ಷ ಜುಲೈನಲ್ಲಿ ಬಿಡುಗಡೆ ಮಾಡಲಾಗಿದೆ. ಬಸವ ತತ್ವದ ವಿರೋಧಿಯಾದ ಈ ಕೃತಿಯನ್ನು ಒಟ್ಟು 9 ಕಡೆಗಳಲ್ಲಿ ಬಿಡುಗಡೆ ಮಾಡಿದ್ದು, ಇದಕ್ಕೆ ಲಿಂಗಾಯತ ಸ್ವಾಮೀಜಿಗಳು ಹಾಗೂ ಮುಖಂಡರನ್ನೇ ದಾಳವನ್ನಾಗಿ ಬಳಸಿಕೊಳ್ಳಲಾಗಿದೆ. ಆರ್‌ಎಸ್‌ಎಸ್‌ಗೆ ಸಂಬಂಧಿಸಿದವರೇ ಇದನ್ನು ಪ್ರಕಟಿಸಿದ್ದು, ದತ್ತಾತ್ರೇಯ ಹೊಸಬಾಳೆ, ಮುಕುಂದನ್ ಮೊದಲಾದವರು ಭಾಷಣ ಮಾಡಿದ್ದಾರೆ’ ಎಂದು ದೂರಿದರು.

ಅತಿಕ್ರಮಿಸುವ ಪ್ರಯತ್ನ: ‘ಬಸವಣ್ಣ ಹಿಂದೂ ಧರ್ಮದ ಸುಧಾರಕ. ವಚನಗಳು ಹುಟ್ಟಿದ್ದೇ ವೇದದಿಂದ ಎಂದು ಅಪಪ್ರಚಾರ ಮಾಡಲಾಯಿತು. ಆ ಬಗ್ಗೆ ಸಿನಿಮಾ ಕೂಡ ಮಾಡಿಸಿದರು. ಮುಂದೆ ₹900 ಕೋಟಿ ವೆಚ್ಚದಲ್ಲಿ ಬಸವಕಲ್ಯಾಣದಲ್ಲಿ ನಿರ್ಮಾಣ ಆಗುತ್ತಿರುವ ‘ಅನುಭವ ಮಂಟಪ’ವನ್ನು ಅತಿಕ್ರಮಿಸುವ ಪ್ರಯತ್ನ ನಡೆಯಲಿದೆ. ಬಸವಣ್ಣರ ಕಾಲದಲ್ಲಿ ಅನುಭವ ಮಂಟಪವೇ ಇರಲಿಲ್ಲ ಎನ್ನುವ ವೀಣಾ ಬನ್ನಂಜೆ ಅವರ ಹೇಳಿಕೆಯೂ ಈ ಹುನ್ನಾರದ ಒಂದು ಭಾಗ’ ಎಂದು ದೂರಿದರು.

‘ಲಿಂಗಾಯತರು ಸನಾತನಿಗಳು, ಬ್ರಾಹ್ಮಣರ ವಿರೋಧಿ ಅಲ್ಲ. ನಿಮ್ಮ ಆಚಾರ ಗೌರವಿಸುತ್ತೇವೆ. ಆದರೆ, ನಮ್ಮ ಧರ್ಮದ ಬಗ್ಗೆ ಅವಹೇಳನ- ಹಸ್ತಕ್ಷೇಪ ಮಾಡಬೇಡಿ’ ಎಂದರು.

ಲೇಖಕ ಟಿ.ಆರ್. ಚಂದ್ರಶೇಖರ್ ಮಾತನಾಡಿದರು. ಮೈಸೂರು ಹೊಸಮಠದ ಚಿದಾನಂದ ಸ್ವಾಮೀಜಿ, ತಿ.ನರಸೀಪುರದ ಅಲ್ಲಮಪ್ರಭು ಶೂನ್ಯಪೀಠದ ಗೌರಿಶಂಕರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಕಾರ್ಯದರ್ಶಿ ಎಚ್.ಎಂ. ರೇಣುಕಾಪ್ರಸನ್ನ, ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ ಪಾಲ್ಗೊಂಡಿದ್ದರು.

ಶ್ರೀಗಳು ಖಾವಿ ತೊರೆದು ಖಾದಿ ಹಾಕಿಕೊಳ್ಳಲಿ: ಕಾಶಪ್ಪನವರ

ಪ್ರಜಾವಾಣಿ ವಾರ್ತೆ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): ‘ಸಮಾಜದಿಂದ ಸ್ವಾಮೀಜಿ ಇದ್ದಾರೆ, ಸ್ವಾಮೀಜಿಯಿಂದ ಸಮಾಜ ಇಲ್ಲ. ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಬೇಕಿದ್ದರೆ ಸ್ವಾಮೀಜಿಯನ್ನು ತಮ್ಮ ಮನೆಯಲ್ಲಿ ಇಟ್ಟುಕೊಂಡು ಪಂಚಮಸಾಲಿ ಪೀಠ ಮಾಡಲಿ. ಶ್ರೀಗಳು ಖಾವಿ ತೊರೆದು ಖಾದಿ ಹಾಕ್ಕೊಂಡು ಯತ್ನಾಳ ಜೊತೆ ರಾಜಕಾರಣ ಮಾಡಲಿ’ ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಆಕ್ರೋಶ ವ್ಯಕ್ತಪಡಿಸಿದರು.

ವಿಜಯಾನಂದ ಕಾಶಪ್ಪನವರ

ಕೂಡಲಸಂಗಮದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಮಾಜಕ್ಕೆ ಯತ್ನಾಳ ಕೊಡುಗೆ ಏನು? ಎರಡು ವರ್ಷದಿಂದ ಸಮಾಜ ಎನ್ನುವ ಈತ ಸಮಾಜಕ್ಕೆ ಯಾವ ಕೊಡುಗೆ ನೀಡಿಲ್ಲ. ಕೂಡಲಸಂಗಮ ಪೀಠದ ಬಗ್ಗೆ ಮಾತನಾಡುವ ನೈತಿಕ ಹಕ್ಕೇ ಈತನಿಗೆ ಇಲ್ಲ. ಇನ್ನೊಂದು ಪೀಠದವರು ಈತನನ್ನು ಒಳಗೆ ಕರೆದುಕೊಂಡೇ ಇಲ್ಲ. ಕೂಡಲಸಂಗಮ ಪೀಠವನ್ನು ಆರಂಭಿಸಿದವರು ಪ್ರಭಣ್ಣ ಹುಣಸಿಕಟ್ಟಿ, ನೀಲಕಂಠ ಅಸೂಟಿ, ನಾನು. ಸ್ವಾಮೀಜಿಗಳಿಗೆ ಅನ್ನ, ಆಶ್ರಯ ಕಲ್ಪಿಸಿದವರು ನಾವು, ಯತ್ನಾಳ ಅಲ್ಲ. ಟ್ರಸ್ಟ್‌ಗೆ ಭೂಮಿ ಖರೀದಿಸುವಾಗ ಕಾನೂನಿನ ತೊಡಕುಗಳಿಂದ ಟ್ರಸ್ಟಿಗಳ ಹೆಸರಿನಲ್ಲಿ ಖರೀದಿಸಿದೆ. ಇದರಲ್ಲಿ ರಾಜಕಾರಣ ಮಾಡುವ ಕಾರ್ಯವನ್ನು ಯತ್ನಾಳ ಮಾಡುತ್ತಿದ್ದಾನೆ. ಸಮಾಜವನ್ನು ತನ್ನ ರಾಜಕಾರಣ, ಮತಗಳಿಕೆಯಾಗಿ ಮಾಡಿಕೊಳ್ಳುತ್ತಿದ್ದಾನೆ’ ಎಂದು ಯತ್ನಾಳ ವಿರುದ್ಧ ಏಕವಚನದಲ್ಲಿ ಹರಿಹಾಯ್ದರು.

‘ಎಲ್ಲರಿಗೂ ಕೊನೆ ಅಂತ ಇರುತ್ತೆ, ಹಾಗೆಯೇ ಯತ್ನಾಳಗೂ. ಸುನಾಮಿ ಬಂದಾಗ ಏನೆಲ್ಲ ಆಗುತ್ತೆ ಗೊತ್ತಲ್ಲ... ಹಾಗೇ ಸಮಾಜ ಕೂಡ ಬದಲಾವಣೆ ಬಯಸಿದಾಗ ಈ ಸ್ವಾಮೀಜಿ ಎಲ್ಲಿ ಇರುತ್ತಾರೆ ನೋಡ್ತಾ ಇರಿ. ಅದನ್ನು ಯಾರೂ ತಡೆಯಲು ಆಗಲ್ಲ’ ಎಂದರು.

ಸಿಇಟಿ: ಪ್ರವೇಶ ಪತ್ರ ಡೌನ್‌ಲೋಡ್ ಲಿಂಕ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಇದೇ 16 ಮತ್ತು 17ರಂದು ನಡೆಯಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಪ್ರವೇಶ ಪತ್ರವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಭಾನುವಾರ ಬಿಡುಗಡೆ ಮಾಡಿದೆ. ಈ ಬಾರಿ 3,30,875 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ.

ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್‌ನಲ್ಲಿ ‘ಯುಜಿಸಿಇಟಿ–25 ಪ್ರವೇಶ ಪತ್ರ’ ಎನ್ನುವ ಲಿಂಕ್ ಮೇಲೆ ಕ್ಲಿಕ್ ಮಾಡಿ ತಮ್ಮ ಲಾಗಿನ್ ಐಡಿ ಸಂಖ್ಯೆ, ಹೆಸರು ದಾಖಲಿಸುವ ಮೂಲಕ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

‘ಇದೇ ಮೊದಲ ಬಾರಿಗೆ ಒಟಿಪಿ ಮತ್ತು ಮುಖಚಹರೆ ಆಧಾರಿತ ಲಾಗಿನ್ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಈ ಬಾರಿ ಪ್ರವೇಶ ಪತ್ರದಲ್ಲಿ ಕ್ಯೂಆರ್ ಕೋಡ್ ನೀಡಲಾಗಿದೆ. ಜತೆಗೆ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿ ಎಂದು ಮಾದರಿ ಒಎಂಆರ್ ಶೀಟ್ ಹಾಗೂ ಮಾರ್ಗಸೂಚಿ ಪಟ್ಟಿ– ಹೀಗೆ ಒಟ್ಟು ಎರಡು ಪುಟಗಳಿದ್ದು ಅವುಗಳನ್ನು ಡೌನ್‌ಲೋಡ್ ಮಾಡಿಕೊಂಡು ಓದಿಕೊಳ್ಳಬೇಕು. ಮಾದರಿ ಒಎಂಆರ್ ಶೀಟ್ ಅನ್ನೂ ವಿದ್ಯಾರ್ಥಿಗಳು ಅಭ್ಯಾಸಕ್ಕೆ ಬಳಸಬೇಕು. ಆ ಮೂಲಕ, ಪರೀಕ್ಷೆ ಸಂದರ್ಭದಲ್ಲಿ ಆಗುವ ತಪ್ಪುಗಳನ್ನು ತಪ್ಪಿಸಬಹುದು’ ಎಂದು ಅವರು ಸಲಹೆ ನೀಡಿದ್ದಾರೆ.

ಏಪ್ರಿಲ್ 15ರಂದು ನಡೆಯಲಿರುವ ಕನ್ನಡ ಭಾಷಾ ಪರೀಕ್ಷೆಗೂ ಇದೇ ಪ್ರವೇಶ ಪತ್ರ ಅನ್ವಯ ಆಗಲಿದೆ ಎಂದೂ ಅವರು ತಿಳಿಸಿದ್ದಾರೆ.

ರಾಜ್ಯಪಾಲರ ನಡೆಗೆ ಪ್ರಿಯಾಂಕ್ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಾವು ಹೇಳಿದ್ದೇ ನಡೆಯಬೇಕೆಂದು ರಾಜ್ಯಪಾಲರು ಹೇಳುತ್ತಿದ್ದಾರೆ’ ಎಂದು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಿಯಾಂಕ್ ಖರ್ಗೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯಕ್ಕೆ ಕುಲಪತಿ ನೇಮಕ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ ಪ್ರಿಯಾಂಕ್, ‘ಹಾಗಿದ್ದರೆ, ಸದನ ಅಂಗೀಕರಿಸಿದ ಮಸೂದೆಗೆ ಕಿಮ್ಮತ್ತು ಇಲ್ಲವೇ’ ಎಂದು ಪ್ರಶ್ನಿಸಿದರು. ‘ರಾಜ್ಯಪಾಲರ ಪತ್ರ ನಿರೀಕ್ಷಿತ’ ಎಂದೂ ಹೇಳಿದರು.

‘ವಿಧಾನಸಭೆಯೇ ‘ಸುಪ್ರೀಂ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯಕ್ಕೆ ಕುಲಪತಿ ನೇಮಕ ಕುರಿತಂತೆ ನಾವು ಮಸೂದೆ ಮಾಡಿ, ಎರಡೂ ಸದನಗಳಲ್ಲಿ ಅಂಗೀಕರಿಸಿದ್ದೇವೆ. ಈ ಮಸೂದೆಯನ್ನು ಎಲ್ಲರೂ ಒಪ್ಪಿದ್ದಾರೆ. ಅವರಿಗೆ (ರಾಜ್ಯಪಾಲ) ಇಷ್ಟ ಆಗಿಲ್ಲ ಎಂದಾದರೆ ನಾವೇನು ಮಾಡಲು ಆಗುತ್ತದೆ’ ಎಂದರು.

‘ಕುಲಪತಿ ನೇಮಕ ವಿಚಾರದಲ್ಲಿ ಮುಕ್ತ ಅವಕಾಶಕ್ಕಾಗಿ ನಿಯಮ ರೂಪಿಸಲು ಮಸೂದೆ ಮಾಡಿದ್ದೇವೆ. ಸದ್ಯದ ನೇಮಕಾತಿ ಪ್ರಕ್ರಿಯೆ ಪ್ರಕಾರ ಕಡತ ರಾಜ್ಯಪಾಲರ ಬಳಿ ಹೋಗಬೇಕು’ ಎಂದರು.

ವಿಧಾನಸೌಧಕ್ಕೆ ಅಳವಡಿಸಲಾದ ವಿದ್ಯುತ್ ದೀಪಾಲಂಕಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಚಾಲನೆ ನೀಡಿದರು ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ಸಂಕ್ಷಿಪ್ತ ಸುದ್ದಿ

ಮಹಿಷಿ ಉತ್ತರಾದಿ ಮಠ: ಮಂಕಿ ಕ್ಯಾಪ್ ಧರಿಸಿ ದರೋಡೆ

ತೀರ್ಥಹಳ್ಳಿ (ಶಿವಮೊಗ್ಗ): ತಾಲ್ಲೂಕಿನ ಮಹಿಷಿ ಉತ್ತರಾದಿ ಮಠದಲ್ಲಿ ಶನಿವಾರ ತಡರಾತ್ರಿ ದರೋಡೆ ನಡೆದಿದೆ. ಮಂಕಿ ಕ್ಯಾಪ್ ಧರಿಸಿ ಒಳನುಗ್ಗಿರುವ 10ಕ್ಕೂ ಹೆಚ್ಚು ದರೋಡೆಕೋರರು ಲಾಂಗು, ಮಚ್ಚು ತೋರಿಸಿ ಮಠದಲ್ಲಿದ್ದವರನ್ನು ಹೆದರಿಸಿದ್ದಾರೆ. ಲ್ಯಾಪ್ ಟಾಪ್, ₹50,000 ನಗದು ಹಾಗೂ 4 ಮೊಬೈಲ್ ಫೋನ್‌ಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಮಠದಲ್ಲಿದ್ದ ಸಿಸಿಟಿವಿ ಕ್ಯಾಮೆರಾಗಳಿಗೆ ಹಾನಿ ಮಾಡಿರುವ ದುಷ್ಕರ್ಮಿಗಳು, ಡಿವಿಆರ್ ಕಿತ್ತುಕೊಂಡು ಹೋಗಿದ್ದಾರೆ. ಕೃತ್ಯದಲ್ಲಿ ಸ್ಥಳೀಯರ ಕೈವಾಡ ಇದೆ ಎಂದು ಹೇಳಲಾಗುತ್ತಿದೆ. ಈ ಸಂಬಂಧ ಮಾಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾಳೂರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮಹಜರು ನಡೆಸಿದ್ದಾರೆ. ಭಾನುವಾರ ಬೆಳಿಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಮಠದಲ್ಲಿದ್ದವರಿಂದ ಮಾಹಿತಿ ಪಡೆದಿದ್ದಾರೆ.

‘ಹಿಂದುಳಿದವರಿಗೂ ಅವಕಾಶ ಕೊಡಲಿ’

ಚಿಕ್ಕಮಗಳೂರು: ‘ಅಯೋಧ್ಯೆಯ ರಾಮಮಂದಿರದಲ್ಲಿ ಮೂರ್ತಿ ಮತ್ತು ಜೀವ ಪ್ರತಿಷ್ಠಾಪನೆಯನ್ನು ಸ್ವತಃ ಪ್ರಧಾನಿ ನರೇಂದ್ರ ಮೋದಿ ಮಾಡಿದರು. ಅದೇ ರೀತಿ ಎಲ್ಲಾ ದೇಗುಲಗಳಲ್ಲಿ ಹಿಂದುಳಿದ ವರ್ಗದವರಿಗೆ ಅವಕಾಶ ನೀಡುವ ಕಾನೂನು ಜಾರಿಗೆ ತರಲಿ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಸಂತೋಷ್ ಲಾಡ್

ಕೊಪ್ಪದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ರಾಮ ಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆ ವೇಳೆ ಯಾವ ಪುರೋಹಿತರಾಗಲೀ, ಬ್ರಾಹ್ಮಣರಾಗಲೀ ಇರಲಿಲ್ಲ. ಮೋದಿ ಅವರು ಮಾತ್ರ ಇದ್ದರು. ಒಬಿಸಿ ವರ್ಗಕ್ಕೆ ಸೇರಿದವರು ಎಂದು ಮೋದಿ ಅವರೇ ಹೇಳಿಕೊಂಡಿದ್ದಾರೆ. ಗುಡಿ ಕಟ್ಟಿದವರು, ಮೂರ್ತಿ ಕೆತ್ತಿದ ಶಿಲ್ಪಿಗಳು ಸೇರಿ ಸಣ್ಣ ಸಮುದಾಯಗಳಿಗೆ ಮೂರ್ತಿ ಪ್ರತಿಷ್ಠಾಪನೆಯ ಅವಕಾಶ ಸಿಗಬೇಕಲ್ಲವೇ’ ಎಂದು ಪ್ರಶ್ನಿಸಿದರು.

‘ವಕ್ಫ್ ತಿದ್ದುಪಡಿ ಮಸೂದೆ ರೀತಿಯಲ್ಲಿ ಹಿಂದುಳಿದವರಿಗೆ ದೇಗುಲದಲ್ಲಿ ಪೂಜಿಸಲು ಕಾನೂನು ಜಾರಿಗೊಳಿಸಬೇಕು ಎಂಬುದು ನನ್ನ ಮನವಿ’ ಎಂದರು.

ಸ್ಫೋಟ: ವ್ಯಕ್ತಿ ಸಾವು

ಮುದಗಲ್ (ರಾಯಚೂರು ಜಿಲ್ಲೆ): ಸಮೀಪದ ಮಾಕಾಪುರ ಗ್ರಾಮದ ಗ್ರ್ಯಾನೈಟ್ ಗಣಿಯಲ್ಲಿ ಸಿಡಿಮದ್ದು ಜೋಡಿಸುವ ವೇಳೆ ಸ್ಫೋಟಗೊಂಡು ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲ್ಲೂಕಿನ ಮಣಸಿಗೇರಿ ಗ್ರಾಮದ ವೆಂಕಟೇಶ (38) ಮೃತಪಟ್ಟಿದ್ದಾರೆ. ಅವರ ಎದೆ ಮತ್ತು ಮುಖ ಛಿದ್ರಗೊಂಡಿತ್ತು. ಮಾಲಿಂಗಪ್ಪ ಎನ್ನುವವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮುದಗಲ್ ಹಾಗೂ ಸುತ್ತಲಿನ ಮಾಕಾಪುರು, ಆದಾಪುರು ಸೇರಿದಂತೆ ಇನ್ನಿತರ ಕಡೆ ಗ್ರ್ಯಾನೈಟ್ ಗಣಿಗಾರಿಕೆ ನಡೆಯುತ್ತಿದೆ. ಕೆಲ ಕ್ವಾರಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿಯಮ ಪಾಲನೆ ಮಾಡುತ್ತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದರು.

29 ರಿಂದ ಬಸವಾದಿ ಶರಣರ ವೈಭವ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): ‘ಬಸವ ಜಯಂತಿಯಂದು ಬಸವ ತತ್ವವನ್ನು ಎಲ್ಲೆಡೆ ಸಾರಲು ‘ಅನುಭವ ಮಂಟಪ- ಬಸವಾದಿ ಶರಣರ ವೈಭವ’ ಹೆಸರಿನಲ್ಲಿ 12ನೇ ಶತಮಾನದ ಅನುಭವ ಮಂಟಪವನ್ನು ಮರು ಸೃಷ್ಟಿ ಮಾಡಲಾಗುತ್ತದೆ.ಏಪ್ರಿಲ್ 16 ರಂದು ಸ್ತಬ್ಧಚಿತ್ರ ರಥಕ್ಕೆ ಬೆಂಗಳೂರಿನಲ್ಲಿ ಚಾಲನೆ ನೀಡಲಾಗುವುದು. ನಂತರ ಜಿಲ್ಲೆಯಾದ್ಯಂತ ಸಂಚರಿಸಿ ಪ್ರಚಾರ ಮಾಡಲಾಗುವುದು’ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಸವಣ್ಣನ ತತ್ವಗಳ ಬಗ್ಗೆ ಚರ್ಚೆ ಆಗಬೇಕು. ಈಗಿನ ಯುವ ಜನಾಂಗಕ್ಕೆ ತಲುಪಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಂಡಿದೆ’ ಎಂದರು.

‘ಏ.29, 30ರಂದು ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ. ಏ.29 ರಂದು ಗೋಷ್ಠಿಗಳು, ಬಸಣ್ಣನವರ ಕುರಿತು ನಾಟಕ ಪ್ರದರ್ಶನ ಇರಲಿದೆ. ಏ.30ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸುವರು, ಬಸವಣ್ಣ ಕುರಿತು ಪುಸ್ತಕ ಬಿಡುಗಡೆ ಮಾಡಲಾಗುವುದು. ಎಲ್ಲ ಧರ್ಮದ ಗುರುಗಳು ಭಾಗವಹಿಸಲಿದ್ದಾರೆ’ ಎಂದರು.

ಒಂದೂವರೆ ಗಂಟೆಗೂ ಹೆಚ್ಚು ಹೊತ್ತು ಮಾತುಕತೆ

ಖರ್ಗೆ– ಪರಮೇಶ್ವರ ಚರ್ಚೆ; ಕುತೂಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪಕ್ಷದ ವರಿಷ್ಠರನ್ನು ದೆಹಲಿಯಲ್ಲಿ ಭೇಟಿಯಾದ ಬೆನ್ನಲ್ಲೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಗೃಹ ಸಚಿವ ಜಿ. ಪರಮೇಶ್ವರ ಭೇಟಿ ಮಾಡಿ ಚರ್ಚೆ ನಡೆಸಿರುವುದು ಕುತೂಹಲ ಮೂಡಿಸಿದೆ.

ಸದಾಶಿವನಗರದಲ್ಲಿರುವ ಖರ್ಗೆ ಅವರ ನಿವಾಸಕ್ಕೆ ಭಾನುವಾರ ತೆರಳಿದ ಪರಮೇಶ್ವರ, ಒಂದೂವರೆ ಗಂಟೆಗೂ ಹೆಚ್ಚು ಹೊತ್ತು ಚರ್ಚೆ ನಡೆಸಿದರು.

ಪಕ್ಷದೊಳಗಿನ ವಿದ್ಯಮಾನಗಳ ಬಗ್ಗೆ ಪರಮೇಶ್ವರ ತೀವ್ರ ಅಸಮಾಧಾನಗೊಂಡಿದ್ದಾರೆ. ದೆಹಲಿಯ ಕರ್ನಾಟಕ ಭವನ ಉದ್ಘಾಟನಾ ಕಾರ್ಯಕ್ರಮಕ್ಕೆ ಆಹ್ವಾನ ನೀಡದ ಕಾರಣಕ್ಕೂ ಬೇಸರಗೊಂಡಿದ್ದರು. ಅಲ್ಲದೆ, ತುಮಕೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿ.ಕೆ. ಶಿವಕುಮಾರ್ ಜೊತೆ ವೇದಿಕೆ ಹಂಚಿಕೊಳ್ಳದೆ ಅಂತರ ಕಾಯ್ದುಕೊಂಡಿದ್ದರು.

ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ದೆಹಲಿ ಭೇಟಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸೇರಿದಂತೆ ರಾಜ್ಯ ರಾಜಕೀಯದಲ್ಲಿನ ಇತ್ತೀಚಿನ ವಿದ್ಯಮಾನಗಳ ಬಗ್ಗೆ ಉಭಯ ನಾಯಕರು ಸಮಾಲೋಚನೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಖರ್ಗೆ ಜೊತೆಗಿನ ಚರ್ಚೆಯ ವಿವರ ಬಹಿರಂಗಪಡಿಸದ ಪರಮೇಶ್ವರ, ‘ಇದು ಸೌಜನ್ಯದ ಭೇಟಿ. ರಾಜಕೀಯ ವಿಚಾರ ಏನೂ ಮಾತನಾಡಿಲ್ಲ. ಖರ್ಗೆಯವರು ನನಗೆ ಹಿರಿಯಣ್ಣ ಇದ್ದ ಹಾಗೆ. ಕುಟುಂಬದ ವಿಚಾರ ಚರ್ಚೆ ಮಾಡಿದ್ದೇವೆ ಅಷ್ಟೆ’ ಎಂದಿದ್ದಾರೆ.

‘ಅವರು ರಾಜಕೀಯ ಬಗ್ಗೆ ಏನೂ ಕೇಳಿಲ್ಲ. ನಾನು ಮಾಹಿತಿ ಕೊಟ್ಟಿಲ್ಲ. ಅವರು ಎಐಸಿಸಿ ಅಧ್ಯಕ್ಷರು. ಅವರಿಗೆ ಅವರದ್ದೇ ಆದ ಮಾಹಿತಿಯ ಮೂಲಗಳಿವೆ’ ಎಂದರು.

ಸಚಿವರಿಂದ ಸಿ.ಎಂ ಭೇಟಿ: ರಾಹುಲ್ ಗಾಂಧಿ ಸೇರಿದಂತೆ ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೆಲವು ಸಚಿವರು ಒಬ್ಬೊಬ್ಬರಾಗಿ ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ. ವರಿಷ್ಠರ ಜೊತೆ ನಡೆದ ಮಾತುಕತೆ, ವರಿಷ್ಠರು ನೀಡಿರಬಹುದಾದ ಸಂದೇಶದ ಬಗ್ಗೆ ತಿಳಿದುಕೊಳ್ಳಲು ಸಚಿವರಾದ ಎಚ್.ಸಿ. ಮಹದೇವಪ್ಪ, ಸತೀಶ ಜಾರಕಿಹೊಳಿ, ಕೆ.ಎನ್. ರಾಜಣ್ಣ, ಜಿ. ಪರಮೇಶ್ವರ ಸೇರಿದಂತೆ ಹಲವು ಸಚಿವರು ಮುಖ್ಯಮಂತ್ರಿಯವರ ಕಾವೇರಿ ನಿವಾಸಕ್ಕೆ ಭೇಟಿ ನೀಡಿದರು.

‘ಬಂದೂಕು ಹಿಡಿದು ಎಚ್‌ಡಿಕೆ ಯುದ್ಧ ಮಾಡುತ್ತಾರೆಯೇ?’

‘ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಬಂದೂಕು ಹಿಡಿದು ರಾಜಕೀಯ ಯುದ್ಧ ಮಾಡುತ್ತಾರೆಯೇ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕುಮಾರಸ್ವಾಮಿ ಕೇಂದ್ರದಲ್ಲಿ ದೊಡ್ಡ ಖಾತೆಯ ಜವಾಬ್ದಾರಿ ನಿಭಾಯಿಸುತ್ತಿದ್ದಾರೆ. ಅವರು ಸರ್ಕಾರಕ್ಕೆ ಏನು ಸಲಹೆ, ಸೂಚನೆ ನೀಡುತ್ತಾರೊ ನೋಡೋಣ’ ಎಂದರು.

‘ರಾಜಕೀಯದಲ್ಲಿ ಟೀಕೆ ಟಿಪ್ಪಣಿಯನ್ನೇ ಯುದ್ಧ ಎಂದು ಭಾವಿಸಲಾಗುತ್ತದೆ. ನನ್ನ ಬಳಿ ಅದಕ್ಕೆ ದಾಖಲೆಗಳಿವೆ. ಅವುಗಳನ್ನು ಬಿಡುಗಡೆ ಮಾಡುತ್ತೇನೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ದಾಖಲೆಗಳನ್ನು ಬಿಡುಗಡೆ ಮಾಡಲಿ, ನಂತರ ನಾವು ಉತ್ತರ ಕೊಡುತ್ತೇವೆ’ ಎಂದು ಹೇಳಿದರು.

ಸಿಬಿಐಗೆ ವಹಿಸುವ ಅಗತ್ಯ ಇಲ್ಲ: ‘ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಪೊಲೀಸರು ನಡೆಸುತ್ತಿದ್ದಾರೆ. ಈ ಪ್ರಕರಣವನ್ನು ಸಿಬಿಐಗೆ ವಹಿಸುವ ಅಗತ್ಯ ಇಲ್ಲ’ ಎಂದು ತಿಳಿಸಿದರು.

‘ಪೊಲೀಸರ ತನಿಖೆಯಲ್ಲಿ ಲೋಪ ಕಂಡುಬಂದರೆ ಕ್ರಮ ಕೈಗೊಳ್ಳುತ್ತೇವೆ. ಶಾಸಕರ ಕೈವಾಡ ಇರುವ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು’ ಎಂದರು.

‘ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿಕುನ್ಹ ವಿಚಾರಣಾ ಆಯೋಗ ಕೋವಿಡ್ ಅವಧಿಯಲ್ಲಿ ನಡೆದ ಹಗರಣಗಳ ತನಿಖಾ ವರದಿಯನ್ನು ಸರ್ಕಾರಕ್ಕೆ ನೀಡಿದೆ. ಈ ಹಿಂದೆ ನೀಡಿದ್ದ ವರದಿ ಆಧರಿಸಿ ಎಫ್‌ಐಆರ್ ದಾಖಲಾಗಿವೆ. ಕೆಲವು ದೂರುಗಳು ಇನ್ನೂ ಪರಿಶೀಲನೆಯಲ್ಲಿವೆ’ ಎಂದು ಹೇಳಿದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ‘ಖಾತೆ ಬದಲಾವಣೆ ಬಗ್ಗೆ ಬೇಡಿಕೆ ಇಟ್ಟಿಲ್ಲ’ ಎಂದರು.

❦ ಸುಭಾಷಿತ ❦

ನಮ್ಮ ಪ್ರಯತ್ನವು ಸದಾಕಾಲ ಗರಿಕೆಯಂತೆ ಇರಲಿ. ಯಾರು ಎಷ್ಟೇ ತುಳಿದರೂ ಮತ್ತೆ ಚಿಗುರಬೇಕೆಂಬ ಧೈರ್ಯ ಜೊತೆಯಲ್ಲಿ ಇರಲಿ.
–ಗೌತಮ ಬುದ್ಧ

ಮೈಬಣ್ಣಕ್ಕೆ ಮೌಲ್ಯ ಆರೋಪಿಸುವ ಜಾಡ್ಯ ಇಲ್ಲವಾಗಿಸಲು ಪ್ರಬಲ ಇಚ್ಛಾಶಕ್ತಿ ಬೇಕು

ಕೇರಳ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾರದಾ ಮುರಳೀಧರನ್ ಅವರು ಫೇಸ್‌ಬುಕ್‌ನಲ್ಲಿ ಈಚೆಗೆ ಪ್ರಕಟಿಸಿರುವ ಬರಹವೊಂದು ಸಮಾಜದಲ್ಲಿ ಬಹಳ ಆಳವಾಗಿ ಬೇರೂರಿರುವ, ಮೈಬಣ್ಣ ಆಧಾರಿತ ಪೂರ್ವಗ್ರಹಗಳ ಬಗ್ಗೆ ದೊಡ್ಡ ಚರ್ಚೆ ಹುಟ್ಟುಹಾಕಿದೆ. ಮುಖ್ಯ ಕಾರ್ಯದರ್ಶಿಯಾಗಿ ತಮ್ಮ ಅಧಿಕಾರ ಅವಧಿಯನ್ನು ಯಾರೋ ಅಪರಿಚಿತ ವ್ಯಕ್ತಿಯೊಬ್ಬರು ತಮ್ಮ ಪತಿ ವಿ. ವೇಣು ಅವರ ಅಧಿಕಾರ ಅವಧಿಯ ಜೊತೆ ಹೋಲಿಸಿದ್ದುದರ ಬಗ್ಗೆ ಶಾರದಾ ಬರೆದಿದ್ದಾರೆ. ವೇಣು ಅವರ ಮೈಬಣ್ಣ ಎಷ್ಟು ಬಿಳಿಯಾಗಿದೆಯೋ ಅಷ್ಟೇ ಕಪ್ಪಾಗಿದೆ ಶಾರದಾ ಅವರ ಅಧಿಕಾರ ಅವಧಿ ಎಂಬುದು ಆ ಅಪರಿಚಿತನ ಮಾತು. ಆ ವ್ಯಕ್ತಿಯು ಶಾರದಾ ಅವರ ಕಪ್ಪು ಮೈಬಣ್ಣವನ್ನೂ ಪರೋಕ್ಷವಾಗಿ ಬೊಟ್ಟು ಮಾಡಿದ್ದಾನೆ. 'ಇದು ಕಪ್ಪು ಎಂದು ಕರೆಸಿಕೊಳ್ಳುವುದಕ್ಕೆ ಸಂಬಂಧಿಸಿದೆ (ಅದರ ಜೊತೆಯಲ್ಲೇ, ಹೆಣ್ಣಾಗಿರುವುದಕ್ಕೂ ಇಲ್ಲಿ ಒಂದು ಸಂಬಂಧ ಇದೆ), ಇದರ ಬಗ್ಗೆ ತೀವ್ರವಾಗಿ ನಾಚಿಕೆಪಟ್ಟುಕೊಳ್ಳಬೇಕು ಎಂಬಂತಿದೆ' ಎಂದು ಶಾರದಾ ಬರೆದಿದ್ದಾರೆ. ಶಾರದಾ ಅವರ ಈ ಬರಹವು ಮೈಬಣ್ಣ ಆಧರಿಸಿದ ಪೂರ್ವಗ್ರಹಗಳತ್ತ ಗಮನ ಸೆಳೆದಿದೆ. ಶಾರದಾ ಅವರ ಬರಹವು ಎರಡು ಪೂರ್ವಗ್ರಹಗಳನ್ನು ಪ್ರಧಾನವಾಗಿ ತೋರಿಸಿದೆ. ಮೊದಲನೆಯದು, ಕಪ್ಪಾಗಿರುವುದು; ಎರಡನೆಯದು, ಹೆಣ್ಣುಮಕ್ಕಳಿಗೆ ಸಂಬಂಧಿಸಿದ್ದು. ಮಹಿಳೆಯರನ್ನು ನಮ್ಮ ಸಮಾಜವು ಪುರುಷರನ್ನು ನೋಡುವ ರೀತಿಯಲ್ಲೇ ನೋಡುವುದಿಲ್ಲ. ಮಹಿಳೆಯ ಚರ್ಮದ ಬಣ್ಣ ಯಾವುದು ಎಂಬುದು ಕೂಡ ಆಕೆಯ ಬಗ್ಗೆ ಸಮಾಜ ತೀರ್ಮಾನ ತೆಗೆದುಕೊಳ್ಳುವಾಗ ಪ್ರಭಾವ ಬೀರುತ್ತದೆ. ಪೂರ್ವಗ್ರಹಪೀಡಿತ ಮನಸ್ಸುಗಳು ಹೆಣ್ಣಿನ ಬಗ್ಗೆ ತಾತ್ಸಾರ ಮನೋಭಾವ ಬೆಳೆಸಿಕೊಂಡಿರುತ್ತವೆ, ಅದರಲ್ಲೂ ಕಪ್ಪು ಮೈಬಣ್ಣದ ಹೆಣ್ಣಿನ ಬಗ್ಗೆ ಪೂರ್ವಗ್ರಹವು ತೀವ್ರವಾಗಿ ಇರುತ್ತದೆ.

ಚರ್ಮದ ಬಣ್ಣ ಯಾವುದೇ ಇದ್ದರೂ ಎಲ್ಲರೂ ಸಮಾನರು ಎನ್ನುವುದು ಒಂದು ನೈತಿಕ ಮೌಲ್ಯವಾಗಬೇಕು

ಪೂರ್ವಗ್ರಹಗಳು ಹಾಗೂ ಮೈಬಣ್ಣದ ಆಧಾರದಲ್ಲಿ ತಾರತಮ್ಯ ಎಸಗುವುದು ಬಹಳ ವ್ಯಾಪಕವಾಗಿದೆ. ಬಿಳಿ ಮೈಬಣ್ಣ ಅಂದರೆ ಒಳ್ಳೆಯದು, ಕಪ್ಪು ಮೈಬಣ್ಣ ಹೊಂದಿರುವುದು ಕೆಟ್ಟದ್ದು ಎಂಬ ಆಲೋಚನೆಯು ನಮ್ಮ ಸಮಾಜದ ಪ್ರಜ್ಞೆಯ ಆಳಕ್ಕೆ ಇಳಿದುಬಿಟ್ಟಿದೆ. ಇದು ನಮ್ಮ ಆಲೋಚನೆ, ನಮ್ಮ ನಡತೆ ಮತ್ತು ನಮ್ಮ ಭಾಷೆಯ ಮೇಲೆ ಪ್ರಭಾವ ಬೀರಿದೆ. ಹಲವು ಬಗೆಗಳಲ್ಲಿ ಈ ಪ್ರಭಾವ ಕಾಣಿಸುತ್ತದೆ. ಮೈಬಣ್ಣದ ಬಗ್ಗೆ ಸಮಾಜದ ಧೋರಣೆ ಹೇಗಿದೆ ಎಂಬುದನ್ನು ವೈವಾಹಿಕ ಸಂಬಂಧ ಬಯಸಿ ನೀಡುವ ಜಾಹೀರಾತುಗಳಲ್ಲಿ ನೇರವಾಗಿಯೋ ಪರೋಕ್ಷವಾಗಿಯೋ ಇರುವ 'ಗೋಧಿಬಣ್ಣದವರು ಬೇಕು' ಎಂಬ ಒಕ್ಕಣೆಯು ಬಹಳ ಚೆನ್ನಾಗಿ ವಿವರಿಸುತ್ತದೆ. ಹೆಣ್ಣುಮಕ್ಕಳಲ್ಲಿ ಬಹಳಷ್ಟು ಮಂದಿ ತಮ್ಮ ಮೈಬಣ್ಣದ ಕಾರಣಕ್ಕಾಗಿ ದುಬಾರಿ ಬೆಲೆ ತೆತ್ತಿದ್ದಾರೆ. ನಮ್ಮ ಕಲೆ, ಸಾಹಿತ್ಯ ಮತ್ತು ಸಮಾಜದ ಜೀವನದ ಇತರ ಹಲವು ಚಟುವಟಿಕೆಗಳಲ್ಲಿ ಇವೆಲ್ಲ ಕಾಣುತ್ತವೆ. ಚರ್ಮದ ಬಣ್ಣವನ್ನು ಬದಲಾಯಿಸುವುದಾಗಿ ಹೇಳುವ ಉದ್ಯಮದ ಮೇಲೆ ಕೋಟ್ಯಂತರ ರೂಪಾಯಿ ಸುರಿಯಲಾಗುತ್ತಿದೆ. ಸಾಮಾಜಿಕ ಹಾಗೂ ಆರ್ಥಿಕ ಹಿಂದುಳಿದಿರುವಿಕೆಗೂ ಸಮುದಾಯಗಳ ಚರ್ಮದ ಬಣ್ಣಕ್ಕೂ ಹಲವು ಸಂದರ್ಭಗಳಲ್ಲಿ ನಂಟು ಇದೆ. ಕಪ್ಪು ಮೈಬಣ್ಣದವರು ಎಂದರೆ ಹಿಂದುಳಿದವರು ಎಂದು ಭಾವಿಸಿರುವುದೂ ಇದೆ. ಕಪ್ಪು ಎಂದರೆ ಕೆಟ್ಟದ್ದೆಲ್ಲವನ್ನೂ ಪ್ರತಿನಿಧಿಸುತ್ತದೆ ಎನ್ನುವ ಧೋರಣೆಯು ಭಾರತಕ್ಕೆ ಮಾತ್ರ ಸೀಮಿತವಾದುದಲ್ಲ, ಇದು ಎಲ್ಲೆಡೆ ಕಾಣುವ ಜಾಡ್ಯ. ಕಪ್ಪು ಎಂದರೆ ಕೆಡುಕು ಎಂಬ ಭಾವನೆಯನ್ನು ಬಿಳಿ ಮೈಬಣ್ಣ ಹೊಂದಿಲ್ಲದವರ ಮನಸ್ಸಿನಲ್ಲಿಯೂ ತುಂಬಲಾಗಿದೆ. ಇದರ ಪರಿಣಾಮವಾಗಿ, ಕಪ್ಪು ಮೈಬಣ್ಣದ ವ್ಯಕ್ತಿಗಳು ಕೀಳರಿಮೆ ಬೆಳೆಸಿಕೊಂಡಿರುವುದಿದೆ, ಅವರ ಆತ್ಮಗೌರವಕ್ಕೆ ಪೆಟ್ಟುಬಿದ್ದ ನಿದರ್ಶನಗಳು ಇವೆ. ಜನಾಂಗೀಯವಾದದ ಬೇರುಗಳು ಇರುವುದು ಕೂಡ ಇಂತಹ ಧೋರಣೆಗಳಲ್ಲಿಯೇ.

ಆದರೆ, ಅತ್ಯುನ್ನತ ಹುದ್ದೆಯಲ್ಲಿ ಇರುವ ಅಧಿಕಾರಿಯೊಬ್ಬರು ಕೂಡ ಈ ಬಗೆಯ ಧೋರಣೆಯ ಸಂತ್ರಸ್ತೆ ಎಂಬುದು ಈ ಪೂರ್ವಗ್ರಹವು ಎಷ್ಟು ಪ್ರಬಲವಾಗಿ ಬೆಳೆದಿದೆ ಎನ್ನುವುದನ್ನು ತೋರಿಸುತ್ತದೆ. ಈ ವಿಚಾರವನ್ನು ಬಹಿರಂಗವಾಗಿ ಹೇಳುವ ಮೂಲಕ ಶಾರದಾ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ತಾನು ಮಗುವಾಗಿದ್ದಾಗ ಬೆಳ್ಳನೆಯ ಮೈಬಣ್ಣ ಹೊಂದಲು ಬಯಸಿದ್ದುದಾಗಿ, ತಾನು ಪರಿಪೂರ್ಣ ಅಲ್ಲ ಎಂದು ಭಾವಿಸಿದ್ದುದಾಗಿ ಹೇಳಿಕೊಂಡಿದ್ದಾರೆ. ಮೈಬಣ್ಣಕ್ಕೆ ಮೌಲ್ಯವನ್ನು ಆರೋಪಿಸುವ ಸಾಮಾಜಿಕ ಧೋರಣೆಯನ್ನು ಇಲ್ಲವಾಗಿಸಬೇಕಿದೆ. ಆದರೆ ಈಗಾಗಲೇ ಕಲಿತಿರುವ ಇಂತಹ ಕೆಟ್ಟ ಬುದ್ಧಿಯನ್ನು ಬಿಡುವುದಕ್ಕೆ ಸಮಾಜಕ್ಕೆ ಬಹಳ ಕಾಲ ಬೇಕಾಗಬಹುದು. ಚರ್ಮದ ಬಣ್ಣ ಯಾವುದೇ ಇದ್ದರೂ ಎಲ್ಲರೂ ಸಮಾನರು ಎನ್ನುವ ಪಾಠವನ್ನು ಶಾಲೆಗಳಲ್ಲಿಯೇ ಹೇಳಿಕೊಡಬೇಕು. ಇದು ಒಂದು ನೈತಿಕ ಮೌಲ್ಯವಾಗಿ ಸಮಾಜದಲ್ಲಿಯೂ ವ್ಯಾಪಕವಾಗಿ ಪಸರಿಸಬೇಕು.

ದಿನದ ಟ್ವೀಟ್

ಜನರಿಗೆ ಲಾಭ ದಕ್ಕಲಿ

ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದಾಖಲೆಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಯಾವಾಗ ಕಚ್ಚಾ ತೈಲದ ಬೆಲೆ ಏರುತ್ತದೋ ಆಗ ಸರ್ಕಾರ ಮತ್ತು ತೈಲ ಕಂಪನಿಗಳು ಪೆಟ್ರೋಲ್ ಹಾಗೂ ಡೀಸೆಲ್ ದರವನ್ನು ಏರಿಸುತ್ತವೆ. ಆದರೆ ಬೆಲೆ ಇಳಿಕೆಯಾದಾಗ ಮಾತ್ರ ಅವು ಆ ಲಾಭವನ್ನು ಜನರಿಗೆ ಹಸ್ತಾಂತರಿಸುವುದಿಲ್ಲ.

ವೀಣಾ ಜೈನ್

ಕಿಡಿನುಡಿ

ಕಡತ ವಿಲೇವಾರಿ ಗ್ಯಾರಂಟಿ ಎಲ್ಲಿದೆ ಸ್ವಾಮಿ?! ದಿನಬೆಳಗಾದರೆ ಬಣ ಬಡಿದಾಟ, ಸಿ.ಎಂ ಗಾದಿಗಾಗಿ ಕಿತ್ತಾಟ, ಓಲೈಕೆ ರಾಜಕಾರಣಕ್ಕಾಗಿ ಹಿಂದೂಗಳ ಭಾವನೆಯ ಜೊತೆ ಚೆಲ್ಲಾಟ, ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ನಾಟಕ ಇವುಗಳಲ್ಲೇ ನಿರತರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಸಚಿವರಿಗೆ ಪಾಪ ಕಡತ ವಿಲೇವಾರಿ ಮಾಡಲು ಸಮಯ ಎಲ್ಲಿದೆ? 30ಕ್ಕೂ ಅಧಿಕ ಇಲಾಖೆಗಳಲ್ಲಿ ಶೇ 45ರಷ್ಟು ಕಡತಗಳು ವಿಲೇವಾರಿ ಆಗದೆ ಬಾಕಿ ಉಳಿದಿದ್ದು, 71,000 ಕಡತಗಳು ದೂಳು ಕುಡಿಯುತ್ತಿವೆ...

ಆರ್.ಅಶೋಕ, ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ
ಶುಕ್ರವಾರ, 7-4-2000

● **ನವಾಜ್ ಷರೀಫ್‌ಗೆ ಜೀವಾವಧಿ ಶಿಕ್ಷೆ**

ಕರಾಚಿ, ಏ. 6 (ಪಿಟಿಐ)– ವಿಮಾನ ಅಪಹರಣ ಹಾಗೂ ಭಯೋತ್ಪಾದನೆ ಆರೋಪದ ಮೇಲೆ ಪಾಕಿಸ್ತಾನದ ಪದಚ್ಯುತ ಪ್ರಧಾನಿ ನವಾಜ್ ಷರೀಫ್ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿ ಇಂದು ಆದೇಶ ಹೊರಡಿಸಿರುವ ಇಲ್ಲಿನ ಭಯೋತ್ಪಾದನೆ ನಿರೋಧಕ ನ್ಯಾಯಾಲಯ, ಷರೀಫ್‌ರ ಸಮಸ್ತ ಆಸ್ತಿಯ ಮುಟ್ಟುಗೋಲಿಗೆ ಸೂಚಿಸಿದೆ.

ಆದರೆ, ಭಯೋತ್ಪಾದನೆ ನಿರೋಧಕ ನ್ಯಾಯಾಲಯದ ನ್ಯಾಯಾಧೀಶ ರಹಮತ್ ಉಲ್ಲಾ ಜಾಫ್ರಿ ಅವರು, ನವಾಜ್ ಷರೀಫ್ ಸೋದರ ಶಹಬಾಜ್ ಹಾಗೂ ಇತರ ಐವರು ಆರೋಪಿಗಳನ್ನು ಎಲ್ಲ ಆರೋಪಗಳಿಂದ ಮುಕ್ತಗೊಳಿಸಿದ್ದಾರೆ.

ತೀರ್ಪು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಷರೀಫ್‌ಗೆ ಅವಕಾಶ ಕೊಡಲಾಗಿದೆ. ತೀರ್ಪು ಪ್ರಕಟವಾಗುವ ಸಮಯದಲ್ಲಿ ನವಾಜ್ ಷರೀಫ್ ಹಾಗೂ ಇತರ ಆರೋಪಿಗಳು ನ್ಯಾಯಾಲಯದಲ್ಲಿ ಹಾಜರಿದ್ದರು.

● **'ನಮಗೆ ಬೇಕಾಗಿರುವುದು ಬಾಂಬ್ ಅಲ್ಲ ಬ್ರೆಡ್'**

ಬೆಂಗಳೂರು, ಏ. 6 (ಪಿಟಿಐ)– 'ಒಂದೇ ತಾಯಿಯ ಮಕ್ಕಳಾದ ಭಾರತ– ಪಾಕಿಸ್ತಾನದ ಜನತೆಗೆ ಅಗತ್ಯವಿರುವುದು ಬಾಂಬ್ ಅಲ್ಲ ಬ್ರೆಡ್' ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್ ಇಂದು ಇಲ್ಲಿ ಹೇಳಿದರು.

'ಶಾಂತಿ ಮತ್ತು ಪ್ರಜಾಪ್ರಭುತ್ವಕ್ಕಾಗಿ ಪಾಕಿಸ್ತಾನ– ಭಾರತ ನಾಗರಿಕರ ವೇದಿಕೆ'ಯ 5ನೇ ಜಂಟಿ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, 'ಈಗ ನಾವು ಬಾಂಬ್ ಕಂದಕದ ಆತಂಕದಲ್ಲಿದ್ದೇವೆ. ಈ ಎರಡೂ ದೇಶಗಳ ನಡುವೆ ಪ್ರಾದೇಶಿಕ ಹೊಂದಾಣಿಕೆ ಅಗತ್ಯವಿದೆ' ಎಂದಿದ್ದಾರೆ.

'ಉಭಯ ರಾಷ್ಟ್ರಗಳು ದೇಶದ ಬಹುಪಾಲು ಸಂಪನ್ಮೂಲವನ್ನು ಶಸ್ತ್ರಾಸ್ತ್ರಗಳಿಗಾಗಿ ವೆಚ್ಚ ಮಾಡುತ್ತಿವೆ. ಸೇನೆ ಹೆಚ್ಚಳವನ್ನು ಸ್ಥಗಿತಗೊಳಿಸಿ ಎರಡೂ ದೇಶಗಳ ಜನತೆ ನಡುವೆ ಸಂಪರ್ಕ ಸಾಧಿಸಬೇಕಾಗಿದೆ' ಎಂದರು.

50 ವರ್ಷಗಳ ಹಿಂದೆ
ಸೋಮವಾರ, 7-4-1975

● **ಭಾಗ್ಯದ ಬಾಗಿಲಿಗೆ ಹಸಿರಿನ ಹಾದಿ**

ಹಾಸನ, ಏ. 6– ಹಳ್ಳ ಕೊಳ್ಳ ದಾಟಿ, ಶಿಖರ ಬೆಟ್ಟ ಹಾಯ್ದು ಹಾಸನದಿಂದ ಮಂಗಳೂರಿಗೆ ಇನ್ನು ಮೂರೇ ವರ್ಷಗಳಲ್ಲಿ ರೈಲು ಸಂಚರಿಸಲಿದೆ. ಪಯಣಿಗರನ್ನಷ್ಟೇ ಅಲ್ಲದೆ ಕಬ್ಬಿಣದ ಅದಿರು, ಅರಣ್ಯೋತ್ಪನ್ನ, ಕಾಫಿ, ಏಲಕ್ಕಿ, ಮೆಣಸು ಮುಂತಾದ ಸಿರಿವಂತಿಕೆಯನ್ನು 190 ಕಿಲೊ ಮೀಟರ್ ದೂರದ ಮಂಗಳೂರು ಬಂದರಿಗೆ ಮುಟ್ಟಿಸಲಿದೆ.

ಈಗಾಗಲೇ ಶೇ 75ರಷ್ಟು ಕೆಲಸ ಮುಗಿದಿದೆ. ಮಂಗಳೂರಿನಿಂದ ಕಬಕ ಪುತ್ತೂರುವರೆಗೆ (55 ಕಿ.ಮೀ) ಮತ್ತು ಹಾಸನದಿಂದ ಸಕಲೇಶಪುರ (48 ಕಿ.ಮೀ) ವರೆಗೆ ರೈಲು ಹಳಿ ಹಾಕಿದ್ದಾರಲ್ಲದೆ, ಹಾಸನದಿಂದ ಸಕಲೇಶಪುರಕ್ಕೆ ಪ್ರಾಯೋಗಿಕವಾಗಿ ರೈಲು ನಡೆಸಿದ್ದಾರೆ.

● **ಕಪಿಲಾ ನೀರು ಕುಡಿಯಲು ಯೋಗ್ಯ**

ಬೆಂಗಳೂರು, ಏ. 6– ಕಾವೇರಿ ಯೋಜನೆಯ ಮೂಲಕ ಬೆಂಗಳೂರಿಗೆ ಸರಬರಾಜು ಮಾಡಿದ ಕಪಿಲಾ ನದಿಯ ನೀರಿನಲ್ಲಿ ಡಿ.ಡಿ.ಟಿ. ಅಂಶ ಇಲ್ಲ ಹಾಗೂ ಅದು ಕುಡಿಯಲು ಯೋಗ್ಯವಾಗಿದೆ ಎಂಬುದು ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯ ನಡೆಸಿದ ವಿಶ್ಲೇಷಣೆಯಿಂದ ತಿಳಿದುಬಂದಿದೆ.

ಅತ್ಯಧಿಕ ಲಾಭದ ಆಮಿಷ ಒಡ್ಡುವ ಯೋಜನೆ ವಂಚನೆಯ ಮೂಲವಾಗಿರಬಹುದು

ಹೂಡಿಕೆ ವಂಚನೆ ತಡೆಗಿದೆ ಮಾರ್ಗ

ವಿಶ್ಲೇಷಣೆ

ಎಂ.ಎ.ಸಲೀಂ

ಕಾನೂನು ಜಾರಿ ಸಂಸ್ಥೆಗಳಿಗೆ ಜಗತ್ತಿನ ಎಲ್ಲೆಡೆ ಎದುರಾಗುತ್ತಿರುವ, ಅತ್ಯಂತ ವೇಗವಾಗಿ ಹೆಚ್ಚಳ ಕಾಣುತ್ತಿರುವ ಅಪರಾಧಗಳ ಪೈಕಿ ಸೈಬರ್ ಅಪರಾಧ ಒಂದು. ಕಳೆದ ದಶಕದಲ್ಲಿ ಇಂಟರ್ನೆಟ್ ಮತ್ತು ಸ್ಮಾರ್ಟ್‌ಫೋನ್ ಬಳಕೆದಾರರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚಾದುದು ಇದಕ್ಕೆ ಕಾರಣ. ಬಹಳ ಕಡಿಮೆ ಸಮಯ ಮತ್ತು ಖರ್ಚಿನಲ್ಲಿ ಸೈಬರ್ ಅಪರಾಧ ಎಸಗಬಹುದು, ಈ ಅಪರಾಧ ಎಸಗಲು ಭೌತಿಕ ಗಡಿಗಳು ಅಡ್ಡಿಯಾಗುವುದಿಲ್ಲ, ಅದರಿಂದ ಸಿಗುವ ಲಾಭ ಭಾರಿ ಪ್ರಮಾಣದ್ದು. ಹೀಗಾಗಿ, ಇಂತಹ ಅಪರಾಧಗಳ ಸಂಖ್ಯೆ ಹೆಚ್ಚಾಗಿದೆ.

ಇತ್ತೀಚಿನ ದಿನಗಳಲ್ಲಿ ಹೂಡಿಕೆಯ ಹೆಸರಿನಲ್ಲಿ ನಡೆಯುವ ಮೋಸಗಳು ಆನ್‌ಲೈನ್ ವಂಚನೆಗಳಲ್ಲಿ ದೊಡ್ಡ ಪಾಲು ಹೊಂದಿವೆ. ಇಂತಹ ಪ್ರಕರಣಗಳಲ್ಲಿ ವಂಚಕರು ಹೂಡಿಕೆ ಮಾಡುವ ಬಯಕೆ ಹೊಂದಿರುವವರನ್ನು ಅಸ್ತಿತ್ವದಲ್ಲೇ ಇಲ್ಲದ ಹೂಡಿಕೆ ಉತ್ಪನ್ನಗಳಲ್ಲಿ ಹಣ ತೊಡಗಿಸುವಂತೆ ಮಾಡುತ್ತಾರೆ ಅಥವಾ ತಪ್ಪು ಮಾಹಿತಿ ನೀಡಿ ಅವರು ಹಣ ತೊಡಗಿಸುವಂತೆ ಮಾಡುತ್ತಾರೆ. ವಂಚಕರು ಸಾಮಾನ್ಯವಾಗಿ ಸಾಮಾಜಿಕ ಜಾಲತಾಣ ವೇದಿಕೆಗಳ ಮೂಲಕ ಜಾಹೀರಾತು ನೀಡಿ ಅಥವಾ ಇಂಟರ್ನೆಟ್‌ನ ಇತರ ಮಾಧ್ಯಮಗಳ ಮೂಲಕ ಅಮಾಯಕ ಜನರನ್ನು ಸಂಪರ್ಕಿಸುತ್ತಾರೆ. ಸಾಮಾಜಿಕ ಜಾಲತಾಣದ ಮೂಲಕ ನೀಡುವ ಜಾಹೀರಾತುಗಳಲ್ಲಿ ಒಂದಿಷ್ಟು ಪರಿಚಯಾತ್ಮಕ ವಿಡಿಯೊಗಳು ಇರುತ್ತವೆ, ಅಲ್ಪಾವಧಿಯಲ್ಲಿ ಭಾರಿ ಪ್ರಮಾಣದ ಲಾಭ ಗಳಿಸುವ ಬಗ್ಗೆ ವಿವರಣೆ ಇರುತ್ತದೆ. ತೀರಾ ಬಡತನದಲ್ಲಿ ಇದ್ದವರು ಶ್ರೀಮಂತಿಕೆ ಪಡೆದು, ವಿಲಾಸಿ ಜೀವನ ನಡೆಸುತ್ತಿರುವ ಬಗ್ಗೆ ಒಂದಿಷ್ಟು ಕಥೆಗಳೂ ಅವುಗಳಲ್ಲಿ ಇರಬಹುದು. ಹೂಡಿಕೆದಾರರಿಗೆ ಆರಂಭದಲ್ಲಿ ಸಣ್ಣ ಮೊತ್ತವನ್ನು ಲಾಭದ ರೂಪದಲ್ಲಿ ನೀಡಿ, ಅವರು ಹೆಚ್ಚಿನ ಮೊತ್ತವನ್ನು ತೊಡಗಿಸುವಂತೆ ಪ್ರೇರೇಪಿಸುವುದೂ ಇರುತ್ತದೆ. ಇಲ್ಲಿ ಎರಡು ಉದಾಹರಣೆಗಳನ್ನು ನೀಡಲಾಗಿದೆ.

ಮೊದಲ ಪ್ರಕರಣದಲ್ಲಿ, ತಾವು ಹೂಡಿಕೆ ಸಂಸ್ಥೆಯ ಪ್ರತಿನಿಧಿಗಳು ಎಂದು ಹೇಳಿಕೊಂಡು ವಂಚಕರು ಸಂತ್ರಸ್ತರನ್ನು ಸಂಪರ್ಕಿಸಿದರು. ಷೇರುಗಳ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಸಂದರ್ಭದಲ್ಲಿ ಕಂಪನಿಯ ಪ್ರವರ್ತಕರಿಂದ ರಿಯಾಯಿತಿ ದರಕ್ಕೆ ಕೊಡಿಸಲಾಗುವುದು ಎಂದು ಹೇಳಿದರು. ಸಂತ್ರಸ್ತ ವ್ಯಕ್ತಿಯು ಆರಂಭದಲ್ಲಿ ಹಲವು ವರ್ಗಾವಣೆಗಳ ಮೂಲಕ ₹3 ಕೋಟಿಗಿಂತ ಹೆಚ್ಚು ಹಣ ನೀಡಿದರು. ನಂತರ, ಐಪಿಒ ವಹಿವಾಟು ಪೂರ್ಣಗೊಳಿಸಲು ಹೆಚ್ಚುವರಿಯಾಗಿ ₹5 ಕೋಟಿಯನ್ನು ಕೇಳಿದಾಗ ಸಂತ್ರಸ್ತ ವ್ಯಕ್ತಿಗೆ ಅನುಮಾನ ಬಂತು. ವಂಚಕರ ಹೂಡಿಕೆ ಆ್ಯಪ್ ಬಗ್ಗೆ ಪರಿಶೀಲನೆ ನಡೆಸಿದಾಗ, ಪ್ರಮುಖ ಹೂಡಿಕೆ ಸಂಸ್ಥೆಯ ಹೆಸರಿನಲ್ಲಿ ಅವರು ತಮಗೆ ಮೋಸ ಮಾಡಿರುವುದು ಸಂತ್ರಸ್ತ ವ್ಯಕ್ತಿಗೆ ಗೊತ್ತಾಯಿತು.

ಇನ್ನೊಂದು ಪ್ರಕರಣದಲ್ಲಿ, ಜಾಗತಿಕ ಮಟ್ಟದ ಪ್ರತಿಷ್ಠಿತ ಇನ್ವೆಸ್ಟ್‌ಮೆಂಟ್ ಬ್ಯಾಂಕ್‌ನ ಹೆಸರು ಹೇಳಿಕೊಂಡ ವಂಚಕರು, ಅಮಾಯಕ ಹೂಡಿಕೆದಾರರನ್ನು ವಂಚಿಸಲು, ಹೂಡಿಕೆ ಮಾಡಲು ಮನಸ್ಸು ಹೊಂದಿರುವವರ ಖಾಸಗಿ ಗುಂಪೊಂದನ್ನು ರಚಿಸಿದ್ದರು. ವಂಚಕರ ಬಲೆಗೆ ಬಿದ್ದ ವ್ಯಕ್ತಿಯೊಬ್ಬರು ಟ್ರೇಡಿಂಗ್ ಉದ್ದೇಶಕ್ಕಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಒಟ್ಟು ₹3.2 ಕೋಟಿ ವರ್ಗಾವಣೆ ಮಾಡಿದರು. ಕೆಲವು ಸಮಯದ ನಂತರ ಸಂತ್ರಸ್ತ ವ್ಯಕ್ತಿಯು ಷೇರು ಮತ್ತು ಬಾಂಡ್‌ಗಳ ಬಗ್ಗೆ ವಿವರ ಕೋರಿದಾಗ ತೃಪ್ತಿಕರ ಉತ್ತರ ಸಿಗಲಿಲ್ಲ. ಎಲ್ಲ ವಹಿವಾಟುಗಳನ್ನೂ ನಕಲಿ ಆ್ಯಪ್ ಲಿಂಕ್ ಮೂಲಕ ನಡೆಸಲಾಗಿದೆ ಎಂಬುದು ಆಗ ಗೊತ್ತಾಯಿತು. ಸಂತ್ರಸ್ತರು ತೊಡಗಿಸಿದ ಅಷ್ಟೂ ಹಣವು ವಂಚಕರ ಬ್ಯಾಂಕ್ ಖಾತೆಗೆ ಹೋಗಿರುವುದು ತನಿಖೆಯಿಂದ ಗೊತ್ತಾಯಿತು.

ವಂಚಕರಲ್ಲಿ ಹೆಚ್ಚಿನವರು ಬೇರೆ ಬೇರೆ ದೇಶಗಳಲ್ಲಿ ಇದ್ದುಕೊಂಡು ತಮ್ಮ ಕೆಲಸ ಮಾಡುತ್ತಿರುತ್ತಾರೆ. ಇಂತಹ ಪ್ರಕರಣಗಳಲ್ಲಿ ಅವರನ್ನು ಪತ್ತೆ ಮಾಡುವುದು ಬಹಳ ಸವಾಲಿನ ಕೆಲಸ ಆಗುತ್ತದೆ. ಸಂತ್ರಸ್ತರಲ್ಲಿ ಹೆಚ್ಚಿನವರು ಸುಶಿಕ್ಷಿತರಾಗಿರುತ್ತಾರೆ, ಅವರಿಗೆ ವೃತ್ತಿಯ ಹಿನ್ನೆಲೆ ಇರುತ್ತದೆ ಎಂಬುದು ಕೂಡ ತನಿಖೆಯ ಸಂದರ್ಭದಲ್ಲಿ ಗೊತ್ತಾಗಿದೆ. ಆದರೂ ತಮ್ಮ ಉಳಿತಾಯದ ದೊಡ್ಡ ಮೊತ್ತವನ್ನು ಬೇರೆ ಬೇರೆ ಕಡೆ ತೊಡಗಿಸಲು ಬಯಸುವ ಅವರು, ಇಂತಹ ವಂಚನೆಯ ಜಾಲಗಳಿಗೆ ಅರಿವಿಲ್ಲದೆ ಸಿಲುಕುತ್ತಾರೆ.

ಹೂಡಿಕೆ ವಂಚನೆಯನ್ನು ತಡೆಯಲು ತನಿಖಾ ಸಂಸ್ಥೆಗಳ ಸಾಮರ್ಥ್ಯ ವೃದ್ಧಿಯ ಜೊತೆಯಲ್ಲೇ ನಾಗರಿಕರಲ್ಲಿ ಅರಿವು ಮೂಡಿಸುವ ತುರ್ತು ಅಗತ್ಯ ಇದೆ. ಆನ್‌ಲೈನ್ ಹೂಡಿಕೆ ಸಂದರ್ಭದಲ್ಲಿ, ವಂಚನೆಯ ಸಾಧ್ಯತೆಗಳನ್ನು ಅರಿಯಲು ಕೆಳಗಿನ ಕೆಲವು ಅಂಶಗಳ ಮೇಲೆ ಗಮನ ಇರಿಸಬೇಕು.

ಹೂಡಿಕೆ ಮಾಡಲಿರುವ ಷೇರು ಅಥವಾ ಬಾಂಡ್‌ಗಳ ಪೂರ್ತಿ ವಿವರವನ್ನು ವಂಚಕರು ನೀಡುವುದಿಲ್ಲ. ಷೇರುಪೇಟೆಯಲ್ಲಿ, ಮ್ಯೂಚುವಲ್ ಫಂಡ್‌ಗಳಲ್ಲಿ ಮಾಡುವ ಹೂಡಿಕೆಯಲ್ಲಿ ಒಂದಿಷ್ಟು ರಿಸ್ಕ್ ಇದ್ದೇ ಇರುತ್ತದೆ. ಆದರೆ ವಂಚಕರು ಮಾತ್ರ ತಮ್ಮ ಮೂಲಕ ಹೂಡಿಕೆ ಮಾಡಿದರೆ ಯಾವುದೇ ರಿಸ್ಕ್ ಇರುವುದಿಲ್ಲ ಎನ್ನುತ್ತಾರೆ. ನೈಜ ಕಂಪನಿಗಳು ಭಾರಿ ಪ್ರಮಾಣದ ಲಾಭದ ಖಾತರಿ ಒದಗಿಸುವುದಿಲ್ಲ. ಯಾವುದೇ ಆ್ಯಪ್ ಭಾರಿ ಪ್ರಮಾಣದ ಲಾಭದ ಭರವಸೆ ಇತ್ತರೆ ಅದು ವಂಚನೆಯ ಸಾಧ್ಯತೆಯನ್ನು ಹೇಳುತ್ತಿರುತ್ತದೆ. ವಂಚಕರು ಒತ್ತಡದ ತಂತ್ರವನ್ನು ಅನುಸರಿಸಿ, ಸಂತ್ರಸ್ತರು ಅವಸರದಲ್ಲಿ ತೀರ್ಮಾನ ಕೈಗೊಳ್ಳುವಂತೆ ಮಾಡುತ್ತಾರೆ.

ಸಾರ್ವಜನಿಕರು ಆನ್‌ಲೈನ್ ಹೂಡಿಕೆಯ ಹೆಸರಿನಲ್ಲಿ ವಂಚನೆಗೆ ತುತ್ತಾಗದಂತೆ ಮಾಡಲು ಕೆಲವು ಕ್ರಮಗಳನ್ನು ವಹಿಸಬೇಕಿದೆ. ಹೂಡಿಕೆಯ ಆಮಿಷ ಒಡ್ಡುವ ವ್ಯಕ್ತಿಗಳು ಹಾಗೂ ಕಂಪನಿಗಳ ಬಗ್ಗೆ ಆಮೂಲಾಗ್ರವಾಗಿ ಪರಿಶೀಲನೆ ನಡೆಸಬೇಕು. ಅವರ ವಿಳಾಸ, ವೆಬ್‌ಸೈಟ್ ವಿಳಾಸ, ದೂರವಾಣಿ ಸಂಖ್ಯೆಯನ್ನು ಪರಿಶೀಲಿಸಿ, ಅವರು ನಿಜವಾದ ಹೂಡಿಕೆ ಸಂಸ್ಥೆಯವರೋ ವಂಚಕರೋ ಎಂಬುದನ್ನು ತಿಳಿದುಕೊಳ್ಳಬೇಕು. ಹೂಡಿಕೆ ಮಾಡಬೇಕಿರುವ ಮೊತ್ತವು ದೊಡ್ಡದಾಗಿದ್ದರೆ, ಅವರ ಕಚೇರಿಗೆ ನೇರವಾಗಿ ಭೇಟಿ ನೀಡಿ, ಅವರ ಜೊತೆ ವೈಯಕ್ತಿಕವಾಗಿ ಮುಖಾಮುಖಿ ಮಾತುಕತೆ ನಡೆಸುವುದು ಸೂಕ್ತ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಯಂತ್ರಣಕ್ಕೆ ಒಳಪಟ್ಟಿರುವ ಆನ್‌ಲೈನ್ ವೇದಿಕೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು. ಷೇರುಗಳಲ್ಲಿ ಅಥವಾ ಬಂಡವಾಳ ಮಾರುಕಟ್ಟೆಯ ಇತರ ಉತ್ಪನ್ನಗಳಲ್ಲಿ ಮಾಡುವ ಹೂಡಿಕೆಗಳಲ್ಲಿ ಒಂದಿಷ್ಟು ರಿಸ್ಕ್ ಇದ್ದೇ ಇರುತ್ತದೆ. ಅಲ್ಲಿ ನಿಶ್ಚಿತ ಪ್ರಮಾಣದ ಲಾಭ ಇರುವುದಿಲ್ಲ. ಆದರೆ ತೀರಾ ಕಡಿಮೆ ರಿಸ್ಕ್‌ಗೆ ಅಸಾಮಾನ್ಯ ಪ್ರಮಾಣದ ಲಾಭ ತಂದುಕೊಡುವುದಾಗಿ ಹೇಳಿಕೊಳ್ಳುವ ಹೂಡಿಕೆಗಳ ಬಗ್ಗೆ ಎಚ್ಚರಿಕೆ ವಹಿಸಿರಿ. ಎಸ್‌ಎಂಎಸ್, ವಾಟ್ಸ್‌ಆ್ಯಪ್ ಅಥವಾ ಸಾಮಾಜಿಕ ಜಾಲತಾಣಗಳ ಮೂಲಕ ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡಿಕೊಳ್ಳುವುದು ಬೇಡ. ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡುವಾಗ ಅಧಿಕೃತವಾದ ಆ್ಯಪ್ ಸ್ಟೋರ್ ಬಳಸಿ. ಹಣವನ್ನು ಬಹಳ ತ್ವರಿತವಾಗಿ ತೊಡಗಿಸಬೇಕಾದ ಕೊಡುಗೆಗಳ ವಿಚಾರವಾಗಿ ಎಚ್ಚರಿಕೆಯಿಂದ ಇರಿ.

ನಿಮ್ಮ ಹೂಡಿಕೆಗಳು ನಿಮ್ಮ ಪ್ರಧಾನ ಬ್ಯಾಂಕ್ ಖಾತೆಯಿಂದ ಆಗದಿರಲಿ. ಹೂಡಿಕೆಗಳನ್ನು ಮಾಡುವುದಕ್ಕಾಗಿ ಪ್ರತ್ಯೇಕವಾದ ಬ್ಯಾಂಕ್ ಖಾತೆಯೊಂದನ್ನು ಹೊಂದಿದ್ದರೆ ಸೂಕ್ತ. ಆ ಖಾತೆಯಲ್ಲಿ ಸೀಮಿತ ಮೊತ್ತ ಮಾತ್ರ ಇರಿಸಿಕೊಳ್ಳಿ. ನಿಮ್ಮ ವೈಯಕ್ತಿಕ ಮಾಹಿತಿಯನ್ನು ಕಾಪಾಡಿಕೊಳ್ಳಿ. ಇಲ್ಲದಿದ್ದರೆ ಅವು ಬಹಿರಂಗವಾಗಿ, ಅವುಗಳನ್ನು ಅಪರಾಧಿಗಳು ದುರ್ಬಳಕೆ ಮಾಡಿಕೊಳ್ಳಬಹುದು. ಈ ಎಚ್ಚರಿಕೆಯ ಕ್ರಮಗಳು ಮಾತ್ರವೇ ಸಾಕಾಗುತ್ತವೆ ಎನ್ನಲು ಆಗದು. ಏಕೆಂದರೆ ವಂಚಕರು ಅಪರಾಧ ಎಸಗಲು ಹೊಸ ಮಾರ್ಗಗಳನ್ನು ಕಂಡುಕೊಳ್ಳಬಹುದು. ವಂಚನೆಗೆ ಈಡಾಗಿದ್ದೇವೆ ಎಂಬುದು ಗೊತ್ತಾದ ತಕ್ಷಣ 1930 ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಿ ಅಥವಾ https://cybercrime.gov.in/ ಮೂಲಕ ದೂರು ದಾಖಲಿಸಿ.

ಅನುಮಾನ ಮೂಡಿಸುವಂತೆ ಇರುವ, ಸಾಮಾಜಿಕ ಜಾಲತಾಣಗಳ ಮೂಲಕ ಬರುವ ಹೂಡಿಕೆ ಕೊಡುಗೆಗಳ ಬಗ್ಗೆ ಕಾನೂನು ಜಾರಿ ಸಂಸ್ಥೆಗಳಿಗೆ ಅಥವಾ ದೂರಸಂಪರ್ಕ ಇಲಾಖೆಯ 'ಡಿಓಟಿ ಚಕ್ಷು' ಮೂಲಕ ಅಥವಾ ಎನ್‌ಸಿಆರ್‌ಪಿ ಪೋರ್ಟಲ್ ಮೂಲಕ ದೂರು ನೀಡಿ. ನಾಗರಿಕರು ಎಚ್ಚರಿಕೆಯಿಂದ ಇದ್ದರೆ, ಹೂಡಿಕೆ ಯೋಜನೆಗಳ ಬಗ್ಗೆ ಸರಿಯಾಗಿ ಪರಿಶೀಲನೆ ನಡೆಸಿದರೆ ಇಂತಹ ವಂಚನೆಗಳನ್ನು ತಡೆಯಬಹುದು. ಅಷ್ಟೇ ಅಲ್ಲ, ಇತರ ಸೈಬರ್ ಅಪರಾಧಗಳನ್ನೂ ತಡೆಯಬಹುದು.

ಲೇಖಕ: ಪೊಲೀಸ್ ಮಹಾನಿರ್ದೇಶಕ
ಸಿ.ಐ.ಡಿ. ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು

ಚುರುಮುರಿ

ಸುಭದ್ರ ಭವಿಷ್ಯ

● ಸುಮಂಗಲಾ

ಬೆಕ್ಕಣ್ಣ ಸೋಫಾದ ಮೇಲೆ ಹಾಯಾಗಿ ಪವಡಿಸಿ, 'ಅಹಾ... ಇನ್ನು 2035ರವರೆಗೂ ನಿಶ್ಚಿಂತೆ, ಯಾವುದಕ್ಕೂ ಚಿಂತಿ ಮಾಡೂ ಕಾರಣನೇ ಇಲ್ಲ. ಎಲ್ಲಾ ಕಡಿಗೆ ಒಳ್ಳೇ ದಿನಗಳು' ಎಂದು ಉದ್ಗರಿಸಿತು.

'ಅಂದ್ರ ಇನ್ನಾ ಹತ್ತು ವರ್ಷ ಕುಂತು ತಿನ್ನೂ ಅಷ್ಟು ರೊಕ್ಕ ಬ್ಯಾಂಕಿನಾಗೆ ಎಫ್‌ಡಿ ಇಟ್ಟಿಯೇನ್?' ಎಂದೆ ಕೌತುಕದಿಂದ.

'ಇದೇ ನೋಡು ನಿನ್ನಂತಹ ಶ್ರೀಸಾಮಾನ್ಯರ ಮೆಂಟಾಲಿಟಿ. ಮೂರೂ ಹೊತ್ತು ನಿಮಗೆ ತಿನ್ನೂ ಯೋಚನೇನೆ' ಎಂದು ಹಂಗಿಸಿತು ಬೆಕ್ಕಣ್ಣ.

'ಬ್ಯಾಂಕಿನಾಗೆ ರೊಕ್ಕ ಇಡೂದಕ್ಕಿಂತ ಹೆಚ್ಚಿನ ನಿಶ್ಚಿಂತೆಯ ಸುದ್ದಿ ಐತಿ. ಭಾರತ ಮತ್ತು ಅಮೆರಿಕ ದೇಶದ ಸುರಕ್ಷತೆ, ಸಮಗ್ರತೆ, ಏಕತೆ ಎಲ್ಲಾನೂ ಇನ್ನಾ ಹತ್ ವರ್ಷ ಸುಭದ್ರವಾಗಿರತೈತಿ' ಎಂದು ಭಲೇ ಹೆಮ್ಮೆಯಿಂದ ಉಲಿಯಿತು.

'ಅದ್ಹೆಂಗೆ?' ಎಂದು ನಾನು ಮೂಗಿನ ಮೇಲೆ ಬೆರಳಿಟ್ಟೆ.

'2035ರವರೆಗೆ ಬಿಜೆಪಿನೇ ನಮ್ಮ ದೇಶಾನ ಆಳತೈತೆ ಅಂತ ಶಾ ಅಂಕಲ್ಲು ಹೇಳ್ಯಾರೆ. ಅಂದ್ರ ಮೋದಿ ಮಾಮಾರೇ ಪ್ರಧಾನಿಯಾಗಿ ಇರತಾರೆ. ಅತ್ತ ಅಮೆರಿಕದಾಗೆ ಟ್ರಂಪಣ್ಣ ಮೂರು ಅವಧಿಗೆ ಒಬ್ಬರೇ ಅಧ್ಯಕ್ಷರಾಗಬೌದು ಅಂತ ಕಾನೂನು ತಿದ್ದುಪಡಿ ತಂದು, ತಾನೇ ಮುಂದಿನ ಅವಧಿಗೂ ಅಧ್ಯಕ್ಷ ಆಗತೀನಿ ಅಂದಾನೆ. ಇವರಿಬ್ಬರ ಕೈಯೊಳಗೆ ಎರಡೂ ದೇಶಗಳ ಭವಿಷ್ಯ ಸುಭದ್ರ' ಬೆಕ್ಕಣ್ಣ ಸುದೀರ್ಘವಾಗಿ ವಿವರಿಸಿತು.

'ಓ... ಹಂಗಾರೆ ಸುಂಕ– ಪ್ರತಿಸುಂಕ ಸಮರ, ಅಕ್ರಮ ವಲಸಿಗರಿಗೆ ಕೈಕೋಳ ತೊಡಿಸಿ ಆಯಾ ದೇಶಗಳಿಗೆ ವಾಪಸು ಕಳಿಸೂದು ಇಂಥವೆಲ್ಲ ಇನ್ನೂ ಹತ್ತು ವರ್ಷ ಜಾರಿಯಲ್ಲಿ ಇರತವ' ಎಂದೆ.

'ಟ್ರಂಪಣ್ಣ, ಮೋದಿಮಾಮ ಏನೇ ಮಾಡಿದರೂ ಅದೆಲ್ಲಾ ದೇಶದ ಹಿತಕ್ಕೇ ಅನ್ನೂದು ಮರೀಬ್ಯಾಡ' ಎಂದು ವಾದಿಸಿತು.

'ಹಂಗಾರೆ ಚುನಾವಣೆ ನಡಸೂದೂ ಬ್ಯಾಡ, ಮನಾರ ರೊಕ್ಕ ಉಳೀತೈತೆ' ಎಂದೆ.

'ಈ ಎರಡೂ ದೇಶಗಳು ಬಲುದೊಡ್ಡ ಪ್ರಜಾಪ್ರಭುತ್ವ ದೇಶಗಳು. ಹಿಂಗಾಗಿ, ಚುನಾವಣೆ ಕೈಬಿಡಂಗಿಲ್ಲ. ಆದರೆ ಇವರೇ ಆರಿಸಿ ಬರತಾರೆ ಅನ್ನೂದೂ ಗ್ಯಾರಂಟಿ!' ಎಂದು ಬೆಕ್ಕಣ್ಣ ಕಣಿ ನುಡಿಯಿತು.

ಸಂಗತ

ಮುಸ್ಲಿಂ ಮೀಸಲಾತಿ: ತಕರಾರು ಏಕೆಂದರೆ...

ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆ ಸಂಸತ್ತಿನವರೆಗೂ ವ್ಯಾಪಿಸಿದೆ

● ವಾದಿರಾಜ್

ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 2ಬಿಯಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡಿರುವುದರ ಕುರಿತ ಚರ್ಚೆ ಸಂಸತ್ತಿನವರೆಗೂ ವ್ಯಾಪಿಸಿದೆ. 1994ರಿಂದ ಜಾರಿಯಲ್ಲಿರುವ ಈ ಮೀಸಲಾತಿಗೆ ಸಂವಿಧಾನದ ಮಾನ್ಯತೆ ಇಲ್ಲವೇ? ಇದು ಚರ್ಚೆಯ ಮೂಲಧಾತು.

ಬಿಜೆಪಿ- ಕಾಂಗ್ರೆಸ್ ಎರಡೂ ಪಕ್ಷಗಳು ಒಂದೊಂದು ತುದಿಯಲ್ಲಿ ನಿಂತು ಚರ್ಚೆಗೆ ಇಳಿದಿವೆ. ತಮಗೆ ಆ ಸಮುದಾಯದ ವೋಟೇ ಬೇಡ ಎಂಬ ನಕಾರಾತ್ಮಕ ನಿಲುವಿನ ಬಿಜೆಪಿ ಒಂದೆಡೆಯಾದರೆ, ಇಡಿಯಾಗಿ ದಕ್ಕುವ ಸಗಟು ಮತಗಳಿಗಾಗಿ ಏನೂ ಮಾಡಲು ಸಿದ್ಧವಿರುವ ಕಾಂಗ್ರೆಸ್ ಇನ್ನೊಂದೆಡೆ.

ಮುಸ್ಲಿಮರನ್ನು ಹಿಂದುಳಿದ ವರ್ಗವಾಗಿ ಗುರುತಿಸುವ ಕುರಿತ ಚರ್ಚೆ ಮೊದಲಾದದ್ದು 1953ರಲ್ಲಿ. ಆಗ ಕೇಂದ್ರ ಸರ್ಕಾರ ರಚಿಸಿದ್ದ ಕಾಕಾ ಕಾಲೇಲ್ಕರ್ ಹಿಂದುಳಿದ ವರ್ಗಗಳ ಆಯೋಗವು ಮುಸ್ಲಿಂ ಸಮಾಜವನ್ನು ಇಡಿಯಾಗಿ ಹಿಂದುಳಿದ ವರ್ಗ ಎಂದು ಒಪ್ಪಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿತು. ಒಬಿಸಿ ಮೀಸಲಾತಿ ವಿಷಯದಲ್ಲಿ ಮಂಡಲ್ ಆಯೋಗದ ವರದಿಯನ್ನು ಐತಿಹಾಸಿಕ ಎಂದೇ ಗುರುತಿಸಲಾಗುತ್ತದೆ. ಮಂಡಲ್ ಆಯೋಗವೂ ದೇಶದ ಮಟ್ಟದಲ್ಲಿ ಮುಸ್ಲಿಮರ 82 ಉಪಜಾತಿಗಳನ್ನು ಹಿಂದುಳಿದವರ ಪಟ್ಟಿಯಲ್ಲಿ ಗುರುತಿಸಿತು. ಆದರೆ ಇಡಿಯಾಗಿ ಮುಸ್ಲಿಮರನ್ನು ಒಬಿಸಿ ಎಂದು ಗುರುತಿಸಲು ನಿರಾಕರಿಸಿತು. ಕೇಂದ್ರದ ಒಬಿಸಿ ಪಟ್ಟಿಯು ಈಗಲೂ ಮಂಡಲ್ ಆಯೋಗದ ನಿರ್ದೇಶನದಂತೆಯೇ ಇದೆ.

2010ರಲ್ಲಿ ಯುಪಿಎ ಸರ್ಕಾರದ ಆದೇಶದಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ 'ಕಚ್ಚಿ ಮೆಮನ್, ನವಾಯತ್, ಬೊಹ್ರಾ, ಸಯ್ಯದ್, ಶೇಖ್, ಪಠಾನ್, ಮೊಘಲ್, ಮಹಮದೀಯ, ಕೊಂಕಣಿ ಜಮಾಯತಿ- ಈ ಉಪಜಾತಿಗಳನ್ನು ಬಿಟ್ಟು ಉಳಿದ ಉಪಜಾತಿಗಳು ಒಬಿಸಿ ಪಟ್ಟಿಯಲ್ಲಿ ಇರುತ್ತವೆ' ಎಂದು ಹೇಳಲಾಗಿದೆ.

ಚಿನ್ನಪ ರೆಡ್ಡಿ ಆಯೋಗದ ವರದಿಯ ತರುವಾಯ 1994ರಲ್ಲಿ ರಾಜ್ಯದಲ್ಲಿ ಮುಸ್ಲಿಂ ಸಮುದಾಯ ಒಬಿಸಿಯೊಳಗೆ ಪ್ರವೇಶಿಸಿತು. ಒಬಿಸಿ ಚಹರೆಯ ಮುಸ್ಲಿಂ ಉಪಜಾತಿಗಳಾದ ಪಿಂಜಾರ, ನದಾಫ್, ಲದಾಫ್, ಕಸಬ್, ಕಸಾಯಿ, ಕಾಟಿಕ್, ಒಟಾರಿ, ನಾಲ್ಬಂದ್, ಬಾಜಿಗಾರ್, ಜೋಹರಿ, ದರ್ಜಿ, ಫುಲ್ ಮಾಲಿ, ಚಪ್ಪರ್ ಬಂದ್, ದರ್ವೇಶಿಯಂತಹ 20 ಉಪಜಾತಿಗಳು ಪ್ರವರ್ಗ 1 ಮತ್ತು 2ಎಯಲ್ಲಿ ಮೀಸಲಾತಿ ಪಡೆಯುತ್ತಿವೆ. ಇದಲ್ಲದೇ 2ಬಿಯಲ್ಲಿ ಮುಖ್ಯಧಾರೆಯ ಮುಸ್ಲಿಂ ಉಪಜಾತಿಗಳಿಗೆ ಶೇ 4ರಷ್ಟು ಮೀಸಲಾತಿ ಕೊಡಲಾಗಿದೆ. ಈ 2ಬಿಯಲ್ಲಿ ನೀಡಿರುವ ಶೇ 4ರಷ್ಟು ಮೀಸಲಾತಿಯೇ ಈಗ ವಿವಾದದ ಕೇಂದ್ರಬಿಂದು.

ಉತ್ತರಪ್ರದೇಶ, ಬಿಹಾರ, ತಮಿಳುನಾಡು, ಕೇರಳ ಈ ರಾಜ್ಯಗಳು ಒಬಿಸಿ ಚಹರೆಯ ಮುಸ್ಲಿಂ ಉಪಜಾತಿಗಳನ್ನು ಗುರುತಿಸಿ ಮೀಸಲಾತಿ ನೀಡಿವೆ. ಕಾಂಗ್ರೆಸ್ ನೇತೃತ್ವದ ಸರ್ಕಾರವು ಅವಿಭಜಿತ ಆಂಧ್ರ ಪ್ರದೇಶದಲ್ಲಿ 2004ರಲ್ಲಿ ಮುಸ್ಲಿಂ ಸಮುದಾಯಕ್ಕೆ ಇಡಿಯಾಗಿ ಶೇ 5ರಷ್ಟು ಮೀಸಲಾತಿ ಘೋಷಿಸಿತು. ಆದರೆ ಅಲ್ಲಿನ ಹೈಕೋರ್ಟ್ ಅದನ್ನು ರದ್ದು ಮಾಡಿತು. ಹಟಕ್ಕೆ ಬಿದ್ದ ಸರ್ಕಾರ, ಸುಗ್ರೀವಾಜ್ಞೆ ಮೂಲಕ ಮೀಸಲಾತಿಯನ್ನು ಜಾರಿ ಮಾಡಿತು. ಐವರು ನ್ಯಾಯಮೂರ್ತಿಗಳ ಹೈಕೋರ್ಟ್ ಪೀಠ ಇದನ್ನೂ ರದ್ದುಪಡಿಸಿ, ಇಡಿಯಾಗಿ ಮುಸ್ಲಿಮರಿಗೆ ಮೀಸಲಾತಿ ಕೊಡುವುದು ಅಸಾಂವಿಧಾನಿಕ ಎಂದು ಘೋಷಿಸಿತು. ಕೊನೆಗೆ ಸರ್ಕಾರವು ಸುಪ್ರೀಂ ಕೋರ್ಟಿನ ಮೆಟ್ಟಿಲೇರಿತು. ಈ ನಡುವೆ ಪಶ್ಚಿಮ ಬಂಗಾಳ ಸರ್ಕಾರ 77 ಜಾತಿಗಳನ್ನು ಒಬಿಸಿ ಪಟ್ಟಿಗೆ ಸೇರಿಸಿತು. ಅದರಲ್ಲಿ 75 ಮುಸ್ಲಿಂ ಉಪಜಾತಿಗಳೇ ಇದ್ದವು. ಈ ಪ್ರಕರಣವೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. 2024ರ ಡಿಸೆಂಬರ್‌ನಲ್ಲಿ ದ್ವಿಸದಸ್ಯ ಪೀಠವು ಇಡಿಯಾಗಿ ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ಕೊಡಲಾಗದು, ಧರ್ಮಾಧಾರಿತ ಮೀಸಲಾತಿಗೆ ಸಂವಿಧಾನದಲ್ಲಿ ಅವಕಾಶವಿಲ್ಲ ಎಂದು ತೀರ್ಪು ನೀಡಿತು.

2023ರಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಕರ್ನಾಟಕ ಸರ್ಕಾರ ಚುನಾವಣೆಯ ಹೊಸ್ತಿಲಲ್ಲಿ 2ಬಿ ಮೀಸಲಾತಿಯನ್ನು ರದ್ದುಪಡಿಸಿತು. ಇದೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ವಿಚಾರಣೆಯ ಸಂದರ್ಭದಲ್ಲಿ, ಚುನಾವಣೆಯಲ್ಲಿ ಮತದಾರರನ್ನು ಪ್ರಲೋಭಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂಬ ವಾದ ಬಂದಾಗ, ರಾಜ್ಯ ಸರ್ಕಾರವು ಅಫಿಡವಿಟ್ ಸಲ್ಲಿಸಿ, ಚುನಾವಣೆಯ ತರುವಾಯ ಆದೇಶ ಜಾರಿ ಮಾಡುವುದಾಗಿ ಹೇಳಿತು. ಬಿಜೆಪಿ ಸೋತು ಕಾಂಗ್ರೆಸ್ ಅಧಿಕಾರಕ್ಕೆ ಏರಿದ್ದರಿಂದ 2ಬಿ ಮೀಸಲಾತಿ ಯಥಾಸ್ಥಿತಿಯಲ್ಲಿದೆ.



ರಾಜ್ಯ ಸರ್ಕಾರವು ಎಸ್‌ಸಿ, ಎಸ್‌ಟಿ ಮೀಸಲಾತಿಯನ್ನು ಸರ್ಕಾರಿ ಗುತ್ತಿಗೆ ಹಂಚಿಕೆಯಲ್ಲಿ ಜಾರಿ ಮಾಡಿತ್ತು. ಈ ಹಂಚಿಕೆಯನ್ನು ಒಬಿಸಿ ಗುಂಪುಗಳಿಗೆ ವಿಸ್ತರಿಸಿತು. ಪ್ರವರ್ಗ 1 ಮತ್ತು 2ಎ ಗುಂಪಿನಲ್ಲಿರುವ 19 ನೈಜ ಮುಸ್ಲಿಂ ಹಿಂದುಳಿದ ಜಾತಿಗಳಿಗೆ ಗುತ್ತಿಗೆ ಮೀಸಲಾತಿ ಹಂಚಿಕೆಯ ಬಗ್ಗೆ ತಕರಾರಿಲ್ಲ. ಆದರೆ 2ಬಿಯಲ್ಲಿ ಬರುವ ಮುಖ್ಯಧಾರೆಯ ಮುಸ್ಲಿಮರನ್ನು ಒಬಿಸಿ ಎಂದು ಗುರುತಿಸುವುದು ತಕರಾರಿಗೆ ಕಾರಣವಾಗಿದೆ. ಹಾಗಾದರೆ ಮುಖ್ಯಧಾರೆಯ ಮುಸ್ಲಿಮರು ಮೀಸಲಾತಿಯಿಂದಲೇ ಹೊರಗುಳಿಯುತ್ತಾರೆಯೇ ಎಂಬ ಪ್ರಶ್ನೆ ಬರುತ್ತದೆ. ಹಾಗೇನಿಲ್ಲ, 2018ರಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದ ಶೇ 10ರ ಇಡಬ್ಲ್ಯುಎಸ್ ಮೀಸಲಾತಿಯು ಎಸ್‌ಸಿ, ಎಸ್‌ಟಿ, ಒಬಿಸಿ ಅಲ್ಲದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಮುಸ್ಲಿಮರೂ ಸೇರಿದಂತೆ ಎಲ್ಲ ಅಲ್ಪಸಂಖ್ಯಾತರನ್ನೂ ಒಳಗೊಳ್ಳುತ್ತದೆ. ಕರ್ನಾಟಕದ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ 2ಬಿ ಮಾತ್ರವಲ್ಲ 3ಎ, 3ಬಿಯಲ್ಲಿರುವ ಎಲ್ಲ ಜಾತಿಗಳೂ ನೈಜ ಒಬಿಸಿ ಜಾತಿಗಳಲ್ಲ. ಹೀಗಾಗಿ, ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳಿಗೆ ಸಿಗುತ್ತಿರುವ ಶೇ 32ರಷ್ಟು ಮೀಸಲಾತಿಯಲ್ಲಿ ನೈಜ ಒಬಿಸಿಗಳಿಗೆ ಸಿಗುತ್ತಿರುವುದು ಶೇ 19ರಷ್ಟು ಪಾಲು ಮಾತ್ರ ಎನ್ನುವುದನ್ನೂ ಅರ್ಥ ಮಾಡಿಕೊಳ್ಳಬೇಕು.

ಲೇಖಕ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತ

ವಾಚಕರ ವಾಣಿ

ಕಟ್ಟಡ ವಿವಾದ: ಇರಲಿ ತಾಳ್ಮೆ

ವಕ್ಫ್ ಮಸೂದೆಗೆ ಸಂಸತ್ತಿನ ಅನುಮೋದನೆಯ ನಂತರ ರಾಷ್ಟ್ರಪತಿ ಅಂಕಿತವೂ ದೊರೆತಿದೆ. ಸಂಪಾದಕೀಯದಲ್ಲಿ (ಪ್ರ.ವಾ., ಏ. 5) ಸೂಚಿಸಿರುವಂತೆ, ಈ ವಿಚಾರದಲ್ಲಿ ಸಲಹೆ, ಸೂಚನೆಗಳನ್ನು ಗಣನೆಗೆ ತೆಗೆದುಕೊಂಡಿಲ್ಲ ನಿಜ, ಆದರೆ ದೀರ್ಘ ಚರ್ಚೆ, ಮತದಾನ ನಡೆದಿದೆ. ಕೆಲವರು ಸುಪ್ರೀಂ ಕೋರ್ಟಿನ ಮೊರೆ ಹೋಗಿದ್ದಾರೆ. ಸಾಂವಿಧಾನಿಕ ಸಿಂಧುತ್ವ ಕುರಿತು ಅಲ್ಲಿ ವಾದ– ಪ್ರತಿವಾದ ನಡೆಯಲಿದೆ. ಆದರೆ ಭಾರತದ ಪೌರರಾಗಿ ನಾವು ಈ ವಿಷಯದಲ್ಲಿ ಮುಕ್ತ ಮನಸ್ಸಿನಿಂದ ಯೋಚಿಸುವುದು ಇಂದಿನ ಅಗತ್ಯ. ಈಗ ಇರುವ ನಿರ್ಮಾಣಗಳು ಹಾಗೂ ಆಸ್ತಿಪಾಸ್ತಿಗಳ ಬಗೆಗೆ ವಿವಿಧ ರಾಜ್ಯಗಳು ಹೇಗೆ ವರ್ತಿಸುತ್ತವೆ ಎಂಬುದು ಮುಖ್ಯ ಅಂಶ.

ಟರ್ಕಿಯ ಒಂದು ಉದಾಹರಣೆ ಕುತೂಹಲ ಹುಟ್ಟಿಸುತ್ತದೆ. ಈಗಿನ ಇಸ್ತಾನ್‌ಬುಲ್ ಒಂದು ಕಾಲದಲ್ಲಿ ಕಾನ್‌ಸ್ಟಾಂಟಿನೋಪಲ್ ಆಗಿತ್ತು. ಕ್ರಿ.ಶ. 1453ರಲ್ಲಿ ಅದು ಆಟೋಮಾನ್ನರ ವಶವಾದಾಗ ಅಲ್ಲಿನ ಆರನೇ ಶತಮಾನದ ಕೆಥೆಡ್ರಲ್ ಅನ್ನು ಮಸೀದಿಯಾಗಿ ಪರಿವರ್ತಿಸಲಾಯಿತು. ಆದರೆ 1934ರಲ್ಲಿ ಮಾಡರ್ನ್ ಟರ್ಕಿಯ ಶಿಲ್ಪಿ ಮುಸ್ತಫಾ ಕಮಾಲ್ ಅತಾತುರ್ಕ್ ಅದನ್ನು ಮ್ಯೂಸಿಯಂ ಎಂದು ಘೋಷಿಸಿದರು. 2020ರ ಜುಲೈನಲ್ಲಿ ಈಗಿನ ಅಧ್ಯಕ್ಷ ಎರ್ಡೋಗನ್ ಒಂದು ಆಜ್ಞೆಯ ಮೂಲಕ ಅದನ್ನು ಮತ್ತೆ ಮಸೀದಿ ಮಾಡಿದರು. ವಾಸ್ತುಶಿಲ್ಪದ ದೃಷ್ಟಿಯಿಂದ ಆ ಕಟ್ಟಡ ಮಹತ್ವದ್ದು. ಆದರೆ ಮತಶ್ರದ್ಧೆಯಂತಹ ಕಾರಣಗಳಿಂದ ಅದರಲ್ಲಿನ ಮೊಸಾಯಿಕ್ ಹಾಗೂ ಇತರ ಕಲಾ ಅಂಶಗಳು ಕಿತ್ತಾಟಕ್ಕೆ ಒಳಗಾಗಿವೆ. ಪ್ರಸ್ತುತ ಒಂದು ಪ್ರತಿಷ್ಠಾನವು ಅದರ ಒಡೆತನ ಹೊಂದಿದೆ. ಭಾರತದಲ್ಲೂ ಹಲವು ಕಟ್ಟಡಗಳು ಈಚಿನ ದಶಕಗಳಲ್ಲಿ ವಿವಾದಕ್ಕೆ ಸಿಲುಕಿವೆ. ವಿವಿಧ ಸಮುದಾಯಗಳು ಹಾಗೂ ಸರ್ಕಾರವು ಭವಿಷ್ಯದ ದೃಷ್ಟಿಯಿಂದ ತಾಳ್ಮೆ ಹಾಗೂ ವಿಶಾಲ ಮನೋಭಾವ ತೋರಬೇಕಾಗಿದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ತೆಲಂಗಾಣ: ಈ ಕ್ರಮ ಆಘಾತಕಾರಿ

ದೇಶದಾದ್ಯಂತ ಬುಲ್ಡೋಜರ್‌ಗಳು ಆಗಾಗ ಬಹಳಷ್ಟು ಸದ್ದು ಮಾಡುವುದು ತೀರಾ ಕಳವಳದ ಸಂಗತಿ. ಒಂದೆಡೆ ಅಕ್ರಮ ಮನೆಗಳನ್ನು ತೆರವುಗೊಳಿಸುವ ನೆಪದಲ್ಲಿ ಉತ್ತರಪ್ರದೇಶ ಸರ್ಕಾರದ ಅವಸರದ ಬುಲ್ಡೋಜರ್ ಕ್ರಮ ಜನರ ಆಕ್ರೋಶಕ್ಕೆ ಕಾರಣವಾಗಿತ್ತು. ಇದೀಗ ಹೈದರಾಬಾದ್ ವಿಶ್ವವಿದ್ಯಾಲಯದ ಆವರಣದ ಪಕ್ಕದಲ್ಲಿರುವ 400 ಎಕರೆ ವ್ಯಾಪ್ತಿಯಲ್ಲಿ ವಿವಿಧ ಪ್ರಕಾರದ ಅಸಾಧಾರಣ ಜೀವವೈವಿಧ್ಯವನ್ನು ಹೊಂದಿರುವ ಅರಣ್ಯದ ಮೇಲೆ ನೂರಾರು ಬುಲ್ಡೋಜರ್‌ಗಳು ರಾತ್ರೋರಾತ್ರಿ ತನ್ನ ಅಟ್ಟಹಾಸವನ್ನು ಮೆರೆದಿರುವುದು ಆಘಾತಕಾರಿ ಸಂಗತಿಯಾಗಿದೆ.

ಈ ಜಾಗ ಯಾರಿಗೆ ಸೇರಿದ್ದು ಎಂಬುದಕ್ಕಿಂತಲೂ ಅಲ್ಲಿ ನೆಲಸಿರುವ ನೂರಾರು ಅಪರೂಪದ ಜೀವ ಪ್ರಭೇದಗಳ ನೆಲೆಯನ್ನು ನಾಶಗೊಳಿಸಿರುವುದು ಖಂಡನೀಯ. ಇಂತಹ ಪ್ರಕರಣಗಳು ಭವಿಷ್ಯದಲ್ಲಿ ಮರುಕಳಿಸದಂತೆ ನೋಡಿಕೊಳ್ಳಲು ಸುಪ್ರೀಂ ಕೋರ್ಟ್ ಕಠಿಣ ಕ್ರಮ ಕೈಗೊಳ್ಳಬೇಕು. ಜೊತೆಗೆ ಕೂಡಲೇ ಆ ಪ್ರದೇಶವನ್ನು ಸಂರಕ್ಷಿತ ಅರಣ್ಯ ಎಂದು ಘೋಷಿಸಿ, ಜೀವವೈವಿಧ್ಯವನ್ನು ಕಾಪಾಡಲು ಮುಂದಾಗಬೇಕು.

ಸುರೇಂದ್ರ ಪೈ, ಭಟ್ಕಳ

ವೇಗದ ಚಾಲನೆ: ಕಂಪನಿಗಳ ನಡೆ ಸರಿಯಲ್ಲ

ಅವಸರದ ಸೇವೆ ಕೊಡುವ ಧಾವಂತದಲ್ಲಿ ಹಲವು ಕಂಪನಿಗಳು ದೇಶದಲ್ಲಿ ಪ್ರತಿ ನಿಮಿಷವೂ ನಿಯಮ ಉಲ್ಲಂಘಿಸುತ್ತಿವೆ. ಪ್ರಸ್ತುತ ದೇಶದ ಪ್ರತಿ ನಗರ, ಪಟ್ಟಣಗಳಲ್ಲಿ ಆಂಬುಲೆನ್ಸ್‌ಗಿಂತ ವೇಗವಾಗಿ ಇಂತಹ ಕಂಪನಿಗಳ ಬೈಕ್‌ಗಳು ಓಡಾಡುತ್ತಿವೆ. ಕಾರಣ, ಆರ್ಡರ್ ನೀಡಿದ ಹತ್ತು ನಿಮಿಷಗಳ ಒಳಗೆ ಡೆಲಿವರಿ ನೀಡುವ ಭರವಸೆಯನ್ನು ಕಂಪನಿಗಳು ಗ್ರಾಹಕರಿಗೆ ನೀಡುತ್ತಿವೆ. ಅದರಂತೆ ಕಂಪನಿಯ ಪ್ರತಿನಿಧಿಗಳು ವೇಗವಾಗಿ ಪದಾರ್ಥಗಳನ್ನು ತಲುಪಿಸಲು ರಸ್ತೆಯಲ್ಲಿ ಅತಿ ವೇಗವಾಗಿ, ನಿರ್ಲಕ್ಷ್ಯದಿಂದ ವಾಹನ ಚಲಾಯಿಸುತ್ತಾ ಮುನ್ನಡೆಯುತ್ತಾರೆ. ಆ ಸಂದರ್ಭದಲ್ಲಿ ಬದಿಯಲ್ಲಿ ಚಲಿಸುವ ವಾಹನ ಚಾಲಕರು, ಪಾದಚಾರಿಗಳಿಗೆ ಆತಂಕ ಉಂಟಾಗುತ್ತದೆ. ಬೆಂಗಳೂರಿನಂತಹ ನಗರಗಳಲ್ಲಿ ಫುಟ್‌ಪಾತ್‌ಗಳ ಮೇಲೂ ವಾಹನ ಚಲಾಯಿಸುತ್ತಾರೆ. ಸಾರ್ವಜನಿಕ ರಸ್ತೆಯಲ್ಲಿ ಅತಿ ವೇಗವಾಗಿ ಅಥವಾ ನಿರ್ಲಕ್ಷ್ಯದಿಂದ ವಾಹನ ಚಲಾಯಿಸುವುದು ಅಪರಾಧ. ಹಾಗೆಯೇ ವಾಹನಗಳು ನಿಗದಿತ ವೇಗದ ಮಿತಿಯನ್ನು ದಾಟಿದರೆ ಅದು ಸಹ ಅಪರಾಧವಾಗಿರುತ್ತದೆ.

ಹೀಗೆ ಅವರು ವೇಗವಾಗಿ ವಾಹನ ಚಲಾಯಿಸಲು ಕಾರಣವಾಗಿರುವ ಕಂಪನಿಗಳ ನಡೆಯೂ ಶಿಕ್ಷಾರ್ಹ ಅಪರಾಧ ಎನಿಸುತ್ತದೆ. ಒಂದು ವೇಳೆ ಡೆಲಿವರಿ ಬಾಯ್ ಅಪಘಾತ ಮಾಡಿದರೆ ಕಂಪನಿಯವರನ್ನೂ ಆರೋಪಿಗಳನ್ನಾಗಿ ತೋರಿಸಬೇಕಾಗುತ್ತದೆ. ಆದಕಾರಣ ವೇಗದ ಚಾಲನೆಯನ್ನು ಪ್ರೋತ್ಸಾಹಿಸದಂತೆ ಕಂಪನಿಗಳಿಗೆ ನಿರ್ದೇಶನ ನೀಡುವ, ಅದನ್ನು ನಿರ್ಲಕ್ಷಿಸುವ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳುವ ಅವಶ್ಯಕತೆ ಇದೆ.

ಎಸ್.ರವಿ, ಮೈಸೂರು

ಕಟೌಟ್ ಹಾವಳಿ: ಬೆಕ್ಕಿಗೆ ಗಂಟೆ ಕಟ್ಟುವವರಾರು?

ಕಟೌಟ್ ಹಾಗೂ ಬ್ಯಾನರ್‌ಗಳ ಹಾವಳಿ ಹೆಚ್ಚಾಗಿರುವುದು (ಪ್ರ.ವಾ., ಏ. 5) ಬರೀ ಬೆಂಗಳೂರು ಅಥವಾ ಮುಖ್ಯ ನಗರಗಳಿಗೆ ಸೀಮಿತವಾದ ಸಮಸ್ಯೆಯಲ್ಲ. ಇದು ರಾಜ್ಯದ ಎಲ್ಲ ಪಟ್ಟಣ ಹಾಗೂ ಹಳ್ಳಿಗಳಿಗೂ ವ್ಯಾಪಿಸಿದೆ. ಉದ್ಯಾನನಗರಿ, ಸಿಲಿಕಾನ್ ವ್ಯಾಲಿ ಎಂದು ಕರೆಸಿಕೊಳ್ಳುವ ಬೆಂಗಳೂರು ಈಗ ಕಟೌಟ್ ನಗರಿಯಾಗಿ ಮಾರ್ಪಾಡಾಗಿ ನಗರದ ಸೌಂದರ್ಯಕ್ಕೆ ಧಕ್ಕೆ ತರುತ್ತಿದೆ. ಯಾರು ಇಂತಹ ಕಟೌಟ್ ಹಾಗೂ ಬ್ಯಾನರ್‌ಗಳನ್ನು ಹಾಕುತ್ತಾರೆ ಎಂಬುದು ಅವುಗಳಲ್ಲಿನ ಚಿತ್ರಗಳು, ಹೆಸರಿನಿಂದಲೇ ಗೊತ್ತಾಗುತ್ತಿದ್ದರೂ ಯಾವುದೇ ಕ್ರಮಗಳನ್ನು ಕೈಗೊಳ್ಳದಿರುವುದಕ್ಕೆ ಸ್ಪಷ್ಟ ಕಾರಣ ನಮ್ಮ ಜನಪ್ರತಿನಿಧಿಗಳು ಎಂಬುದು ಎಲ್ಲರಿಗೂ ತಿಳಿದ ವಿಷಯ. ನಗರದಲ್ಲಿ ನಾವು ರಾತ್ರಿ ಸಂಚರಿಸಿದರೆ ಇವರ ಕಾರುಬಾರನ್ನು ಪ್ರತ್ಯಕ್ಷವಾಗಿ ಕಾಣಬಹುದಾಗಿದೆ. ಅಲ್ಲೇ ಸಂಚರಿಸುವ ಪೊಲೀಸರು ಸಹ ಅದನ್ನು ಪ್ರಶ್ನಿಸುವುದಿಲ್ಲ.

ತಮ್ಮ ನಾಯಕರನ್ನು ಓಲೈಸಲು ಸಣ್ಣಪುಟ್ಟ ಮುಖಂಡರೂ ಇತ್ತೀಚೆಗೆ ಪೈಪೋಟಿಗೆ ಬಿದ್ದವರಂತೆ ಕಟೌಟ್ ಹಾಗೂ ಬ್ಯಾನರ್‌ಗಳನ್ನು ಹಾಕುತ್ತಿದ್ದಾರೆ. ಸಿಗ್ನಲ್ ಕಂಬ, ಮೆಟ್ರೊ ಪಿಲ್ಲರ್, ಬೀದಿದೀಪದ ಕಂಬಗಳಿಗೆ ಹೇಗೆಂದರೆ ಹಾಗೆ ಅವುಗಳನ್ನು ಹಾಕಿ ಸಂಚಾರಕ್ಕೆ ಮತ್ತು ವಾಹನ ಸವಾರರ ಏಕಾಗ್ರತೆಗೆ ಧಕ್ಕೆ ಉಂಟು ಮಾಡುತ್ತಿದ್ದಾರೆ. ಇದು, ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂಬ ಮಾತನ್ನು ನೆನಪಿಗೆ ತರುತ್ತದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆದೇಶಕ್ಕೇ ಬೆಲೆ ಇಲ್ಲ ಎಂದಮೇಲೆ ಈ ಪಿಡುಗು ನಿವಾರಣೆ ಆಗುವುದಾದರೂ ಹೇಗೆ?

ಕಡೂರು ಫಣಿಶಂಕರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸ್ಮಾರ್ಟ್ ಸಿಟಿ ಈಡೇರಿತೇ ಆಶಯ?

ಕೇಂದ್ರದ ಮಹತ್ವಾಕಾಂಕ್ಷಿ ಯೋಜನೆ ಮುಕ್ತಾಯ; ಕಾಮಗಾರಿಗಳ ಬಗ್ಗೆ ವ್ಯಾಪಕ ದೂರು

ಪ್ರಜಾವಾಣಿ ವಾರ್ತೆ

ನಗರಗಳ ಜನರ ಜೀವನ ಮಟ್ಟವನ್ನು ಉತ್ತಮಪಡಿಸುವ ದಿಸೆಯಲ್ಲಿ ದೇಶದ ಆಯ್ದ 100 ನಗರಗಳಲ್ಲಿ ಕೇಂದ್ರ ಸರ್ಕಾರವು 2015ರಲ್ಲಿ ಸ್ಮಾರ್ಟ್ ಸಿಟಿ ಮಿಷನ್ ಕಾರ್ಯಕ್ರಮವನ್ನು ಜಾರಿಗೊಳಿಸಿತ್ತು. ರಸ್ತೆ, ಸಾರಿಗೆ ಮುಂತಾದ ಮೂಲಸೌಲಭ್ಯ ಅಭಿವೃದ್ಧಿಪಡಿಸುವುದು, ಸುಸ್ಥಿರ ಮಾರ್ಗಗಳನ್ನು ರೂಪಿಸುವುದು, ಜನರಿಗೆ ಉತ್ತಮ ಸೇವೆ ಒದಗಿಸುವುದು ಈ ಮೂಲಕ ಆರ್ಥಿಕ ಅಭಿವೃದ್ಧಿ ಸಾಧಿಸಿ ಮಾದರಿ ನಗರಗಳನ್ನು ರೂಪಿಸುವುದು ಯೋಜನೆಯ ಗುರಿ ಎಂದು ಸರ್ಕಾರ ಪ್ರತಿಪಾದಿಸಿತ್ತು. ಅದಕ್ಕೆ ಪೂರಕವಾಗಿ 100 ನಗರಗಳಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು. ಈ ಯೋಜನೆಯ ಗಡುವು ಇದೇ ಮಾ.31ಕ್ಕೆ ಅಂತ್ಯಗೊಂಡಿದೆ.

100 ನಗರಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದ ₹1,64,545 ಕೋಟಿ ವೆಚ್ಚದ 8,062 ಯೋಜನೆಗಳ ಪೈಕಿ 7,502 (ಶೇ 93) ಯೋಜನೆಗಳು ಪೂರ್ಣಗೊಂಡಿದ್ದರೆ, 560 (ಶೇ 7ರಷ್ಟು) ಇನ್ನೂ ನಡೆಯುತ್ತಿವೆ. 18 ನಗರಗಳಲ್ಲಿ ಮಾತ್ರ ಎಲ್ಲ ಕಾಮಗಾರಿಗಳೂ ಪೂರ್ಣಗೊಂಡಿವೆ; ಇವುಗಳಲ್ಲಿ ತಮಿಳುನಾಡಿನ 5 ಮತ್ತು ಉತ್ತರ ಪ್ರದೇಶದ 4 ನಗರಗಳು ಸೇರಿವೆ. ತೆಲಂಗಾಣ, ಮಣಿಪುರ, ಬಿಹಾರ, ಆಂಧ್ರ ಪ್ರದೇಶ ಮುಂತಾದ ರಾಜ್ಯಗಳು ಯೋಜನೆ ಜಾರಿಯಲ್ಲಿ ಹಿಂದುಳಿದಿವೆ.

ಕರ್ನಾಟಕದ ಏಳು ನಗರಗಳು (ಬೆಂಗಳೂರು, ತುಮಕೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಶಿವಮೊಗ್ಗ, ದಾವಣಗೆರೆ) ಯೋಜನೆಗೆ ಆಯ್ಕೆಯಾಗಿದ್ದವು. ರಾಜ್ಯದಲ್ಲಿ ಯೋಜನೆಯ ಅಡಿ ಶೇ 95ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿದೆ.

ಆದರೆ, ಪೂರ್ಣಗೊಂಡ ಬಹುತೇಕ ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿಲ್ಲ ಎನ್ನುವ ಕೂಗು ವ್ಯಾಪಕವಾಗಿದೆ; ಹಲವೆಡೆ ಅವ್ಯವಹಾರವೂ ವರದಿಯಾಗಿದೆ. ಯೋಜನೆಯ ಉದ್ದೇಶ ಎಷ್ಟರಮಟ್ಟಿಗೆ ಸಾಕಾರಗೊಂಡಿದೆ ಎನ್ನುವ ಪ್ರಶ್ನೆಯೂ ಮೂಡಿದೆ.

ಯಾವ ಕ್ಷೇತ್ರಗಳಿಗೆ ಎಷ್ಟು ವೆಚ್ಚ?

(₹ ಕೋಟಿಗಳಲ್ಲಿ)

ಕ್ಷೇತ್ರ	ವೆಚ್ಚ
ರಸ್ತೆ	436
ಐಟಿ	135
ಕಟ್ಟಡಗಳು	150.65
ಇ-ಮೊಬಿಲಿಟಿ	67
ಆರೋಗ್ಯ	80.48
ಉದ್ಯಾನ	40
ಇತರೆ	12.50
ಶಿಕ್ಷಣ	11.67

ರಿಪೇರಿಗೆ ಸಿದ್ಧವಾದ 'ಸ್ಮಾರ್ಟ್' ಕಾಮಗಾರಿಗಳು

ಬೆಂಗಳೂರು

ಬೆಂಗಳೂರಿನಲ್ಲಿ 'ಸ್ಮಾರ್ಟ್ ಸಿಟಿ' ಯೋಜನೆ ಅಡಿ 53 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಇವು 2022ರ ಜೂನ್ ಅಂತ್ಯಕ್ಕೆ ಮುಗಿಯಬೇಕಿತ್ತು. ಆದರೆ, ಮೂರು ಬಾರಿ ಅವಧಿ ವಿಸ್ತರಣೆಯಾಗಿದ್ದರೂ 'ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್' ಎಂಬ ವಿಶೇಷ ಉದ್ದೇಶಿತ ಘಟಕ (ಎಸ್‌ಪಿವಿ)ರದ್ದಾಗುವ ಹಂತಕ್ಕೆ ಬಂದಿದ್ದರೂ ಕಾಮಗಾರಿಗಳು ಪೂರ್ಣಗೊಂಡಿಲ್ಲ. ಇನ್ನೂ ಒಂದು ಕಾಮಗಾರಿ ಬಾಕಿ ಇದೆ. ಆದರೆ, ಪೂರ್ತಿ ಹಣ ಬಿಡುಗಡೆಯಾಗಿದ್ದು, ಅದರಲ್ಲಿ ಸುಮಾರು ₹90 ಕೋಟಿ ಉಳಿದಿದೆ.

ಸ್ಮಾರ್ಟ್ ಸಿಟಿ ಯೋಜನೆಯ ಅಡಿ ₹933.30 ಮೊತ್ತದ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಅದರಲ್ಲಿ ಪೂರ್ಣಗೊಂಡ ಕಾಮಗಾರಿಗಳಿಗಾಗಿ ₹860.85 ಕೋಟಿ ಹಣ ವೆಚ್ಚ ಮಾಡಲಾಗಿದೆ. ಸುಮಾರು ಶೇ 43.6ರಷ್ಟು ಹಣವನ್ನು 32 ರಸ್ತೆಗಳ ಅಭಿವೃದ್ಧಿಗೇ ವ್ಯಯಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ತಲಾ ₹500 ಕೋಟಿ ಅನುದಾನವನ್ನು ನೀಡಿದ್ದು, ಅದರಲ್ಲಿ ₹66.7 ಕೋಟಿ ಆಡಳಿತ-ಸಿಬ್ಬಂದಿಗೆ ವೆಚ್ಚವಾಗಿದೆ. ಅನೇಕ ಕಡೆ ಕಳಪೆ ಕಾಮಗಾರಿ ನಡೆದಿದ್ದು, ಪೂರ್ಣಗೊಂಡಿರುವ ಕಾಮಗಾರಿಗಳು ಈಗಾಗಲೇ ರಿಪೇರಿಯ ಹಂತಕ್ಕೆ ಬಂದಿವೆ. ಕೆಲವೆಡೆ ಒಳಚರಂಡಿ ನೀರು ರಸ್ತೆಗಳ ಮೇಲೆಯೇ ಹರಿಯುತ್ತಿದೆ. ಕೆ.ಆರ್.ಮಾರುಕಟ್ಟೆಯ ಆರ್ಥಿಕ ಕೇಂದ್ರದ ಮರುಅಭಿವೃದ್ಧಿ ಅವುಗಳ ಗಾಜುಗಳನ್ನು ಬದಲಾಯಿಸಿರುವುದಕ್ಕಷ್ಟೇ ಸೀಮಿತವಾಗಿದೆ. ವಿಕ್ಟೋರಿಯಾ ಆಸ್ಪತ್ರೆಗೆ ನೀಡಿರುವ ಬ್ಯಾಟರಿಚಾಲಿತ ವಾಹನಗಳು ಉಪಯೋಗವಾಗದೇ ದೂಳು ಹಿಡಿದಿವೆ.

ಕಾಮಗಾರಿ ಪೂರ್ಣಗೊಂಡಿದ್ದರೂ ಬಳಕೆಗೆ ಇಲ್ಲ

ಬೆಳಗಾವಿ

ಬೆಳಗಾವಿಯಲ್ಲಿ ₹1,000 ಕೋಟಿ ವೆಚ್ಚದಲ್ಲಿ 107 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈವರೆಗೆ 97 ಕಾಮಗಾರಿಗಳು ಪೂರ್ಣಗೊಂಡಿವೆ. ಉಳಿದ 10 ಕಾಮಗಾರಿಗಳಲ್ಲಿ ಕೆಲವು ಅಂತಿಮ ಹಂತದಲ್ಲಿದ್ದರೆ, ಉಳಿದವು ನನೆಗುದಿಗೆ ಬಿದ್ದಿವೆ. ಕಣಬರಗಿ ಬಳಿಯ 'ಸ್ಮಾರ್ಟ್ ಪಾರ್ಕ್', ಬಸ್ ನಿಲ್ದಾಣ ಹಾಗೂ ಕಾಂಪ್ಲೆಕ್ಸ್ ಸೇರಿದಂತೆ 10 ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದರೂ ಜನರ ಬಳಕೆಗೆ ದಕ್ಕಿಲ್ಲ. ವ್ಯಾಕ್ಸಿನ್ ಡಿಪೊದಲ್ಲಿ ಮುಖ್ಯ ಕಾಮಗಾರಿಗಳು ಬಾಕಿ ಉಳಿದಿವೆ. ಏವಿಯೇಷನ್ ಗ್ಯಾಲರಿ, ಕಲಾ ಗ್ಯಾಲರಿ, ಗ್ರಾಮೀಣ ಭಾರತ ಗ್ಯಾಲರಿ, ಸಂಶೋಧನಾ ಸಭಾಂಗಣಗಳು ಇನ್ನೂ ನಿರ್ಮಾಣವಾಗಿಲ್ಲ. ಕೆಲವು ರಸ್ತೆ ಕಾಮಗಾರಿಗಳೂ ಬಾಕಿ ಉಳಿದಿವೆ.

21 ಪ್ರಶಸ್ತಿ: ನವದೆಹಲಿಯಲ್ಲಿ ಈಚೆಗೆ ನಡೆದ 'ಸ್ಮಾರ್ಟ್‌ಸಿಟಿ ಎಕ್ಸ್‌ಪೋ-2025'ರಲ್ಲಿ ಬೆಳಗಾವಿ ನಗರಕ್ಕೆ 'ವರ್ಷದ ಅತ್ಯುತ್ತಮ ನಗರ ನಾಯಕ' (Best City Leader of the Year) ಪ್ರಶಸ್ತಿ ಬಂದಿದೆ. ವಿಶ್ವಸಂಸ್ಥೆಯ ಪ್ರಶಸ್ತಿ, ಅತ್ಯುತ್ತಮ ಆಡಳಿತ ಪ್ರಶಸ್ತಿ, ಅತ್ಯುತ್ತಮ ನಾವೀನ್ಯತೆ ಪ್ರಶಸ್ತಿ, ಎಂಟರ್‌ಪ್ರೈಸ್ ಎಐ ಮತ್ತು ಬಿಗ್ ಡೇಟಾದಲ್ಲಿ ಅತ್ಯುತ್ತಮ ಪ್ರಶಸ್ತಿಯೂ ಸೇರಿದಂತೆ 21 ಪ್ರಶಸ್ತಿಗಳನ್ನು ಬೆಳಗಾವಿ ಸ್ಮಾರ್ಟ್‌ಸಿಟಿ ಪಡೆದುಕೊಂಡಿದೆ. ಬೆಳಗಾವಿಯಲ್ಲಿ ಘನತ್ಯಾಜ್ಯವನ್ನು ವೈಜ್ಞಾನಿಕ ಹಾಗೂ ಸಮರ್ಪಕವಾಗಿ ನಿರ್ವಹಣೆ ಮಾಡುವ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದಿಂದ ₹135 ಕೋಟಿ ಹೆಚ್ಚುವರಿ ಅನುದಾನ ದೊರೆತಿದೆ. ಸಿಐಟಿಐಐಎಸ್ 2.0 ಅಡಿ ದೇಶದ 18 ನಗರಗಳನ್ನು ಆಯ್ಕೆ ಮಾಡಲಾಗಿದ್ದು, ಅದರಲ್ಲಿ ಬೆಳಗಾವಿಯೂ ಒಂದಾಗಿದೆ.

ಭ್ರಷ್ಟಾಚಾರದ ವಿರುದ್ಧ ಸರಣಿ ಪ್ರತಿಭಟನೆ

ಶಿವಮೊಗ್ಗ

ಅವೈಜ್ಞಾನಿಕ ಕಾಮಗಾರಿ, ವಿಪರೀತ ಭ್ರಷ್ಟಾಚಾರ ಹಾಗೂ ನಗರದ ಅಂದ ಕೆಡಿಸಿದ ಆರೋಪಗಳ ಕಾರಣ ಇಲ್ಲಿನ ನಾಗರಿಕ ವೇದಿಕೆಯ ಸರಣಿ ಪ್ರತಿಭಟನೆಗಳ ನಡುವೆಯೇ ಶಿವಮೊಗ್ಗ ಸ್ಮಾರ್ಟ್ ಸಿಟಿ ಸಂಸ್ಥೆಯ ಕಾರ್ಯನಿರ್ವಹಣೆ ಮಾರ್ಚ್ 31ಕ್ಕೆ ಅಂತ್ಯಗೊಂಡಿದೆ.

ಶಿವಮೊಗ್ಗ ಸ್ಮಾರ್ಟ್ ಸಿಟಿ ಅಡಿ ₹938 ಕೋಟಿ ವೆಚ್ಚದಲ್ಲಿ ಒಟ್ಟು 76 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಯೋಗ ಭವನ, ಮ್ಯೂಸಿಯಂ, ಶಿವಪ್ಪ ನಾಯಕ ಅರಮನೆ ಪುನರ್‌ನಿರ್ಮಾಣ ಹಾಗೂ ತುಂಗಾ ನದಿಗೆ ದಂಡೆ ನಿರ್ಮಾಣ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ.

ನಿಯಮಬಾಹಿರವಾಗಿ ತಮ್ಮನ್ನು ಕೆಲಸದಿಂದ ತೆಗೆಯಲಾಗಿದೆ ಎಂದು ಆರೋಪಿಸಿ ಅಸಹಕಾರ ತೋರುತ್ತಿದ್ದ ಸಿಬ್ಬಂದಿಯಿಂದ ಪೊಲೀಸರ ಮಧ್ಯಪ್ರವೇಶದೊಂದಿಗೆ ದಾಖಲೆಗಳನ್ನು ಪಡೆಯಲಾಗಿದೆ. ಮೇಲಧಿಕಾರಿಗಳು ಹೆಚ್ಚುವರಿಯಾಗಿ ₹65 ಲಕ್ಷ ವೇತನ ರೂಪದಲ್ಲಿ ಪಡೆದಿದ್ದು, ಈ ಬಗ್ಗೆ ತನಿಖೆಯಾಗಬೇಕಿದೆ ಎನ್ನುವ ಒತ್ತಾಯ ಕೇಳಿಬಂದಿದೆ.

8 ಕಾಮಗಾರಿ ಅಪೂರ್ಣ

ಮಂಗಳೂರು

ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೆತ್ತಿಕೊಂಡ 8 ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲ. ಈ ಯೋಜನೆಯಡಿ ₹955.83 ಕೋಟಿ ಮೊತ್ತದಲ್ಲಿ 47 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಅವುಗಳಲ್ಲಿ ₹475.58 ಕೋಟಿ ಮೊತ್ತದ ಒಟ್ಟು 39 ಕಾಮಗಾರಿಗಳು ಪೂರ್ಣಗೊಂಡಿವೆ.

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯು ಒಟ್ಟು 10 ಕಾಮಗಾರಿಗಳಿಗೆ ₹220 ಕೋಟಿ ಒದಗಿಸಿದ್ದು, ಇವುಗಳನ್ನು ಬೇರೆ ಏಜೆನ್ಸಿಗಳು ಅನುಷ್ಠಾನಗೊಳಿಸಿವೆ. ಇವುಗಳಲ್ಲಿ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಕಾಮಗಾರಿ, ಮಹಾಕಾಳಿ ಪಡ್ಪು ರೈಲ್ವೆ ಕೆಳಸೇತುವೆಯೂ ಸೇರಿದಂತೆ ಕೆಲವು ಕಾಮಗಾರಿಗಳು ಬಾಕಿ ಇವೆ. ನಾಲ್ಕು ಕಾಮಗಾರಿಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಗಳೂ ಆಮೆಗತಿಯಲ್ಲಿ ನಡೆಯುತ್ತಿವೆ.

ಅವ್ಯವಹಾರ, ಅವ್ಯವಸ್ಥೆ

ಹುಬ್ಬಳ್ಳಿ-ಧಾರವಾಡ

ವಾಣಿಜ್ಯ ನಗರಿ ಹುಬ್ಬಳ್ಳಿಯಲ್ಲಿ ₹930 ಕೋಟಿ ವೆಚ್ಚದಲ್ಲಿ 64 ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು. ಅವುಗಳಲ್ಲಿ 60 ಕಾಮಗಾರಿ ಮುಕ್ತಾಯವಾಗಿದ್ದು, ಅವನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಸೇರಿ ವಿವಿಧ ಇಲಾಖೆಗಳಿಗೆ ಹಸ್ತಾಂತರಿಸಲಾಗಿದೆ. ಶೇ 95ರಷ್ಟು ಹಣ ವಿನಿಯೋಗಿಸಲಾಗಿದ್ದು, ಬಾಕಿ ಇರುವ ಕಾಮಗಾರಿಯ ₹55 ಕೋಟಿ ಮಾತ್ರ ಉಳಿದಿದೆ.

ಮಲ್ಟಿ ಲೆವೆಲ್ ಕಾರ್ ಪಾರ್ಕಿಂಗ್ ಕಾಮಗಾರಿ, ಗ್ರೀನ್ ಮೊಬಿಲಿಟಿ ಕಾರಿಡಾರ್ ಕಾಮಗಾರಿ ಕುಂಟುತ್ತಾ ಸಾಗುತ್ತಿವೆ. ಯೋಜನೆಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಸುರಿದಿದ್ದು ಬಿಟ್ಟರೆ, ಅವು ನಿರೀಕ್ಷಿತ ಅಂತ್ಯ ಕಂಡಿಲ್ಲ. ವೀರಮಾರುತಿ ನಗರದ ಕೊಳೆಗೇರಿ ನಿವಾಸಿಗಳಿಗಾಗಿ ನಿರ್ಮಿಸಲಾಗಿರುವ ವಸತಿ ಸಮುಚ್ಚಯ, ಜನತಾ ಬಜಾರ್, ಮೀನು ಮಾರುಕಟ್ಟೆ ನವೀಕರಣ ಕಾಮಗಾರಿ ಮುಕ್ತಾಯವಾಗಿ ವರ್ಷಗಳೇ ಕಳೆದಿದ್ದರೂ ಅವು ಸಾರ್ವಜನಿಕ ಬಳಕೆಗೆ ಮುಕ್ತವಾಗಿಲ್ಲ. ನಗರದ 15 ಕಡೆ ನಿರ್ಮಿಸಲಾಗಿರುವ ಇ-ಶೌಚಾಲಯಗಳು ನಿರುಪಯುಕ್ತವಾಗಿವೆ.

ಕೆಲವು ಯೋಜನೆಗಳು ಪೂರ್ಣಗೊಂಡ ತಿಂಗಳೊಪ್ಪತ್ತಲ್ಲಿಯೇ ಅವಸಾನದಂಚಿಗೆ ತಲುಪಿವೆ. ಕೆಲವು ಕಾಮಗಾರಿಗಳ ವಿರುದ್ಧ ಲೋಕಾಯುಕ್ತಕ್ಕೂ ದೂರು ಸಲ್ಲಿಕೆಯಾಗಿದೆ. ಚಿಟಗುಪ್ಪಿ ಆಸ್ಪತ್ರೆಯಲ್ಲಿ ಅಳವಡಿಸಿರುವ ಸ್ಮಾರ್ಟ್ ಹೆಲ್ತ್ ಕೇರ್ ವ್ಯವಸ್ಥೆಯಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಆರೋಪ ವ್ಯಕ್ತವಾಗಿದ್ದು, ಪಾಲಿಕೆ ಸದನ ಸಮಿತಿ ರಚಿಸಿ ತನಿಖೆ ನಡೆಸುತ್ತಿದೆ. ನಗರದ ಹೊರವಲಯದಲ್ಲಿ ₹170 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿಯೇ ಅತಿದೊಡ್ಡ ಕ್ರೀಡಾ ಸಮುಚ್ಚಯ ನಿರ್ಮಾಣವಾಗುತ್ತಿದ್ದು, ನಗರದಿಂದ ದೂರ ಇರುವ ಕಾರಣ ಇದು ನಿರುಪಯಕ್ತವಾಗುವ ಸಾಧ್ಯತೆ ಹೆಚ್ಚು.

7 ವಾರ್ಡ್‌ಗಳಲ್ಲಷ್ಟೇ ಯೋಜನೆ

ತುಮಕೂರು

ಯೋಜನೆಗೆ ತುಮಕೂರು ನಗರ ಆಯ್ಕೆಯಾಗಿದ್ದರೂ ಕೇವಲ 7 ವಾರ್ಡ್‌ಗಳನ್ನು ಮಾತ್ರ ಇದರ ವ್ಯಾಪ್ತಿಗೆ ತರಲಾಗಿದೆ. ಈ ವಾರ್ಡ್‌ಗಳಲ್ಲಿ ಮಾಡಿರುವ ಕಾಮಗಾರಿ ಬಹುತೇಕ ಕಳಪೆಯಾಗಿದೆ. ಯೋಜನೆಯ ಅಡಿ ಒಟ್ಟು ₹990 ಕೋಟಿ ಬಿಡುಗಡೆಯಾಗಿದ್ದು, ಅದರಲ್ಲಿ ₹936 ಕೋಟಿ ಖರ್ಚು ಮಾಡಲಾಗಿದೆ. ಯೋಜನೆಯಡಿ 194 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದರೆ, 193 ಕಾಮಗಾರಿಗಳು ಮುಗಿದಿವೆ.

₹135 ಕೋಟಿ ವೆಚ್ಚದಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ₹62 ಕೋಟಿಯಲ್ಲಿ ಜಿಲ್ಲಾ ಕ್ರೀಡಾಂಗಣ, ₹29.94 ಕೋಟಿ ವ್ಯಯಿಸಿ ನಗರ ಕೇಂದ್ರ ಗ್ರಂಥಾಲಯ ಅಭಿವೃದ್ಧಿ ಪಡಿಸಲಾಗಿದೆ. ಯೋಜನೆ ಮುಗಿದರೂ ಈ ಮೂರು ಕಟ್ಟಡಗಳನ್ನು ಪೂರ್ಣವಾಗಿ ಬಳಸಲು ಸಾಧ್ಯವಾಗಿಲ್ಲ. 'ತುಮಕೂರು ಸಂತೆ' ಹೆಸರಿನಲ್ಲಿ ಸುಮಾರು ₹2 ಕೋಟಿ ವೆಚ್ಚದಲ್ಲಿ ನಿರ್ಮಿಸಿದ 16 ಮಳಿಗೆ ಹಂಚಿಕೆ ಕಾರ್ಯ ಆಗಿಲ್ಲ. ಬಿ.ಎಚ್. ರಸ್ತೆ, ರಿಂಗ್ ರಸ್ತೆ, ಮಂಡಿಪೇಟೆ ಮುಖ್ಯರಸ್ತೆ ಸೇರಿದಂತೆ ಬಹುತೇಕ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಕೆಲಸ ಮುಗಿದ ಕೆಲವೇ ದಿನಗಳಿಗೆ ರಸ್ತೆಗಳು ಕುಸಿದು ಮತ್ತೆ ಮತ್ತೆ ಮುಚ್ಚಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಕಾಮಗಾರಿ ಸ್ಥಗಿತ

ದಾವಣಗೆರೆ

ಯೋಜನೆ ಪೂರ್ಣಗೊಳಿಸಲು ನಿಗದಿಪಡಿಸಿದ್ದ ಗಡುವು ಮುಗಿದಿರುವುದರಿಂದ ಸದ್ಯ ಇದರ ಅಡಿ ಯಾವುದೇ ಕಾಮಗಾರಿ ನಡೆಯುತ್ತಿಲ್ಲ. ಯೋಜನೆಯ ಅಡಿ ಕೈಗೆತ್ತಿಕೊಳ್ಳಲಾಗಿದ್ದ ಒಟ್ಟು 117 ಕಾಮಗಾರಿಗಳಲ್ಲಿ 111 ಪೂರ್ಣಗೊಂಡಿವೆ. ಕಾಮಗಾರಿಗಳ ಒಟ್ಟು ವೆಚ್ಚ ₹1,083 ಕೋಟಿ; ಪೂರ್ಣಗೊಂಡ ಕಾಮಗಾರಿಗಳ ಮೊತ್ತ ₹796 ಕೋಟಿ.

ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್ ನಿಲ್ದಾಣ, ಕುಂದುವಾಡ ಕೆರೆ ಅಭಿವೃದ್ಧಿ, ಮಂಡಕ್ಕಿ ಬಟ್ಟಿ ರಸ್ತೆ, ಹೊಂಡದ ವೃತ್ತದ ಕಲ್ಯಾಣಿ, ಥೀಮ್ ಪಾರ್ಕ್, ವಿದ್ಯುತ್ ಚಿತಾಗಾರ, ಇ- ಶೌಚಾಲಯ, ಜಿಮ್, 'ಪ್ಯಾನ್ ಸಿಟಿ' ವಿಭಾಗದಡಿ ಕಾಮಗಾರಿಗಳು ಪೂರ್ಣಗೊಂಡಿವೆ. ತುಂಗಭದ್ರಾ ನದಿಗೆ ಬ್ಯಾರೇಜ್ ನಿರ್ಮಾಣ, ₹4.95 ಕೋಟಿ ವೆಚ್ಚದ ರಾಮ್ ಆ್ಯಂಡ್ ಕೋ ವೃತ್ತದ ಅಭಿವೃದ್ಧಿ ಕಾಮಗಾರಿ ಸೇರಿದಂತೆ ಕೆಲ ಕಾಮಗಾರಿಗಳು ಬಾಕಿ ಇವೆ. ಬೈಸಿಕಲ್ ಶೇರಿಂಗ್ ಸೇರಿದಂತೆ ಹಲವು ಕಾಮಗಾರಿಗಳು ಸ್ಥಗಿತಗೊಂಡಿವೆ. ₹42 ಲಕ್ಷ ವೆಚ್ಚದ ಎಲೆಕ್ಟ್ರಿಕ್ ಆಟೊ, ನಗರದ ಪ್ರಮುಖ ಸ್ಥಳಗಳು ಹಾಗೂ ಉದ್ಯಾನಗಳಲ್ಲಿ ಒಟ್ಟು ₹7.94 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಇ-ಶೌಚಾಲಯಗಳಿಗೆ ಸಾರ್ವಜನಿಕರ ಸ್ಪಂದನೆಯೇ ಇಲ್ಲವಾಗಿದೆ.

ಆಧಾರ: ಪ್ರಜಾವಾಣಿಯ ವಿವಿಧ ಬ್ಯೂರೊ, ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ

ಗಣೇಶ್‌ಗೆ ಜೋಡಿಯಾದ ಅಮೃತಾ

ಗಣೇಶ್, ಅಮೃತಾ ಅಯ್ಯರ್

ಈ ಹಿಂದೆ 'ಲವ್ ಇನ್ ಮಂಡ್ಯ' ಚಿತ್ರವನ್ನು ನಿರ್ದೇಶಿಸಿದ್ದ ಅರಸು ಅಂತಾರೆ, ಹತ್ತು ವರ್ಷಗಳ ಬಳಿಕ ಮತ್ತೆ ನಿರ್ದೇಶನಕ್ಕೆ ಮರಳಿದ್ದಾರೆ. ಅವರ ನಿರ್ದೇಶನದಲ್ಲಿ ಗಣೇಶ್ ನಾಯಕನಾಗಿ ನಟಿಸುತ್ತಿರುವ ಚಿತ್ರವೊಂದು ಸೆಟ್ಟೇರಿದೆ. ತೆಲುಗಿನ 'ಹನುಮಾನ್' ಚಿತ್ರದಲ್ಲಿ ನಟಿಸಿದ್ದ ಅಮೃತಾ ಅಯ್ಯರ್ ಗಣೇಶ್‌ಗೆ ಜೋಡಿಯಾಗಿ ಈ ಚಿತ್ರದೊಂದಿಗೆ ಸ್ಯಾಂಡಲ್‌ವುಡ್ ಪ್ರವೇಶಿಸಿದ್ದಾರೆ.

'ಹೆಚ್ಚೆಚ್ಚು ಬರಹಗಾರರು ನಿರ್ದೇಶನಕ್ಕೆ ಬರಬೇಕು. ಆಗ ಉತ್ತಮ ಗುಣಮಟ್ಟದ ಸಿನಿಮಾಗಳು ತಯಾರಾಗುತ್ತವೆ. ಉತ್ತಮ ಚಿತ್ರಗಳು ಬಂದಾಗ ಜನ ತಾವಾಗಿಯೇ ಚಿತ್ರಮಂದಿರಕ್ಕೆ ಬರುತ್ತಾರೆ. ಉತ್ತಮ ಸಿನಿಮಾಗಳನ್ನು ಮಾಡದೆ ಜನ ಬರುತ್ತಿಲ್ಲ ಎಂದು ದೂರುವುದು ಸರಿಯಲ್ಲ. ಒಂದೊಳ್ಳೆ ಕಥೆಯನ್ನು ಹೊಂದಿರುವ ಚಿತ್ರವಿದು. ಬಹಳ ಹಿಂದೆಯೇ ಅರಸು ಅಂತಾರೆ ಈ ಕಥೆ ಹೇಳಿದ್ದರು. ಆದರೆ ಮುಂದೂಡುತ್ತಲೇ ಬಂದೆ. ಈಗ ಈ ಸಿನಿಮಾಕ್ಕೆ ಕಾಲ ಕೂಡಿ ಬಂದಿದೆ. ಹಾಸ್ಯಮಯ ಕಥೆಯೊಂದಿಗೆ ಕುಟುಂಬವೇ ಕುಳಿತು ನೋಡಬಹುದಾದ ಚಿತ್ರವಾಗಲಿದೆ' ಎಂದರು ಗಣೇಶ್.

'ಹೊಂದಿಕೊಂಡು ಸಿನಿಮಾ ಮಾಡುವವರು ಮತ್ತು ಅಂದುಕೊಂಡಂತೆ ಸಿನಿಮಾ ಮಾಡುವವರು ಎಂಬ ಎರಡು ವರ್ಗವಿದೆ. ನಾನು ಎರಡನೇ ವರ್ಗಕ್ಕೆ ಸೇರಿದವನು. ಹೀಗಾಗಿ ಒಂದು ಹಿಟ್ ಸಿನಿಮಾ ಕೊಟ್ಟ ಮೇಲೆ ಮತ್ತೊಂದು ಚಿತ್ರಕ್ಕೆ ಇಷ್ಟು ಸಮಯ ತೆಗೆದುಕೊಂಡೆ. ಚಿತ್ರದ ಶೀರ್ಷಿಕೆ ಮತ್ತಿತರ ವಿವರಗಳನ್ನು ಮುಂದಿನ ಹಂತದಲ್ಲಿ ನೀಡುತ್ತೇವೆ' ಎಂದರು ನಿರ್ದೇಶಕರು.

ರವಿಕುಮಾರ್ ಭದ್ರಾವತಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ರಂಗಾಯಣ ರಘು, ರವಿಶಂಕರ್ ಗೌಡ, ಕಾಕ್ರೋಚ್ ಸುಧಿ ಮುಂತಾದವರು ಚಿತ್ರದಲ್ಲಿದ್ದಾರೆ. ಸುಜ್ಞಾನ್ ಛಾಯಾಚಿತ್ರಗ್ರಹಣ, ಅಕ್ಷಯ್ ಸಂಕಲನ ಚಿತ್ರಕ್ಕಿದೆ.

ಹೊರಬಂತು 'ಜಾಂಟಿ...'ಯ ಹಾಡು

'ಜಾಂಟಿ ಸನ್ ಆಫ್ ಜಯರಾಜ್ ಚಿತ್ರದ' ಮೊದಲ ಹಾಡು 'ಲೋಕದ ಮೂಲ ಬ್ರಹ್ಮನಂತೆ, ಪ್ರೀತಿಯ ಮೂಲ ಅಮ್ಮನಂತೆ' ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಯೋಗರಾಜ್ ಭಟ್ ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಆನಂದರಾಜ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

'ಯಾವುದೇ ಸ್ಥಳದಲ್ಲಿ ತಪ್ಪು ಮಾಡಿದರೂ ತಕ್ಷಣವೆ ಸಂಬಂಧಿತರಲ್ಲಿ ಕ್ಷಮೆ ಕೇಳುತ್ತೇವೆ. ಆದರೆ ಹೆತ್ತು, ಹೊತ್ತು ಬೆಳೆಸಿದ ಅಮ್ಮನ ಬಳಿ ಕ್ಷಮಿಸು ಎಂದು ಕೇಳುವುದಿಲ್ಲ. ನಮ್ಮ ಸಿನಿಮಾ ಮೂಲಕ ಎಲ್ಲಾ ತಾಯಂದಿರಲ್ಲಿಯೂ ಕ್ಷಮೆ ಕೇಳುತ್ತೇವೆ. ಈ ಹಾಡು ಸಿನಿಮಾದ ಕ್ಲೈಮಾಕ್ಸ್‌ನಲ್ಲಿ ಬರುತ್ತದೆ. ನಾನೇ ಸಾಹಿತ್ಯ ಬರೆದಿದ್ದೇನೆ. ಅಮ್ಮನ ಕುರಿತಾದ ಹಾಡುಗಳನ್ನು ಯಾವತ್ತು ಬೇಕಾದರೂ ಕುಳಿತು ಕೇಳಬಹುದು' ಎಂದರು ನಿರ್ದೇಶಕರು.

ನಾಯಕ ಅಜಿತ್ ಜಯರಾಜ್‌ಗೆ ನಿವಿಷ್ಕಾ ಪಾಟೀಲ್ ಜೋಡಿಯಾಗಿದ್ದಾರೆ. ರಾಜವರ್ಧನ್, ಶರತ್ ಲೋಹಿತಾಶ್ವ, ಕಿಶನ್, ಸೋನು ಪಾಟೀಲ್ ಮುಂತಾದವರು ಚಿತ್ರದಲ್ಲಿದ್ದಾರೆ. ವಿಜೇತ್ ಮಂಜೇಹ ಸಂಗೀತ, ಅರ್ಜುನ್ ಆಕೋಟ್ ಛಾಯಾಚಿತ್ರಗ್ರಹಣವಿದೆ.

ನಿವಿಷ್ಕಾ ಪಾಟೀಲ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಜೀವನವನ್ನು ನಿರ್ದಿಷ್ಟ ಉದ್ದೇಶಕ್ಕೆ ಮೀಸಲಿಡಬೇಕು

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

167

ಕಾಶ್ಮೀರದಲ್ಲಿ ಒಂದು ಬಡ ಕುಟುಂಬ ಇತ್ತು. ಯಜಮಾನನ ಹೆಸರು ಮಾನ್ ಸಿಂಗ್; ಕಲ್ಲು ಒಡೆಯುವ ಕೆಲಸ ಮಾಡುತ್ತಿದ್ದ. ಬಹಳ ದಿನಗಳ ನಂತರ ಆತನಿಗೆ ಒಂದು ಮಗು ಆಯಿತು. ಲೋಕದ ರೂಢಿ ಏನು ಎಂದರೆ, ಮಕ್ಕಳಾದರೆ ಸಂತೋಷವಾಗುತ್ತದೆ. ಆದರೆ, ಈ ದಂಪತಿಗೆ ಮಗು ಹುಟ್ಟಿದ್ದಕ್ಕೆ ದುಃಖ ಆಯಿತು. ಯಾಕೆಂದರೆ, ಹುಟ್ಟಿದ ಮಗುವಿಗೆ ಎರಡೂ ಕೈಗಳೇ ಇರಲಿಲ್ಲ. ಆ ಮಗು ಬೆಳೆಯುತ್ತಾ ಕೈಗಳಿಂದ ಮಾಡುವ ಎಲ್ಲ ಕೆಲಸಗಳನ್ನೂ ಕಾಲಿನಿಂದಲೇ ಮಾಡುವುದನ್ನು ಕಲಿಯಿತು; ಕಾಲಿನಿಂದ ಬರೆಯುತ್ತಿತ್ತು, ಕಾಲಿನಿಂದ ಉಣ್ಣುತ್ತಿತ್ತು. ಶಾಲೆಯಲ್ಲಿದ್ದ ಒಬ್ಬ ತರಬೇತುದಾರರು ಆ ಹುಡುಗಿಗೆ ರೈಫಲ್ ತರಬೇತಿ ನೀಡಿದರು. ಕಾಲಿನಿಂದಲೇ ರೈಫಲ್ ಅಭ್ಯಾಸ ಮಾಡುತ್ತಿತ್ತು. ನಂತರ ಆ ಮಗುವನ್ನು ಬಿಲ್ಲು ವಿದ್ಯೆ ಕಲಿಯಲು ಹಾಕಿದರು. ಕಾಲಿನಿಂದ ಬಿಲ್ಲು ವಿದ್ಯೆಯನ್ನು ಕಲಿಯಿತು. ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಬಂಗಾರದ ಪದಕ ತಂದಿತು. ಇಡೀ ಭಾರತವೇ ಆ ಹುಡುಗಿಯನ್ನು ಚಿನ್ನದ ಹುಡುಗಿ ಎಂದು ಕೊಂಡಾಡಿತು. ಇದು ಯಾಕೆ ಸಾಧ್ಯವಾಯಿತು ಎಂದರೆ, ಹೃದಯವನ್ನು ಮೀಸಲು ಮಾಡಿಕೊಂಡಿದ್ದರಿಂದ ಸಾಧ್ಯವಾಯಿತು.

ನಾವು ಏನಾದರೂ ಸಾಧಿಸಬೇಕು ಎಂದರೆ, ಜೀವನವನ್ನು ನಿರ್ದಿಷ್ಟ ಉದ್ದೇಶಕ್ಕೆ ಮೀಸಲಿಡಬೇಕು. ಇಲ್ಲವಾದರೆ ಜೀವನ ಕೆಡುತ್ತದೆ. ಈ ದೇಹ ಎಂದರೆ ಶಕ್ತಿಯ ಸಂಚಯ. ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಎಲ್ಲವೂ ಇದೆ. ಇದು ಶಕ್ತಿಯ ಬ್ಯಾಂಕ್. ಇದನ್ನು ಬಳಸಬೇಕು. ಹೇಗೆ ಬಳಸಬೇಕು ಎನ್ನುವುದು ಗೊತ್ತಿರಬೇಕು. ನೀವು ಯಾವುದೇ ಎಲೆಕ್ಟ್ರಾನಿಕ್ಸ್ ವಸ್ತು ಖರೀದಿ ಮಾಡಿದರೆ ಅದರ ಜೊತೆಗೆ ಅದನ್ನು ಬಳಸುವುದು ಹೇಗೆ ಎಂಬ ಮಾಹಿತಿಯನ್ನೂ ಕೊಡುತ್ತಾರೆ. 3-4 ವರ್ಷದಲ್ಲಿ ಹಾಳಾಗಬಹುದಾದ ವಸ್ತುವಿಗೇ ಹೇಗೆ ಬಳಸಬೇಕು ಎನ್ನುವ ಕೈಪಿಡಿ ಇರುವುದಾದರೆ, ನೂರು ವರ್ಷ ಬಾಳಿಕೆ ಬರುವ ಈ ದೇಹವನ್ನು ಹೇಗೆ ಬಳಸಬೇಕು ಎನ್ನುವುದು ಗೊತ್ತಿಲ್ಲದಿದ್ದರೆ ಹೇಗೆ? ಗೊತ್ತಿಲ್ಲ ಎಂದರೆ ಈ ದೇಹ ಎಲೆಕ್ಟ್ರಾನಿಕ್ಸ್ ವಸ್ತುವಿಗಿಂತ ಕಡೆಯಾಗುತ್ತದೆ.

ಯಾವಾಗ ಏನೇನು ಮಾಡಬೇಕು ಎಂದು ನಮ್ಮ ಋಷಿಗಳು ಕಂಡುಕೊಂಡಿದ್ದರು. ಮನುಷ್ಯನ ಬಾಲ್ಯವನ್ನು ಓದುವುದಕ್ಕೆ ಮೀಸಲಿಡಬೇಕು. ನೀವು ರೊಕ್ಕ ಗಳಿಸಿದರೆ ನಿಮ್ಮ ಊರಿನಲ್ಲಿ ಮಾತ್ರ ಶ್ರೀಮಂತರಾಗುತ್ತೀರಿ. ಜ್ಞಾನ ಗಳಿಸಿದರೆ ಇಡೀ ವಿಶ್ವದಲ್ಲಿಯೇ ಹೆಸರು ಮಾಡಬಹುದು. ಎ.ಪಿ.ಜೆ.ಅಬ್ದುಲ್ ಕಲಾಂ ಅವರು ರಾಷ್ಟ್ರಪತಿ ಭವನದೊಳಕ್ಕೆ ಹೋಗುವಾಗ ಎರಡು ಸೂಟ್‌ಕೇಸ್ ತೆಗೆದುಕೊಂಡು ಹೋಗಿದ್ದರು. ಒಂದು ಪುಸ್ತಕಗಳದ್ದು, ಇನ್ನೊಂದು ಬಟ್ಟೆಗಳದ್ದು. ಅಲ್ಲಿಂದ ಹೊರಗೆ ಬರುವಾಗಲೂ ಅವೇ ಎರಡು ಸೂಟ್‌ಕೇಸ್ ಇತ್ತು. ಅವರು ಹಣದಿಂದ ಶ್ರೀಮಂತರಾಗಿರಲಿಲ್ಲ; ಜ್ಞಾನದಿಂದ ಶ್ರೀಮಂತರಾಗಿದ್ದರು.

ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸಬೇಕು. ಯೌವನವನ್ನು ದುಡಿಯುವುದಕ್ಕೆ ಮೀಸಲಿಡಬೇಕು. ಉಪಜೀವನಕ್ಕೆ, ಉಪಕಾರ ತೀರಿಸುವುದಕ್ಕೆ ದುಡಿಯಬೇಕು. ತಂದೆ ತಾಯಿಗಳ ಸೇವೆ, ದುಡಿಮೆ, ಸಮಾಜ ಮತ್ತು ದೇಶಕ್ಕಾಗಿ ತಮ್ಮ ಯೌವನವನ್ನು ಯಾರು ಮೀಸಲಿಡುತ್ತಾರಲ್ಲ, ಅವರನ್ನು ಯುವಕರು ಎನ್ನಬೇಕು. ಮುಪ್ಪಿನಲ್ಲಿ ಮುನಿಗಳಂತೆ ಇರಬೇಕು. ಮನೆಯಲ್ಲಿ ಸನ್ಯಾಸಿಯಂತೆ ಇರಬೇಕು. ಕಾಲು ನಾಡಿನಲ್ಲಿ ಇದ್ದರೂ ಮುಖ ಕಾಡಿನ ಕಡೆ ಇರಬೇಕು. ಮನುಷ್ಯ ಹೇಗೆ ದೇಹ ಬಿಡಬೇಕು ಎಂದರೆ, ಯೋಗ ಮಾಡಿದಂತೆ ಇರಬೇಕು; ನಗುನಗುತ್ತ ಹೋಗಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಏಪ್ರಿಲ್ 7, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ದಶಮಿ ಗಂ. 20-01 **ನಕ್ಷತ್ರ:** ಪುಷ್ಯ ಗಂ. 06-25 **ಯೋಗ:** ಧೃತಿ ಗಂ. 18-19 **ಕರಣ:** ತೈತಿಲ ಗಂ. 07-37, ಮೀನ ಮಾಸದ 24 ನೇ ದಿನ, ಮಳೆನಕ್ಷತ್ರ: ರೇವತಿ 3.

ರಾಹುಕಾಲ: ಬೆಳಿಗ್ಗೆ 07-30 – 09-00

ಸೂರ್ಯೋದಯ: 06-26 **ಸೂರ್ಯಾಸ್ತ:** 06-39

ಮುಸ್ಲಿಂ ದಿನಾಂಕ: 08 ಶವ್ವಾಲ್

ಅದೃಷ್ಟ ಸಂಖ್ಯೆ: 8, 10

ಮೇಷ: ವ್ಯಾಪಾರ- ವ್ಯವಹಾರಗಳಲ್ಲಿ ಸಮಾಧಾನಕರ ಆದಾಯವಿರುವುದು. ಸ್ಥಿರ ಆಸ್ತಿ ಖರೀದಿಸುವ ಬಗ್ಗೆ ಯೋಚಿಸುವಿರಿ. ನಿಮ್ಮ ನಿರ್ಲಿಪ್ತತೆ, ಮೌನದ ಉತ್ತರದಿಂದ ಶತ್ರುಗಳು ದೂರವಾಗುವರು.

ವೃಷಭ: ತವರು ಮನೆಯಲ್ಲಿ ನಡೆದ ದುರ್ಘಟನೆಯು ಮಹಿಳೆಯರನ್ನು ಭಾವುಕರನ್ನಾಗಿ ಮಾಡಲಿದೆ. ಹಿತಶತ್ರುಗಳು ನಿಮ್ಮ ಬಗ್ಗೆ ಅಪಪ್ರಚಾರ ಮಾಡಬಹುದು. ರಾಜಕೀಯ ವಿಚಾರಗಳನ್ನು ಆದಷ್ಟು ರಹಸ್ಯವಾಗಿಟ್ಟುಕೊಳ್ಳಿ.

ಮಿಥುನ: ಹೊಸ ಉದ್ಯೋಗಕ್ಕೆ ಸಂಬಂಧಿಸಿದಂತೆ ಆತುರದ ನಿರ್ಧಾರ ಕೈಗೊಳ್ಳಬೇಡಿ. ಮನೆಯಲ್ಲಿ ಮಂಗಳಕಾರ್ಯಗಳು ನಡೆಯುವ ಸೂಚನೆ ಸಿಗಲಿದೆ. ಕುಟುಂಬದಲ್ಲಿ ಸಂತೋಷದ ವಾತಾವರಣವಿರಲಿದೆ.

ಕರ್ಕಾಟಕ: ನನೆಗುದಿಯಲ್ಲಿದ್ದ ಸಮಸ್ಯೆಗಳಿಗೆ ಸ್ವ-ಪ್ರಯತ್ನದಿಂದ ಪರಿಹಾರ ದೊರೆತು ಮನಸ್ಸು ಹಗುರಾಗುವುದು. ಯೋಜನೆಗಳ ಸುಳಿವನ್ನು ಬೇರೆ ಯಾರಿಗೂ ನೀಡದಿರಿ. ಗೋವಿನ ಸೇವೆಯಿಂದ ಶುಭವಾಗುವುದು.

ಸಿಂಹ: ಹೂ, ತರಕಾರಿ, ಹಣ್ಣು ವ್ಯಾಪಾರಿಗಳಿಗೆ ಲಾಭವುಂಟಾಗಲಿದೆ. ವಸ್ತ್ರಾಭರಣಗಳನ್ನು ಖರೀದಿಸುವಿರಿ. ಮನರಂಜನೆಗಾಗಿ ದೂರ ಪ್ರಯಾಣ ಸರಿಯಲ್ಲ. ಮನಸ್ಸಿಗೆ ಶಾಂತಿ ಹಾಗೂ ನೆಮ್ಮದಿ ಉಂಟಾಗಲಿದೆ.

ಕನ್ಯಾ: ನಿಮ್ಮೊಳಗಿನ ಧನಾತ್ಮಕ ಮನೋಭಾವವು ವ್ಯಾಪಾರ ವ್ಯವಹಾರಗಳನ್ನು ನಿಲ್ಲಿಸುವಂತೆ ಹಾಗೂ ಸಂಬಂಧಗಳನ್ನು ಕಡಿದುಕೊಳ್ಳುವಂತೆ ಮಾಡಲಿದೆ. ಕುಟುಂಬದವರೊಂದಿಗೆ ಪಾರದರ್ಶಕತೆ ಕಾಪಾಡಿಕೊಳ್ಳಿ.

ತುಲಾ: ಸಾಕುಪ್ರಾಣಿಗಳಿಗೆ ಅನಾರೋಗ್ಯವುಂಟಾಗುವುದರಿಂದ ಆತಂಕ ಹೆಚ್ಚಾಗಬಹುದು. ಕಾಫಿ ಹಾಗೂ ಮೆಣಸು ಮಾರಾಟಗಾರರಿಗೆ ಲಾಭವಾಗಲಿದೆ. ವಿದ್ಯಾರ್ಥಿಗಳು ಶಾರದೆಯನ್ನು ಸ್ತುತಿಸುವುದರಿಂದ ಸನ್ಮತಿಗಳಾಗುವಿರಿ.

ವೃಶ್ಚಿಕ: ವೃದ್ಧರನ್ನು ಆರೋಗ್ಯದ ನೆಪದಲ್ಲಿ ಮನೆಯಲ್ಲಿಯೇ ಕೂಡಿಹಾಕುವುದಕ್ಕಿಂತ, ಅವರ ಖುಷಿಗೆ ಆದ್ಯತೆ ಕೊಡುವುದು ಸೂಕ್ತ. ನಿಮ್ಮ ಅನನ್ಯ ಸಾಧನೆಗಳು ಜನಮಾನಸದಲ್ಲಿ ಸ್ಥಾನ ಪಡೆದುಕೊಳ್ಳುತ್ತವೆ.

ಧನು: ಜೀವನದ ಏಳುಬೀಳುಗಳನ್ನು ಈವರೆಗೆ ಸರಿಯಾಗಿ ನಿಭಾಯಿಸುತ್ತಾ ಬಂದಿರುವ ನಿಮಗೆ, ಉತ್ತಮ ದಿನಗಳು ಅತಿ ಸಮೀಪದಲ್ಲಿವೆ ಎಂದು ಮನವರಿಕೆಯಾಗುವುದು. ಬಾಣಸಿಗರಿಗೆ ಉತ್ತಮ ದಿನ.

ಮಕರ: ಹಳೆಯ ವ್ಯವಹಾರವನ್ನೇ ನಿಮ್ಮ ಪುತ್ರನು ಆಧುನಿಕ ತಂತ್ರಜ್ಞಾನವನ್ನು ಬಳಸುವ ಮೂಲಕವಾಗಿ ವಿಸ್ತರಿಸಲಿದ್ದಾನೆ. ಮನೆಯ ಸಡಗರ ವಾತಾವರಣದಲ್ಲಿ ಸಂಪೂರ್ಣವಾಗಿ ಭಾಗಿಯಾಗಲು ಸಾಧ್ಯವಾಗದಿರಬಹುದು.

ಕುಂಭ: ಕೆಲಸ ಹಾಗು ಕುಟುಂಬದ ನಡುವೆ ಆಯ್ಕೆಯ ಗೊಂದಲ ಉಂಟಾಗುವುದು. ನಿತ್ಯಕಾರ್ಯಗಳಲ್ಲಿ ಆಲಸ್ಯತನ ಒಳ್ಳೆಯದಲ್ಲ. ವಿದ್ಯಾರ್ಥಿಗಳೊಂದಿಗೆ ವ್ಯವಹರಿಸುವಾಗ ಶಿಕ್ಷಕರಿಗೆ ಗೊಂದಲ ಉಂಟಾಗುವುದು.

ಮೀನ: ಚಿಕ್ಕ ಸಮಸ್ಯೆಗಳನ್ನೇ ದೊಡ್ಡದಾಗಿ ಮಾಡಿಕೊಳ್ಳುವ ಕಾರಣ, ನಿಮ್ಮ ಕಾರ್ಯ ಕಲಾಪಗಳಲ್ಲಿ ವ್ಯತ್ಯಯವಾಗುವುದು. ಕೈ ಕಾಲುಗಳಲ್ಲಿ ಊತ ಅಥವಾ ನೋವು ಕಾಣಿಸಿಕೊಳ್ಳುವ ಸಾಧ್ಯತೆಗಳಿವೆ.

ಪದಬಂಧ 6004

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕಾಲುನಡಿಗೆಯಿಂದ ಸಾಗುವವನು (4)
3.ತನ್ನ ಜೀವನದ ಘಟನೆಗಳಿಂದ ಉಂಟಾದ ಅರಿವು (4)
5.ಗುಜರಿ ಸೇರುವಷ್ಟು ಭಗ್ನಗೊಂಡಿರುವುದು (4)
7.ಕನ್ನಡಿಗನು ರಚಿಸಿಕೊಂಡಿರುವ ಕಮಿಟಿ! (3)
8.ಯಾವುದೇ ತಪ್ಪು ಮಾಡದ ನಿರ್ದೋಷಿ (5)
10.ಆಕೆಯದ್ದು ಕಕ್ಷೆಗೇರುವ ಬಯಕೆಯಂತೆ! (3)
11.ಎಲ್ಲರೂ ಸಭೆ ಸೇರಿರುವ ಸ್ಥಳ (4)
15.ಪ್ರಾಣವಿಟ್ಟು ಒತ್ತಿ ಉಚ್ಚರಿಸುವ ಅಕ್ಷರ (4)
16.ನಡುವೆ ಕಸವಿದ್ದರೂ ಅರಳುವಿಕೆ! (4)

ಮೇಲಿಂದ ಕೆಳಕ್ಕೆ

1.ದ್ರವರೂಪದಲ್ಲೇ ಕಾಣಿಸುವ ಲೋಹ (3)
2.ಚಾಕರನು ಮಾಡುತ್ತಿರುವ ಊಳಿಗ (3)
3.ಸ್ವಾಮಿಗೆ ಸಿಕ್ಕಿರುವ ಒಡೆತನ (2)
4.ವರ್ಧಂತಿಯೆಂದು ಹೇಳಿರುವುದು ಬರೀ ಗಾಳಿಸುದ್ದಿ (3)
6.ತವರು ಮನೆಯಲ್ಲಿರುವ ಲೋಹ (3)
7.ಏಕಾಗ್ರತೆಯಿಂದ ನಿರ್ಮಿಸಿರುವ ಗೋರಿ (3)
8.ನಿರೀಕ್ಷಕನ ಬರುವಿಕೆಗೆ ಆಸೆಯಿಂದ ಎದುರು ನೋಡುವಿಕೆ (3)
9.ಸಾಕ್ಷರನ ಮುಂದಿರುವ ಅಸುರ (3)
10.ಶ್ರಮವಹಿಸಿ ಕಟ್ಟಿದ್ದಾರಂತೆ ಋಷಿಯ ವಾಸಸ್ಥಾನವನ್ನು! (3)
12.ಈತ ಅತ್ಯಂತ ಭಾವಜೀವಿ (3)
13.ವನದ ಕೊನೆಗೆ ಮಾಡಿದ ಯಜ್ಞ (3)
14.ಗುಡಾಣದಂತಿರುವವನ ಸ್ವಭಾವ (2)



6003ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಮನೆಮಾತು 3.ಅನುಮಾನ 5.ಮದನಿಕೆ 7.ನವರಂಗ 9.ತಿಲಾಂಜಲಿ 12.ಅತಿರಥ 15.ರತ್ನಾಕರ 16.ಸ್ತ್ರಮಾಸುಕು

ಮೇಲಿಂದ ಕೆಳಕ್ಕೆ:

1.ಮಧ್ಯಮ 2.ಮಾರ್ದನಿ 3.ಅನುಭವ 4.ನಗದು 6.ದಮಯಂತಿ 7.ನಕಲಿ 8.ಗಡಿಯಾರ 10.ಜನಿವಾರ 11.ದುಸ್ತರ 13.ತಿರುಮಾ 14.ಥಳುಕು

ಸುಡೊಕು 6389

9	2			5		8	4	
			3		9			1
	4			1			5	7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6388 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಆರ್‌ಆರ್‌ಬಿ ವಿಲೀನ ಶೀಘ್ರ: ಕೇಂದ್ರ

ರಾಜ್ಯಕ್ಕೊಂದೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್: ಸಿಎಆರ್ ಅನುಪಾತ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವಾಲಯವು ಶೀಘ್ರವೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ (ಆರ್‌ಆರ್‌ಬಿ) ವಿಲೀನ ಪ್ರಕ್ರಿಯೆ ಆರಂಭಿಸುವ ನಿರೀಕ್ಷೆಯಿದೆ. ಇದರಿಂದ ದೇಶದಲ್ಲಿ ಹಾಲಿ ಇರುವ 43 ಆರ್‌ಆರ್‌ಬಿಗಳ ಸಂಖ್ಯೆಯು 28ಕ್ಕೆ ಇಳಿಯಲಿದೆ.

‘ಒಂದು ರಾಜ್ಯ; ಒಂದು ಆರ್‌ಆರ್‌ಬಿ’ ತತ್ವಕ್ಕೆ ಕೇಂದ್ರ ಮುಂದಾಗಿದೆ. ಬ್ಯಾಂಕ್‌ಗಳ ಪರಿಣಾಮಕಾರಿ ಕಾರ್ಯಾಚರಣೆ ಮತ್ತು ವೆಚ್ಚ ಕಡಿತಗೊಳಿಸುವ ಉದ್ದೇಶದಿಂದ ವಿಲೀನಕ್ಕೆ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ವಿಲೀನಕ್ಕೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆ ಪೂರ್ಣಗೊಂಡಿದೆ. ವಿವಿಧ ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿರುವ ಬ್ಯಾಂಕ್‌ಗಳು ವಿಲೀನಗೊಳ್ಳಲಿವೆ ಎಂದು ಹೇಳಿವೆ.

ಆಂಧ್ರಪ್ರದೇಶದಲ್ಲಿ ನಾಲ್ಕು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿವೆ. ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ತಲಾ 3, ಬಿಹಾರ, ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ ಮತ್ತು ರಾಜಸ್ಥಾನ ದಲ್ಲಿ ತಲಾ ಎರಡು ಬ್ಯಾಂಕ್ ಕಾರ್ಯ ನಿರ್ವಹಿಸುತ್ತಿವೆ.

ಆಂಧ್ರಪ್ರದೇಶದ ಗ್ರಾಮೀಣ ವಿಕಾಸ ಬ್ಯಾಂಕ್ (ಎಪಿಜಿವಿಬಿ) ಮತ್ತು ತೆಲಂಗಾಣದ ಗ್ರಾಮೀಣ ಬ್ಯಾಂಕ್‌ನ ಆಸ್ತಿ ಮತ್ತು ಹೊಣೆಗಾರಿಕೆ ಹಂಚಿಕೆಗೆ ಸಂಬಂಧಿಸಿದ ನಿರ್ಣಯವನ್ನು ಸಚಿವಾಲಯವು ಅಂತಿಮಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

ಅಂಕಿ ಅಂಶಗಳು

43
ದೇಶದಲ್ಲಿರುವ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಸಂಖ್ಯೆ

22,069
ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿರುವ ಈ ಬ್ಯಾಂಕ್‌ಗಳ ಶಾಖೆ ಸಂಖ್ಯೆ

6.1%
2024ರ ಮಾರ್ಚ್ ಅಂತ್ಯಕ್ಕೆ ಬ್ಯಾಂಕ್‌ಗಳ ವಸೂಲಾಗದ ಸಾಲದ ಸರಾಸರಿ ಪ್ರಮಾಣ

ಕಾರ್ಯ ನಿರ್ವಹಣೆ ಹೇಗೆ?

ಗ್ರಾಮೀಣ ಪ್ರದೇಶದ ಸಣ್ಣ ರೈತರು, ಕೃಷಿ ಕಾರ್ಮಿಕರು ಮತ್ತು ಕುಶಲಕರ್ಮಿಗಳಿಗೆ ಸಾಲ ಸೇರಿ ಇತರ ಬ್ಯಾಂಕಿಂಗ್ ಸೌಲಭ್ಯ ಕಲ್ಪಿಸುವುದು ಇವುಗಳ ಜವಾಬ್ದಾರಿಯಾಗಿದೆ. ಪ್ರಸ್ತುತ ಈ ಬ್ಯಾಂಕ್‌ಗಳಲ್ಲಿ ಕೇಂದ್ರ ಶೇ 50, ಪ್ರಾಯೋಜಕ ಬ್ಯಾಂಕ್‌ಗಳು ಶೇ 35 ಮತ್ತು ರಾಜ್ಯ ಸರ್ಕಾರಗಳು ಶೇ 15ರಷ್ಟು ಷೇರು ಪಾಲು ಹೊಂದಿವೆ.

2021–22ರಲ್ಲಿ ಕೇಂದ್ರವು ಈ ಬ್ಯಾಂಕ್‌ಗಳ ಬಲವರ್ಧನೆಗೆ ಮುಂದಾಗಿತ್ತು. ಇದಕ್ಕೆ ಪೂರಕವಾಗಿ ಎರಡು ವರ್ಷದವರೆಗೆ ಅವುಗಳ ಬಂಡವಾಳ ವೃದ್ಧಿಗೆ ₹5,445 ಕೋಟಿ ನೆರವು ಕಲ್ಪಿಸಿತ್ತು. ಇದರಿಂದ 2023–24ರಲ್ಲಿ ಬ್ಯಾಂಕ್‌ಗಳ ಬಂಡವಾಳ ಹೆಚ್ಚಳವಾಗಿತ್ತು. ಈ ಅವಧಿಯಲ್ಲಿ ₹7,571 ಕೋಟಿ ನಿವ್ವಳ ಲಾಭ ಗಳಿಸಿದ್ದು, ಚಾರಿತ್ರಿಕ ದಾಖಲೆಯಾಗಿತ್ತು.

ಬ್ಯಾಂಕ್‌ಗಳು ಅನಿರೀಕ್ಷಿತ ನಷ್ಟಕ್ಕೆ ತುತ್ತಾದಾಗ ಎದುರಿಸಲು ಹೊಂದಿರುವ ಸಮರ್ಪಕ ಬಂಡವಾಳ ಅನುಪಾತವು (ಸಿಎಆರ್) ಕಳೆದ ವರ್ಷದ ಮಾರ್ಚ್ ಅಂತ್ಯಕ್ಕೆ ಶೇ 14.2ಕ್ಕೆ ಮುಟ್ಟಿರುವುದು ದಾಖಲೆಯಾಗಿದೆ.

ಆರ್‌ಆರ್‌ಬಿಗಳ ವಿಲೀನಕ್ಕೆ ಕೇಂದ್ರವು 2004–05ರಲ್ಲಿ ಚಾಲನೆ ನೀಡಿತ್ತು. 196 ಬ್ಯಾಂಕ್‌ಗಳನ್ನು 2020–21ರಲ್ಲಿ 43ಕ್ಕೆ ಇಳಿಸಿತ್ತು.

ಆರ್‌ಬಿಐ ಎಂಪಿಸಿ ಸಭೆ ಇಂದಿನಿಂದ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಏಪ್ರಿಲ್ 7ರಿಂದ 9ರ ವರೆಗೆ ನಡೆಯಲಿದೆ. ಗವರ್ನರ್ ಸಂಜಯ್ ಮಲ್ಹೋತ್ರಾ ಅಧ್ಯಕ್ಷತೆವಹಿಸಲಿದ್ದಾರೆ.

ಚಿಲ್ಲರೆ ಹಣದುಬ್ಬರವು ಆರ್‌ಬಿಐನ ನಿಗದಿತ ಗುರಿಗಿಂತ ಕಡಿಮೆ ದಾಖಲಾಗಿದೆ. ಅಮೆರಿಕದ ಪ್ರತಿ ಸುಂಕ ನೀತಿಯು ಭಾರತ ಸೇರಿ ಜಾಗತಿಕ ಆರ್ಥಿಕತೆ ಬೆಳವಣಿಗೆಗೆ ಸವಾಲೊಡ್ಡಿದೆ. ಹಾಗಾಗಿ, ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಪ್ರಗತಿಗೆ ಪೂರಕ ವಾತಾವರಣ ಸೃಷ್ಟಿಸುವ ಉದ್ದೇಶದಿಂದ ಈ ಬಾರಿಯೂ ರೆಪೊ ದರದಲ್ಲಿ ಶೇ 0.25ರಷ್ಟು ಕಡಿತಗೊಳಿಸುವ ನಿರೀಕ್ಷೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಫೆಬ್ರುವರಿಯಲ್ಲಿ ನಡೆದ ಸಭೆಯಲ್ಲಿ ಶೇ 0.25ರಷ್ಟು ಬಡ್ಡಿದರ ಕಡಿತಗೊಳಿಸಲಾಗಿತ್ತು. ಬುಧವಾರದಂದು ಗವರ್ನರ್ ಅವರು, ಸಭೆಯ ನಿರ್ಣಯಗಳ ಬಗ್ಗೆ ಮಾಹಿತಿ ಹಂಚಿಕೊಳ್ಳಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪ್ರತಿ ಸುಂಕ: ದೇಶದ ಸಾಗರೋತ್ಪನ್ನ ರಫ್ತಿಗೆ ಪೆಟ್ಟು

ಅಮರಾವತಿ (ಪಿಟಿಐ): ಅಮೆರಿಕದ ಪ್ರತಿ ಸುಂಕ ನೀತಿಯು ದೇಶದ ಸಮುದ್ರ ಆಹಾರ ಉತ್ಪನ್ನಗಳ ರಫ್ತಿನ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಭಾರತದ ಸಮುದ್ರ ಆಹಾರ ಉತ್ಪನ್ನ ರಫ್ತುದಾರರ ಸಂಘ ತಿಳಿಸಿದೆ.

ಭಾರತದಿಂದ ಅಮೆರಿಕಕ್ಕೆ ಸಮುದ್ರ ಆಹಾರ ಉತ್ಪನ್ನಗಳು ರವಾನೆ ಯಾಗುತ್ತವೆ. 2023–24ನೇ ಆರ್ಥಿಕ ವರ್ಷದಲ್ಲಿ ₹21,500 ಕೋಟಿ ಮೌಲ್ಯದ ಉತ್ಪನ್ನಗಳು ರಫ್ತಾಗಿವೆ. ಈ ಪೈಕಿ ಸೀಗಡಿಗಳ ಪಾಲು ಶೇ 92ರಷ್ಟಿದೆ ಎಂದು ಸಂಘದ ಅಧ್ಯಕ್ಷ ಜಿ. ಪವನ್ ಕುಮಾರ್ ತಿಳಿಸಿದ್ದಾರೆ.

ದಕ್ಷಿಣ ಅಮೆರಿಕದ ದೇಶವಾದ ಈಕ್ವೆಡಾರ್‌ನಿಂದಲೂ ಅಮೆರಿಕಕ್ಕೆ ಉತ್ಪನ್ನಗಳು ಪೂರೈಕೆಯಾಗುತ್ತವೆ. ಭಾರತದ ಪ್ರತಿಸ್ಪರ್ಧಿಯಾದ ಈ ದೇಶದ ಮೇಲೆ ಶೇ 10ರಷ್ಟು ಸುಂಕ ವಿಧಿಸಲಾಗಿದೆ. ಇದರಿಂದ ನಮ್ಮ ರಫ್ತಿಗೆ ತೊಂದರೆಯಾಗಲಿದೆ ಎಂದು ಹೇಳಿದ್ದಾರೆ.

ಅಲ್ಲದೆ, ವಿಯೆಟ್ನಾಂಗೆ ಶೇ 46 ಮತ್ತು ಇಂಡೊನೇಷ್ಯಾ ಮೇಲೆ ಶೇ 32ರಷ್ಟು ಪ್ರತಿ ಸುಂಕ ವಿಧಿಸಲಾಗಿದೆ. ಹಾಗಾಗಿ, ಅಮೆರಿಕದ ಮಾರುಕಟ್ಟೆಗೆ ಅತಿಹೆಚ್ಚು ಪ್ರಮಾಣದಲ್ಲಿ ಸೀಗಡಿ ಪೂರೈಸಲು ಈಕ್ವೆಡಾರ್‌ಗೆ ನೆರವಾಗಲಿದೆ ಎಂದು ಹೇಳಿದ್ದಾರೆ.

ಬಿಯರ್ ಮೇಲೆ ತೆರಿಗೆ ಹೆಚ್ಚಳಕ್ಕೆ ಆಕ್ಷೇಪ

ನವದೆಹಲಿ (ಪಿಟಿಐ): ಜನವರಿಯಲ್ಲಿ ಕರ್ನಾಟಕದಲ್ಲಿ ಬಿಯರ್ ಮೇಲೆ ತೆರಿಗೆ ಹೆಚ್ಚಿಸಲಾಗಿತ್ತು. ಇದರಿಂದ ಮಾರಾಟದಲ್ಲಿ ಇಳಿಕೆಯಾಗುತ್ತಿದೆ ಎಂದು ಬ್ರುವರಿಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಹೇಳಿದೆ.

ಕಳೆದ 18 ತಿಂಗಳಲ್ಲಿ ಮೂರು ಬಾರಿ ತೆರಿಗೆ ಹೆಚ್ಚಿಸಲಾಗಿದೆ. ಬಿಯರ್ ವಲಯದಲ್ಲಿ ಕಂಪನಿಗಳು ₹5 ಸಾವಿರ ಕೋಟಿ ಹೂಡಿಕೆ ಮಾಡಿವೆ. ಸರ್ಕಾರವು ಮತ್ತಷ್ಟು ತೆರಿಗೆ ಹೆಚ್ಚಿಸಲು ಮುಂದಾದರೆ ಈ ಉದ್ಯಮವು ಸಂಕಷ್ಟಕ್ಕೆ ಸಿಲುಕಲಿದೆ ಎಂದು ರಾಜ್ಯ ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಅಸೋಸಿಯೇಷನ್ ತಿಳಿಸಿದೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ಸರ್ಕಾರವು ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಶೇ 10ರಷ್ಟು ಹೆಚ್ಚಿಸಿತ್ತು. ಪ್ರಸಕ್ತ ವರ್ಷದ ಜನವರಿಯಲ್ಲಿ ಪ್ರತಿ ಬಾಟಲಿ ಬಿಯರ್‌ಗೆ ₹10 ದರ ಹೆಚ್ಚಿಸಿತ್ತು.

2023–24ರಲ್ಲಿ ಬಿಯರ್ ಕೈಗಾರಿಕೆಯಿಂದ ಕರ್ನಾಟಕದ ಬೊಕ್ಕಸಕ್ಕೆ ₹5,500 ಕೋಟಿ ಆದಾಯ ಲಭಿಸಿದೆ. ರಾಜ್ಯದಲ್ಲಿ ಮದ್ಯ ತಯಾರಿಸುವ 10 ಕಂಪನಿಗಳಿವೆ.

ಎಫ್‌ಪಿಐ: ₹10,355 ಕೋಟಿ ವಾಪಸ್

ನವದೆಹಲಿ (ಪಿಟಿಐ): ದೇಶದ ಈಕ್ವಿಟಿ ಮಾರುಕಟ್ಟೆಯಿಂದ (ಏಪ್ರಿಲ್ 1ರಿಂದ 4ರ ವರೆಗೆ) ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ₹10,355 ಕೋಟಿ ಮೊತ್ತವನ್ನು ವಾಪಸ್ ಪಡೆದಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಭಾರತ ಸೇರಿ ಹಲವು ರಾಷ್ಟ್ರಗಳ ಮೇಲೆ ಪ್ರತಿ ಸುಂಕ ವಿಧಿಸಿದ್ದಾರೆ. ಇದರಿಂದ ಸೃಷ್ಟಿಯಾಗಿರುವ ಅನಿಶ್ಚಿತ ಸ್ಥಿತಿಯಿಂದಾಗಿ ಬಂಡವಾಳ ಹೊರಹೋಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜನವರಿಯಿಂದ ಇಲ್ಲಿಯವರೆಗೆ ವಿದೇಶಿ ಹೂಡಿಕೆದಾರರು ₹1.27 ಲಕ್ಷ ಕೋಟಿ ಹಿಂಪಡೆದಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping

ಜಾಬ್! ಜಾಬ್!! ಜಾಬ್!!! ಹೌಸ್ ಕೀಪಿಂಗ್ ಸಿಬ್ಬಂದಿ ಮತ್ತು ಸೂಪರ್‌ವೈಸರ್‌ಗಳು ಬೆಂಗಳೂರಿನ ಕಲ್ಯಾಣನಗರ ದಲ್ಲಿರುವ ಪ್ರಸಿದ್ಧ ಆಸ್ಪತ್ರೆಗೆ ತುರ್ತಾಗಿ ಬೇಕಾಗಿದ್ದಾರೆ. ಸಂಬಳ : ಸಿಬ್ಬಂದಿಗೆ ರೂ.19300/-, ಸೂಪರ್‌ವೈಸರ್ಗೆ ರೂ. 23000/- ವಯಸ್ಸು : 18 ವರ್ಷದಿಂದ 39 ವರ್ಷಗಳವರೆಗೆ 9945779607, 9112959375, 9108946691

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 14,000 - 18,000. ಸಂಪರ್ಕಿಸಿ: 8951315839, 7022770052.

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ,TVS, ಟಾಟಾಮೋಟಾರ್ಸ್, ಬ್ರಿಟಾನಿಯಾಗಳಿಗೆ SSLC, PUC, Degree, ITIನವರು. 18,000/- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

General

ದಾಸ್ ಪ್ರಮೋಷನ್ಸ್ ಹೋಂ ನರ್ಸಿಂಗ್ ಸರ್ವಿಸಸ್ (ರಿ). ಹೋಂ ನರ್ಸ್ ಕೆಲಸಕ್ಕೆ ಜನ ಬೇಕಾಗಿದ್ದಾರೆ. ಅನುಭವವಿರುವವರು ಹಾಗೂ ಇಲ್ಲದೆ ಇರುವವರು, ಉಚಿತ ತರಬೇತಿ ಊಟ ಮತ್ತು ವಸತಿ ನೀಡಲಾಗುವುದು. ಬಳಿಕ ಆಸ್ಪತ್ರೆಗಳಲ್ಲಿ ಉದ್ಯೋಗ ಅವಕಾಶ. ಸಂಪರ್ಕಿಸಿ: ದಾಸ್ ಹೋಂ ನರ್ಸಿಂಗ್ ಸರ್ವಿಸಸ್. ಶಾಖೆಗಳು: ಮಂಗಳೂರು:9343568915, ಉಡುಪಿ:9845495055, ಬೆಂಗಳೂರು:9242730143, ಮೈಸೂರು:9243306815, ಹಾಸನ:9241324003, ಹುಬ್ಬಳ್ಳಿ:9242302918, ಬೆಳಗಾವಿ:9242096219, ಬಳ್ಳಾರಿ:7760278111, ದಾವಣಗೆರೆ:7760164111, ಶಿವಮೊಗ್ಗ:9241127545.

CONSTRUCTION SITE Supervisor with 3 + years experience at KIADB Hardware Park (Near Bagaluru). Should have 2 wheeler & construction knowledge. Contact : 080-26603729, 080-26602089. Email: anvesh@mahendraperfumery.com

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

Wanted

ಬೇಕಾಗಿದ್ದಾರೆ, ಬೆಂಗಳೂರಿನ ಪ್ರತಿಷ್ಠಿತ ಕಂಪನಿಗೆ ನಿವೃತ್ತ ARMY/ BSF/ CRPF/ CISF (ವಯಸ್ಸು 45 ವರ್ಷದೊಳಗಿನ) ಅಭ್ಯರ್ಥಿಗಳು ಬೇಕಾಗಿದ್ದು, ಕಂಪನಿಗೆ ನೇರ ನೇಮಕಾತಿಡಿಕೊಳ್ಳಲಾಗುವುದು, 26000/- ಸಂಬಳ, ಆಹಾರ ಭತ್ಯೆ ದಿನಕ್ಕೆ ರೂ. 125/- ಪಿಎಫ್ ಸೌಲಭ್ಯ. ಹೆಚ್ಚಿನ ಮಾಹಿತಿಗಾಗಿ, ಸಂಪರ್ಕಿಸಿ : 9035348529 (Call 10am- 5pm)

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 19.04.2025,15.05.2025 20.06.2025 7ದಿನಗಳು ನೈಮಿಷಾರಣ್ಯಾ,ಅಯೋಧ್ಯೆ,ಕಾಶಿ ಗಯಾ,ದೇವಘರ್(ಜಾರ್ಖಂಡ್). 01.05.2025 20.05.2025,01.06.2025 10ದಿನಗಳು ಅಖಂಡ ನೇಪಾಳ ರಾಷ್ಟ್ರ(ಮುಕ್ತಿನಾಥ)ಅಯೋಧ್ಯೆ 14.05.2025,28.05.2025 12ದಿನಗಳು ಆದಿಕೈಲಾಸ ಓಂಪರ್ವತ,ಪಾತಾಳ ಭುವನೇಶ್ವರ,ಜಾಗೇಶ್ವರ ಬಾಬಾಗುಹೆ,ದಾರ್ಜಿಲಾ ಮುನ್ಸಿಯಾರಿ. 27.04.2025 19.05.2025 12/21ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 25.04.2025,05.04.2025 0605.2025 7ದಿನಗಳು. ಪ್ರತಿವಾರ 1).ಊಟಿ, ಕೊಡೈಕೆನಾಲ್,ಪಳನಿ,ತಿರಪ್ಪೂರು 4ದಿನಗಳು. 2) 5ದಿನಗಳ ರಾಮೇಶ್ವರ ನವಗ್ರಹ,ಮದುರೈ ಕುಂಭಕೋಣಂ,ತಂಜಾವೂರು, ಇತರೆ.9743351212 9206979202 9606032154

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ನರ್ಸರಿ ಟೀಚರ್ಸ್ ಟ್ರೈನಿಂಗ್ ಕೋರ್ಸ್
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008419955, 9901520055, 9449198555
Email: info@thercss.co, Web: www.thercss.com

★ಶ್ರೇಯಸ್ ಟೂರ್ಸ್★ 10.05.2025,10.06.2025 10ದಿನ ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ)ಅಯೋಧ್ಯೆ 23.05.25,24.06.25 7ದಿನ ನೈಮಿಷಾರಣ್ಯಾ,ಅಯೋಧ್ಯ ಪ್ರಯಾಗ್‌ರಾಜ್,ಕಾಶಿ,ಗಯಾ ದೇವಘರ್.04.06.2025, 28.06.2025,12.07.2025 26.07.25 12ದಿನ ಚಾರ್ ದಾಮ್‌ಯಾತ್ರಾ,ಕೇದಾರನಾಥ ಬದರಿನಾಥ,ಯಮುನೋತ್ರಿ ಗಂಗೋತ್ರಿ,ಇತರೆ. 9743351212, 9206979202, 9606032154

9ದಿನಗಳ ಕಾಶಿ ಅಯೋಧ್ಯ ಪ್ರಯಾಗ್‌ರಾಜ್. 11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಬಾಲಿ. 7 ದಿನಗಳ ಲೇಲಡಾಕ್ 11 ದಿನಗಳ ವಿಯೆಟ್ನಾಂ,ಕಾಂಬೋಡಿಯ ಸಂಪರ್ಕಿಸಿ: ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9900099252 9900080793

8.4.2025 ರಿಂದ 6ದಿನಗಳ ರಾಮೇಶ್ವರ, ಕನ್ಯಾಕುಮಾರಿ, ತಿವೇಂದ್ರಂ, ಅಲಪ್ಪಿಬೋಟಿಂಗ್, ಕೋವಲಂಬೀಚ್, ಗುರುವಾಯೂರು. 24.4.2025 ರಿಂದ 8ದಿನಗಳ 6ಜ್ಯೋತಿರ್ಲಿಂಗ ಪ್ರವಾಸ. ಉಜ್ಜಯನಿ, ಓಂಕಾರೇಶ್ವರ, ಶಿರಡಿ, ಭೀಮಾಶಂಕರ, ಪರ್ಲೆ, ತುಳಜಾಪುರ, ಎಲ್ಲೋರ 7.5.2025 ರಿಂದ 5ದಿನಗಳ ಕಾಶಿ, ಅಯೋಧ್ಯ, ಪ್ರಯಾಗರಾಜ, ಗಯಾ, ಬುದ್ಧಗಯಾ. 12.5.2025 ರಿಂದ 7ದಿನಗಳ ಸಿಂಗಪೂರ, ಮೇಲೇಷಿಯಾ. 25.5.2025 ರಿಂದ 12ದಿನಗಳ ಚಾರ್‌ಧಾಮ್ ಪ್ರವಾಸ. ಕೇದಾರನಾಥ, ಗಂಗೋತ್ರಿ, ಬದರಿನಾಥ, ಯಮುನೋತ್ರಿ. ವಿಚಾರಿಸಿ: ಶ್ರೀ ಗುರುರಾಜ ಟ್ರಾವಲ್ಸ್. ಕೋಲಾರ. 9611082432, 9449652555, 8123099913

EDUCATION
To Place your Classified Ads Contact:
9845114560

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಗಳಿಕೆ: ಚಿನ್ನ ಹಿಂದಿಕ್ಕಿದ ಬೆಳ್ಳಿ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಬಂಗಾರ ತುಟ್ಟಿಯಾಗುತ್ತಿರುವ ವಿಷಯ ಮಾಧ್ಯಮಗಳಲ್ಲಿ ಪದೇ ಪದೇ ಪ್ರಸ್ತಾಪ ಆಗುತ್ತಿದೆ. ಆದರೆ, ಸದ್ದಿಲ್ಲದೆ ಗಳಿಕೆಯಲ್ಲಿ ಚಿನ್ನವನ್ನು ಹಿಂದಿಕ್ಕಿ ಬೆಳ್ಳಿ ಮುಂದೆ ಸಾಗುತ್ತಿದೆ. ಹೂಡಿಕೆ ಕಾರಣವಷ್ಟೇ ಅಲ್ಲದೆ ಕೈಗಾರಿಕಾ ಉದ್ದೇಶಗಳಿಗೂ ಬೆಳ್ಳಿ ಬಳಕೆಯಾಗುತ್ತಿದ್ದು, ಬೇಡಿಕೆ ಹೆಚ್ಚಾಗುತ್ತಿದೆ.

ಎಲೆಕ್ಟ್ರಾನಿಕ್ಸ್, ನವೀಕೃತ ಇಂಧನ ಉತ್ಪಾದನೆ, ಅತ್ಯುನ್ನತ ಉತ್ಪಾದನಾ ಘಟಕಗಳ ನಿರ್ಮಾಣ ಸೇರಿ ಅನೇಕ ಕಡೆಗಳಲ್ಲಿ ಬೆಳ್ಳಿ ಬಳಕೆಯಾಗುತ್ತಿದೆ. 24 ಕ್ಯಾರೆಟ್‌ನ 10 ಗ್ರಾಂ ಚಿನ್ನದ ಬೆಲೆ ₹90 ಸಾವಿರದ ಗಡಿ ದಾಟಿದ್ದರೆ, 1 ಕೆ.ಜಿ ಬೆಳ್ಳಿ ಬೆಲೆಯು ₹1 ಲಕ್ಷದ ಗಡಿ ದಾಟಿದೆ. ಬನ್ನಿ, ಮುಂದಿನ ದಿನಗಳಲ್ಲಿ ಬಡವರ ಬಂಗಾರವಾದ ಬೆಳ್ಳಿ ಹೇಗೆ ಮೌಲ್ಯ ವೃದ್ಧಿಸಿಕೊಳ್ಳಲಿದೆ ಎಂಬುದನ್ನು ನೋಡೋಣ.

ಚಿನ್ನಕ್ಕಿಂತ ಹೆಚ್ಚು ಗಳಿಕೆ ಕೊಡುತ್ತದೆಯೇ?: ಅಂಕಿಅಂಶ ನೋಡಿದಾಗ ಕೆಲ ಸಂದರ್ಭಗಳಲ್ಲಿ ಚಿನ್ನಕ್ಕಿಂತ ಬೆಳ್ಳಿಯು ಹೆಚ್ಚಿನ ಗಳಿಕೆ ಕೊಟ್ಟಿರುವುದು ಕಂಡುಬರುತ್ತದೆ. 2020ರ ಕೋವಿಡ್ ಸಾಂಕ್ರಾಮಿಕದ ವೇಳೆ ಬೆಳ್ಳಿ ಬೆಲೆಯು ಶೇ 63ರಷ್ಟು ಹೆಚ್ಚಳ ಕಂಡಿತ್ತು. ಚಿನ್ನವನ್ನು ಹಿಂದಿಕ್ಕಿ ಹೂಡಿಕೆದಾರರಿಗೆ ಹೆಚ್ಚಿನ ಗಳಿಕೆ ತಂದುಕೊಟ್ಟಿತ್ತು.

2024ರಲ್ಲಿ ಚಿನ್ನದ ದರ ಶೇ 26ರಷ್ಟು ಜಿಗಿತ ಕಂಡರೆ, ಬೆಳ್ಳಿ ಸದ್ದಿಲ್ಲದೆ ಶೇ 34ರಷ್ಟು ಹೆಚ್ಚಳ ಕಂಡಿದೆ.

ಕೈಗಾರಿಕಾ ವಲಯದಲ್ಲಿ ಬೇಡಿಕೆ: ಚಿನ್ನವನ್ನು ಹೂಡಿಕೆಗಾಗಿ ಹೆಚ್ಚು ಮಂದಿ ಪರಿಗಣಿಸಿದರೆ, ಬೆಳ್ಳಿ ಅತ್ಯಾಧುನಿಕ ತಂತ್ರಜ್ಞಾನ ನಿರ್ಮಾಣದಲ್ಲಿ ಕಚ್ಚಾ ವಸ್ತುವಾಗಿ ಬೇಡಿಕೆ ಪಡೆದುಕೊಳ್ಳುತ್ತಿದೆ. ಜಗತ್ತಿನ ಅರ್ಧಕ್ಕೂ ಹೆಚ್ಚಿನ ಬೆಳ್ಳಿ ಬೇಡಿಕೆಯು ಎಲೆಕ್ಟ್ರಾನಿಕ್ಸ್, ಸೌರ ಫಲಕ ಮತ್ತು ಎಲೆಕ್ಟ್ರಿಕ್ ವಾಹನಗಳ ತಯಾರಿಕಾ ವಲಯದಿಂದ ಬರುತ್ತದೆ. ಅಮೆರಿಕದ ಸಿಲ್ವರ್ ಇನ್‌ಸ್ಟಿಟ್ಯೂಟ್ ವರದಿ ಪ್ರಕಾರ, ಪ್ರಸಕ್ತ ವರ್ಷದಲ್ಲಿ ಕೈಗಾರಿಕಾ ವಲಯದಲ್ಲಿ ಬೆಳ್ಳಿಗೆ ಇರುವ ಬೇಡಿಕೆ ಸುಮಾರು 700 ಮಿಲಿಯನ್ ಔನ್ಸ್. ಹಾಗಾಗಿ, ಈ ವರ್ಷವೂ ಬೆಳ್ಳಿಗೆ ಬೇಡಿಕೆಯು ಗಣನೀಯವಾಗಿ ಹೆಚ್ಚಳವಾಗುವ ನಿರೀಕ್ಷೆಯಿದೆ.

ಪೂರೈಕೆ ಕೊರತೆ: ಹಲವು ವರ್ಷಗಳಿಂದ ಬೆಳ್ಳಿ ಪೂರೈಕೆಯಲ್ಲಿ ಕೊರತೆಯಿದೆ. ಕಳೆದ ವರ್ಷ ಬೆಳ್ಳಿಯ ಮಾರುಕಟ್ಟೆ ಸುಮಾರು 200 ಮಿಲಿಯನ್ ಔನ್ಸ್‌ನಷ್ಟು ಕೊರತೆ ಎದುರಿಸಿದೆ. ಇದು ಇತ್ತೀಚಿನ ಸಂದರ್ಭದಲ್ಲಿನ ಬಹಳ ದೊಡ್ಡ ಕೊರತೆ ಎಂದು ತಜ್ಞರು ಹೇಳುತ್ತಾರೆ. ಈ ನಡುವೆ ಪ್ರಸಕ್ತ ವರ್ಷವೂ ಈ ಕೊರತೆ ಸಮಸ್ಯೆ ಎದುರಾಗುವುದರಿಂದ ಬೆಲೆ ಮತ್ತಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ.

ಹೂಡಿಕೆ: ಹೂಡಿಕೆದಾರರು ಚಿನ್ನದಂತೆ ಬೆಳ್ಳಿಯನ್ನೂ ಹೂಡಿಕೆ ದೃಷ್ಟಿಯಿಂದ ನೋಡುತ್ತಿರುವ ಕಾರಣ ಬೆಳ್ಳಿ ಬೇಡಿಕೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಹಣದುಬ್ಬರ, ಸರ್ಕಾರದ ಹಣಕಾಸು ನೀತಿಗಳನ್ನು ಮೀರಿ ಬೆಳವಣಿಗೆ ಸಾಧಿಸುವ ಅವಕಾಶ ಬೆಳ್ಳಿಗೂ ಇದೆ.

ಕಿವಿಮಾತು: ಒಂದು ಕಡೆ ಬೇಡಿಕೆ ಹೆಚ್ಚಾಗುತ್ತಿರುವುದು; ಮತ್ತೊಂದೆಡೆ ಪೂರೈಕೆ ಕೊರತೆ ಇರುವುದರಿಂದ ಪ್ರಸಕ್ತ ವರ್ಷದಲ್ಲಿ ಬೆಳ್ಳಿಯು ಅತ್ಯುತ್ತಮ ಹೂಡಿಕೆಯಾಗಿ ಹೊರಹೊಮ್ಮುವ ನಿರೀಕ್ಷೆಯಿದೆ. ಸಾಂಪ್ರದಾಯಿಕವಾಗಿ ಚಿನ್ನವನ್ನು ಜನರು ಸುರಕ್ಷಿತ ಹೂಡಿಕೆಯ ಆಯ್ಕೆ ಎಂದು ಪರಿಗಣಿಸುತ್ತಿದ್ದರು. ಆದರೆ, ಬೆಳ್ಳಿ ಸುರಕ್ಷಿತ ಹೂಡಿಕೆ ಆಯ್ಕೆಯಾಗುವ ಜೊತೆಗೆ ಕೈಗಾರಿಕಾ ವಲಯದಲ್ಲೂ ಬೇಡಿಕೆ ಪಡೆದುಕೊಳ್ಳುತ್ತಿದೆ. ಚಿನ್ನವನ್ನು ಹಿಂದಿಕ್ಕಿ, ಈ ವರ್ಷವೂ ಹೆಚ್ಚಿನ ಗಳಿಕೆ ತಂದುಕೊಡುವ ನಿರೀಕ್ಷೆಯಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಮತ್ತೆ ಮುಗ್ಗರಿಸಿದ ಷೇರುಪೇಟೆ

ಏಪ್ರಿಲ್ 4ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಭಾರಿ ಕುಸಿತ ಕಂಡಿವೆ. 75,364 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.64ರಷ್ಟು ಕುಸಿದಿದೆ. 22,904 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.61ರಷ್ಟು ತಗ್ಗಿದೆ.

ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಶೇ 2.5ರಷ್ಟು ಇಳಿಕೆ ಕಂಡರೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 2.61ರಷ್ಟು ತಗ್ಗಿದೆ. ಅಮೆರಿಕದ ಪ್ರತಿ ಸುಂಕ ಸಮರ, ಆರ್ಥಿಕತೆ ಬೆಳವಣಿಗೆ ಕುಂಠಿತ ಭೀತಿ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟದ ಒತ್ತಡ ಸೇರಿ ಹಲವು ಅಂಶಗಳು ಷೇರುಪೇಟೆ ಮುಗ್ಗರಿಸಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 9ರಷ್ಟು ಕುಸಿದಿದೆ. ನಿಫ್ಟಿ ಲೋಹ ಸೂಚ್ಯಂಕ ಶೇ 7.5, ಅನಿಲ ಮತ್ತು ತೈಲ ಸೂಚ್ಯಂಕ ಶೇ 4 ಮತ್ತು ನಿಫ್ಟಿ ರಿಯಲ್ ಎಸ್ಟೇಟ್ ಮತ್ತು ಆಟೊ ಸೂಚ್ಯಂಕಗಳು ತಲಾ ಶೇ 3ರಷ್ಟು ತಗ್ಗಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 2.5ರಷ್ಟು ಕುಸಿದಿದೆ. ಡಾಬರ್ ಇಂಡಿಯಾ, ಬಜಾಜ್ ಹೋಲ್ಡಿಂಗ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್ಸ್, ಎಚ್‌ಸಿಎಲ್ ಟೆಕ್ನಾಲಜೀಸ್, ವಾರೀ ಎನರ್ಜೀಸ್, ಇನ್ಫೊ ಎಡ್ಜ್ ಇಂಡಿಯಾ, ಟಿಸಿಎಸ್, ವೇದಾಂತ ಕಂಪನಿಯ ಷೇರಿನ ಮೌಲ್ಯ ಕುಸಿದಿದೆ. ಇಂಡಸ್ ಇಂಡ್ ಬ್ಯಾಂಕ್, ಇಂಡಸ್ ಟವರ್ಸ್, ಟಾಟಾ ಕನ್ಸೂಮರ್ ಪ್ರಾಡೆಕ್ಟ್ಸ್, ಟ್ರೆಂಟ್ ಮತ್ತು ಕೆನರಾ ಬ್ಯಾಂಕ್ ಷೇರಿನ ಮೌಲ್ಯ ಜಿಗಿತ ಕಂಡಿದೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹13,730 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹5,632 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಮುನ್ನೋಟ: ಏಪ್ರಿಲ್ 9ರಂದು ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರದ ಬಗ್ಗೆ ನಿರ್ಣಯ ಕೈಗೊಳ್ಳಲಿದೆ. ಏಪ್ರಿಲ್ 11ರಂದು ಕೈಗಾರಿಕಾ ಉತ್ಪಾದನೆಯ ಅಂಕಿಅಂಶಗಳು ಹೊರಬೀಳಲಿವೆ. ಕಂಪನಿಗಳ ನಾಲ್ಕನೇ ತ್ರೈಮಾಸಿಕ ಫಲಿತಾಂಶದ ಪರ್ವ ಶುರುವಾಗಲಿದೆ. ಉಳಿದಂತೆ ಜಾಗತಿಕ ವಿದ್ಯಮಾನ, ಅಮೆರಿಕದ ಸುಂಕ ಸಮರ ಸೇರಿ ಪ್ರಮುಖ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಹೊಗೆಸೊಪ್ಪು: ₹371 ಕೋಟಿ ವಹಿವಾಟು

• ಗಂಗೇಶ್ ಬಿ.ಪಿ.

ಕೊಣನೂರು (ಹಾಸನ ಜಿಲ್ಲೆ): ರಾಮನಾಥಪುರ ತಂಬಾಕು ಹರಾಜು ಮಾರುಕಟ್ಟೆಯಲ್ಲಿ 2024-25ನೇ ಸಾಲಿನ ಹೊಗೆಸೊಪ್ಪು ಮಾರಾಟ ಮುಕ್ತಾಯಗೊಂಡಿದ್ದು, ಒಟ್ಟು ₹371.43 ಕೋಟಿ ವಹಿವಾಟು ನಡೆದಿದೆ. ಕೆ.ಜಿ.ಗೆ ಗರಿಷ್ಠ ₹365 ಮತ್ತು ಕನಿಷ್ಠ ₹35 ಬೆಲೆ ದೊರೆತಿದೆ.

ಮಾರುಕಟ್ಟೆಯ ಫ್ಲಾಟ್‌ಫಾರಂ 7ರಲ್ಲಿ 133 ದಿನದವರೆಗೆ ತಂಬಾಕು ಹರಾಜು ಪ್ರಕ್ರಿಯೆ ನಡೆದಿದ್ದು, ಒಟ್ಟು 7,970 ಟನ್ ಹೊಗೆಸೊಪ್ಪು ಮಾರಾಟವಾಗಿದೆ. ಪ್ರತಿ ಕೆ.ಜಿ.ಗೆ ಗರಿಷ್ಠ ₹365 ಮತ್ತು ಕನಿಷ್ಠ ₹50 ಬೆಲೆ ದೊರೆತಿದ್ದು, ಸರಾಸರಿ ಬೆಲೆ ₹254.95 ಸಿಕ್ಕಿದೆ. ಒಟ್ಟು ವಹಿವಾಟು ₹203.31 ಕೋಟಿ ದಾಖಲಾಗಿದೆ. 16 ಕಂಪನಿಗಳು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದವು.

ಫ್ಲಾಟ್‌ಫಾರಂ 63ರಲ್ಲಿ 126 ದಿನ ಹರಾಜು ಪ್ರಕ್ರಿಯೆ ನಡೆದಿದ್ದು, 6,520 ಟನ್ ಹೊಗೆಸೊಪ್ಪು ಮಾರಾಟವಾಗಿದೆ. ಉತ್ತಮ ದರ್ಜೆಯ ತಂಬಾಕು ಕೆ.ಜಿ.ಗೆ ಗರಿಷ್ಠ ₹337 ಮತ್ತು ಕಡಿಮೆ ದರ್ಜೆಯ ತಂಬಾಕಿಗೆ ಕನಿಷ್ಠ ₹35 ದರ ಸಿಕ್ಕಿದ್ದು, ₹257.56 ಸರಾಸರಿ ಬೆಲೆ ಸಿಕ್ಕಿದೆ. ಒಟ್ಟು 13 ಕಂಪನಿಗಳು ಭಾಗವಹಿಸಿದ್ದು, ₹168.12 ಕೋಟಿ ವಹಿವಾಟು ನಡೆದಿದೆ.

ನೆರೆಯ ಆಂಧ್ರಪ್ರದೇಶದಲ್ಲಿ ಕೆ.ಜಿ.ಗೆ ₹400 ಬೆಲೆ ಸಿಕ್ಕಿದ್ದರಿಂದ ರಾಜ್ಯದ ತಂಬಾಕು ಬೆಳೆಗಾರರು ಉತ್ತಮ ಬೆಲೆಯ ಆಶಾಭಾವ ಹೊಂದಿದ್ದರು. ಆದರೆ, ನಿರಾಸೆ ಅನುಭವಿಸಿದರು.

ಕಳೆದ ವರ್ಷ ತಂಬಾಕು ಹುಡಿಯನ್ನು ಕೆ.ಜಿ.ಗೆ ₹100 ಹೆಚ್ಚು ಬೆಲೆಗೆ ಖರೀದಿಸಲಾಗಿತ್ತು.

ಕಳೆದ ವರ್ಷ ರಾಮನಾಥಪುರದ ಮಾರುಕಟ್ಟೆಯಲ್ಲಿ ಕೆ.ಜಿ. ತಂಬಾಕಿಗೆ ಗರಿಷ್ಠ ₹290 ಮತ್ತು ಕನಿಷ್ಠ ₹200 ಬೆಲೆ ಸಿಕ್ಕಿದ್ದು, ಸರಾಸರಿ ₹255 ಬೆಲೆ ದೊರೆತಿತ್ತು. ಒಟ್ಟು ₹374.72 ಕೋಟಿ ವಹಿವಾಟು ನಡೆದಿತ್ತು.

ರಾಮನಾಥಪುರದ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಹೊಗೆಸೊಪ್ಪು ಬೇಲುಗಳನ್ನು ಜೋಡಿಸಲಾಗಿದೆ

> ಆರಂಭದಲ್ಲಿ ಕಡಿಮೆ ದರ್ಜೆಯ ತಂಬಾಕು ಮತ್ತು ಹುಡಿಯನ್ನು ಮಾರುಕಟ್ಟೆಯಲ್ಲೇ ಕೊಳ್ಳುವುದಾಗಿ ಹೇಳಿದ್ದ ಅಧಿಕಾರಿಗಳು, ಕೊನೆಯ ದಿನಗಳಲ್ಲಿ ಕಡಿಮೆ ಬೆಲೆಗೆ ಖರೀದಿಸಿದ್ದಾರೆ. ಇದರಿಂದ ರೈತರಿಗೆ ನಷ್ಟ ಉಂಟಾಗಿದೆ
>
> **ಸೀಬಳ್ಳಿ ಯೋಗಣ್ಣ**, ಬೆಳೆಗಾರ

ಸುದರ್ಶನ್ ಪಟ್ನಾಯಕ್‌ಗೆ ಬ್ರಿಟನ್‌ನಲ್ಲಿ ಗೌರವ

ಲಂಡನ್ (ಪಿಟಿಐ): ಮರಳು ಶಿಲ್ಪದಲ್ಲಿ ಛಾಪು ಮೂಡಿಸಿರುವ ಕಲಾವಿದ ಸುದರ್ಶನ್ ಪಟ್ನಾಯಕ್ ಅವರು ಬ್ರಿಟನ್‌ನಲ್ಲಿ ‘ಫ್ರೆಡ್ ಡ್ಯಾರಿಂಗ್ಟನ್ ಸ್ಯಾಂಡ್ ಮಾಸ್ಟರ್’ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ದಕ್ಷಿಣ ಇಂಗ್ಲೆಂಡ್‌ನ ಡೋಸೆಟ್ ಕೌಂಟಿಯ ವೇಮೌತ್‌ನಲ್ಲಿ ಶನಿವಾರ ಆರಂಭವಾದ ‘ಸ್ಯಾಂಡ್‌ವರ್ಲ್ಡ್ 2025– ಅಂತರರಾಷ್ಟ್ರೀಯ ಮರಳು ಶಿಲ್ಪ ಉತ್ಸವದ ವೇಳೆ ಅವರಿಗೆ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಘೋಷಿಸಲಾಯಿತು. ಮರಳು ಶಿಲ್ಪ ಕಲೆಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗೆ ಈ ಪ್ರಶಸ್ತಿ ಲಭಿಸಿದೆ.

ಪಟ್ನಾಯಕ್ ಅವರು ಇದೇ ಉತ್ಸವದಲ್ಲಿ ‘ವಿಶ್ವ ಶಾಂತಿ’ ಎಂಬ ಸಂದೇಶದಡಿ ಗಣೇಶನ 10 ಅಡಿ ಎತ್ತರದ ಮರಳು ಶಿಲ್ಪವನ್ನು ರಚಿಸಿದರು.

‘ಈ ಪ್ರಶಸ್ತಿ ಲಭಿಸಿದ ಭಾರತದ ಮೊದಲ ಕಲಾವಿದ ಎಂಬ ಗೌರವಕ್ಕೆ ಪಾತ್ರನಾಗಿರುವುದು ಸಂತಸ ನೀಡಿದೆ’ ಎಂದು ಪಟ್ನಾಯಕ್ ಪ್ರತಿಕ್ರಿಯಿಸಿದ್ದಾರೆ. ವೇಮೌತ್ ಮೇಯರ್ ಜಾನ್ ಒರೆಲ್ ಅವರು ಪ್ರಶಸ್ತಿ ಹಾಗೂ ಪದಕ ಪ್ರದಾನ ಮಾಡಿದರು.

ನವೋದ್ಯಮ ಸಹಾಯವಾಣಿ ಸ್ಥಾಪನೆ

ನವದೆಹಲಿ (ಪಿಟಿಐ): ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ವ್ಯಾಪ್ತಿಯಲ್ಲಿ ಸ್ಟಾರ್ಟ್‌ಅಪ್ ಇಂಡಿಯಾ ಡೆಸ್ಕ್ ಸ್ಥಾಪಿಸಲಾಗುತ್ತಿದ್ದು, ಇದು ನವೋದ್ಯಮಗಳ ಸಹಾಯವಾಣಿಯಾಗಿ ಕಾರ್ಯ ನಿರ್ವಹಿಸಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

ಪೀಯೂಷ್ ಗೋಯಲ್

ನಾಲ್ಕು ಸಂಖ್ಯೆ ಒಳಗೊಂಡಿರುವ ಈ ಸಹಾಯವಾಣಿ ಮೂಲಕ ಪ್ರಾದೇಶಿಕ ಭಾಷೆಗಳಲ್ಲಿಯೂ ಸಂವಹನ ನಡೆಸಲು ಅನುಕೂಲ ಕಲ್ಪಿಸಲಾಗುವುದು. ದೇಶದಲ್ಲಿರುವ ಎಲ್ಲಾ ನವೋದ್ಯಮಗಳ ಸಮಸ್ಯೆ ಆಲಿಸಲು ನೆರವಾಗಲಿದೆ ಎಂದು ಹೇಳಿದ್ದಾರೆ.

ನವೋದ್ಯಮಗಳಿಗೆ ಆರ್ಥಿಕ ನೆರವು ಕಲ್ಪಿಸಲು ಕೇಂದ್ರ ನಿರ್ಧರಿಸಿದೆ. ಇದಕ್ಕಾಗಿ ನಿಧಿಯ ನಿಧಿ ಯೋಜನೆ (ಎಫ್‌ಎಫ್‌ಎಸ್) ಅಡಿ ಈ ವರ್ಷ ₹10 ಸಾವಿರ ಕೋಟಿ ನಿಗದಿಪಡಿಸಲಾಗಿದೆ. ಮೊದಲ ಹಂತದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್‌ಗೆ (ಸಿಡ್ಬಿ) ₹2 ಸಾವಿರ ಕೋಟಿಯನ್ನು ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಸಣ್ಣ ಮತ್ತು ಡೀಪ್‌ಟೆಕ್ ನವೋದ್ಯಮಗಳ ಬಲವರ್ಧನೆಗೆ ಹೆಚ್ಚಿನ ನೆರವು ನೀಡಲಾಗುವುದು ಎಂದು ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹480
12 ಕ್ಕೆ	₹66
ಮೈಸೂರು	
100ಕ್ಕೆ	₹470

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹284-675
ದ್ವಿತಳಿ (ಬಿ.ವಿ)	₹322-655

ಮಹಾ ಬೋಧಿ ದೇವಾಲಯಕ್ಕೆ ಮೋದಿ ಭೇಟಿ

ಕೊಲಂಬೊ (ಪಿಟಿಐ): ಶ್ರೀಲಂಕಾದ ಐತಿಹಾಸಿಕ ನಗರಿ ಅನುರಾಧಾಪುರದಲ್ಲಿರುವ ಜಯ ಶ್ರೀ ಮಹಾ ಬೋಧಿ ದೇವಾಲಯಕ್ಕೆ ಪ್ರಧಾನಿ ಮೋದಿ ಭಾನುವಾರ ಭೇಟಿ ನೀಡಿ, ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸಾನಾಯಕೆ ಅವರೊಂದಿಗೆ ದರ್ಶನ ಪಡೆದರು. ಬಳಿಕ ಭಾರತದ ನೆರವಿನೊಂದಿಗೆ ಇಲ್ಲಿ ನಿರ್ಮಿಸಿರುವ ಎರಡು ರೈಲ್ವೆ ಯೋಜನೆಗಳಿಗೆ ಚಾಲನೆ ನೀಡಿದರು.

ಮಹೊ–ಒಮಂಥೈ ನಡುವಿನ 128 ಕಿ.ಮೀ.ರೈಲು ಮಾರ್ಗದ ನವೀಕರಣಕ್ಕಾಗಿ ಭಾರತವು ₹780 ಕೋಟಿ ನೆರವು ನೀಡಿತ್ತು. ಇದೀಗ ಆ ಯೋಜನೆ ಪೂರ್ಣಗೊಂಡಿದ್ದು, ನವೀಕರಿಸಿದ ರೈಲು ಮಾರ್ಗವನ್ನು ಉಭಯ ನಾಯಕರು ಉದ್ಘಾಟಿಸಿದರು. ಬಳಿಕ ಮಹೊದಿಂದ ಅನುರಾಧಾಪುರದವರೆಗೆ ಸುಧಾರಿತ ಸಿಗ್ನಲಿಂಗ್ ವ್ಯವಸ್ಥೆ ಕಲ್ಪಿಸುವ ಯೋಜನೆಗೂ ಚಾಲನೆ ನೀಡಿದರು. ಇದಕ್ಕೆ ಭಾರತ ₹127 ಕೋಟಿ ನೆರವು ಒದಗಿಸಿತ್ತು.

ಅಮೆರಿಕ: ಸರ್ಕಾರದ ನೀತಿ ವಿರೋಧಿಸಿ ಬೀದಿಗಿಳಿದ ನಾಗರಿಕರು

ಟ್ರಂಪ್, ಮಸ್ಕ್ ವಿರುದ್ಧ ಪ್ರತಿಭಟನೆ

ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉದ್ಯಮಿ ಇಲಾನ್ ಮಸ್ಕ್ ವಿರುದ್ಧ ಅಮೆರಿಕದ ವಿವಿಧ ನಗರಗಳಲ್ಲಿ ಜನರು ಶನಿವಾರ ಬೀದಿಗಿಳಿದು ಭಾರಿ ಪ್ರತಿಭಟನೆ ನಡೆಸಿದ್ದಾರೆ.

ಟ್ರಂಪ್ ಆಡಳಿತದ ನೀತಿಗಳು ಮತ್ತು ಮಸ್ಕ್ ನೇತೃತ್ವದ ಸರ್ಕಾರದ ದಕ್ಷತಾ ಇಲಾಖೆ (ಡಿಒಜಿಇ) ಕೈಗೊಂಡಿರುವ ಕ್ರಮಗಳ ವಿರುದ್ಧ ಪ್ರತಿಭಟನಕಾರರು ‘ಹ್ಯಾಂಡ್ಸ್ ಆಫ್’ ಹೆಸರಿನಲ್ಲಿ ಶನಿವಾರ ಎಲ್ಲ 50 ರಾಜ್ಯಗಳಲ್ಲಿ ರ‍್ಯಾಲಿ ನಡೆಸಿದರು.

ಸರ್ಕಾರಿ ಸಿಬ್ಬಂದಿ ಕಡಿತ, ತೆರಿಗೆ ಹೆಚ್ಚಳ, ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಇತರ ಹಲವು ವಿಷಯಗಳನ್ನು ಮುಂದಿಟ್ಟು 1,200ಕ್ಕೂ ಹೆಚ್ಚು ಕಡೆ ಪ್ರತಿಭಟನೆಗಳು ನಡೆದವು.

ಮಾಜಿ ಸೈನಿಕರು, ಚುನಾವಣೆಯಲ್ಲಿ ಟ್ರಂಪ್ ವಿರುದ್ಧ ಪ್ರಚಾರ ನಡೆಸಿದವರು, ನಾಗರಿಕ ಹಕ್ಕುಗಳ ಮತ್ತು ಕಾರ್ಮಿಕ ಸಂಘಟನೆಗಳು, ಎಲ್‌ಜಿಬಿಟಿಕ್ಯು ಸಮುದಾಯ ಸೇರಿದಂತೆ 150ಕ್ಕೂ ಹೆಚ್ಚು ಸಂಘಟನೆಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡವು.

ಸಾವಿರಾರು ಸರ್ಕಾರಿ ನೌಕರರನ್ನು ಕೆಲಸದಿಂದ ವಜಾಗೊಳಿಸಿರುವುದು, ಸಾಮಾಜಿಕ ಭದ್ರತಾ ಆಡಳಿತದ ಕಚೇರಿಗಳನ್ನು ಮುಚ್ಚಿರುವುದು, ವಲಸಿಗರ ಗಡೀಪಾರು, ಲಿಂಗತ್ವ ಅಲ್ಪಸಂಖ್ಯಾತರ ಸುರಕ್ಷತೆಗಾಗಿ ಇದ್ದ ಯೋಜನೆಗಳನ್ನು ರದ್ದುಗೊಳಿಸಿರುವುದು ಮತ್ತು ಆರೋಗ್ಯ ಕಾರ್ಯಕ್ರಮಗಳಿಗೆ ಸರ್ಕಾರದ ಅನುದಾನ ಕಡಿತಗೊಳಿಸುವ ಟ್ರಂಪ್ ಆಡಳಿತದ ನಿರ್ಧಾರಗಳನ್ನು ಪ್ರತಿಭಟನಕಾರರು ಖಂಡಿಸಿದರು.

ವಾಷಿಂಗ್ಟನ್ ಡಿ.ಸಿಯ ನ್ಯಾಷನಲ್ ಮಾಲ್ ಬಳಿ, ನ್ಯೂಯಾರ್ಕ್‌ನ ಮ್ಯಾನ್‌ಹಟನ್, ಮೆಸಾಚುಸೆಟ್ಸ್‌ನ ಬಾಸ್ಟನ್ ಕಾಮನ್ ಪಾರ್ಕ್ ಸೇರಿದಂತೆ ಎಲ್ಲ ರಾಜ್ಯಗಳ ವಿವಿಧ ತಾಣಗಳಲ್ಲಿ ಜನರು ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಫ್ಲಾರಿಡಾದಲ್ಲಿ ಟ್ರಂಪ್ ಒಡೆತನದಲ್ಲಿರುವ ಗಾಲ್ಫ್ ಕೋರ್ಸ್‌ನಿಂದ ಕೆಲವೇ ಕಿ.ಮೀ ದೂರದಲ್ಲಿರುವ ಪಾಮ್ ಬೀಚ್ ಗಾರ್ಡನ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ನೂರಾರು ಮಂದಿ ಭಾಗವಹಿಸಿದರು. ಒಹಿಯೊದ ಕೊಲಂಬಸ್‌ನಲ್ಲಿ ಜನರು ಮಳೆಯನ್ನೂ ಲೆಕ್ಕಿಸದೆ ಪ್ರತಿಭಟಿಸಿದರು.

ಟ್ರಂಪ್ ಸರ್ಕಾರದ ನೀತಿ ವಿರೋಧಿಸಿ ಲಾಸ್ ಏಂಜಲೀಸ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡರು ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- 1,200ಕ್ಕೂ ಹೆಚ್ಚು ಕಡೆ ಪ್ರತಿಭಟನಾ ಮೆರವಣಿಗೆ
- ಸುಮಾರು 150 ಸಂಘಟನೆಗಳು ಭಾಗಿ
- ಡಿಒಜಿಇ ಕ್ರಮಗಳ ಬಗ್ಗೆ ಜನರ ಆಕ್ರೋಶ

ಡಲ್ಲೇವಾಲ್ ಉಪವಾಸ ಸತ್ಯಾಗ್ರಹ ಅಂತ್ಯ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ/ಚಂಡೀಗಢ: ಪಂಜಾಬ್‌ನ ರೈತ ಮುಖಂಡ ಜಗಜೀತ್ ಸಿಂಗ್ ಡಲ್ಲೇವಾಲ್ ಅವರು 131 ದಿನಗಳಿಂದ ನಡೆಸುತ್ತಿದ್ದ ಉಪವಾಸ ಸತ್ಯಾಗ್ರಹವನ್ನು ಭಾನುವಾರ ಅಂತ್ಯಗೊಳಿಸಿದರು.

ರೈತರ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯ ಖಾತರಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕಳೆದ ನ. 26ರಿಂದ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ರವನೀತ್ ಸಿಂಗ್ ಬಿಟ್ಟು ಅವರು ಮನವಿ ಮಾಡಿದ ಒಂದು ದಿನದ ನಂತರ, ಜಗಜೀತ್ ಉಪವಾಸ ಸತ್ಯಾಗ್ರಹ ಅಂತ್ಯಗೊಳಿಸಿದ್ದಾರೆ. ಪಂಜಾಬ್‌ನ ಫತೇಹಗಢ ಸಾಹಿಬ್ ಜಿಲ್ಲೆಯ ಸರ್‌ಹಿಂದ್‌ನಲ್ಲಿ ಆಯೋಜಿಸಿದ್ದ 'ಕಿಸಾನ್ ಮಹಾಪಂಚಾಯತ್'ನಲ್ಲಿ ಸತ್ಯಾಗ್ರಹ ಅಂತ್ಯಗೊಳಿಸುವುದಾಗಿ ಡಲ್ಲೇವಾಲ್ ಘೋಷಿಸಿದರು.

ಮೇ 4ರಂದು ರೈತ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸುವುದಾಗಿ ಕೇಂದ್ರ ಕೃಷಿ ಸಚಿವರು ತಿಳಿಸಿದ್ದಾರೆ.

64 ವರ್ಷಗಳ ನಂತರ ಗುಜರಾತ್‌ನಲ್ಲಿ ಅಧಿವೇಶನ ಆಯೋಜಿಸಿರುವ ಕಾಂಗ್ರೆಸ್

ನಾಳೆಯಿಂದ ಎಐಸಿಸಿ ಅಧಿವೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: 64 ವರ್ಷಗಳ ನಂತರ, ಏಪ್ರಿಲ್ 8 ಹಾಗೂ 9ರಂದು ಗುಜರಾತ್‌ನ ಅಹಮದಾಬಾದ್‌ನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಅಧಿವೇಶನ ನಡೆಯಲಿದೆ.

ಈ ಹಿಂದೆ ಅಹಮದಾಬಾದ್‌ನಲ್ಲಿ 1902 ಹಾಗೂ 1921ರಲ್ಲಿ ಎಐಸಿಸಿ ಅಧಿವೇಶನ ನಡೆದಿತ್ತು. ಸ್ವಾತಂತ್ರ್ಯ ನಂತರ, 1961ರ ಜನವರಿ 6 ಮತ್ತು 7ರಂದು ಭಾವನಗರದಲ್ಲಿ ನಡೆದಿತ್ತು. ಇದಾದ ನಂತರ, ಈಗ ಮತ್ತೆ ಪಕ್ಷವು ಗುಜರಾತ್‌ನಲ್ಲಿ ಅಧಿವೇಶನ ಆಯೋಜಿಸಿರುವುದು ಗಮನಾರ್ಹ.

1907ರಲ್ಲಿ ಸೂರತ್ ಹಾಗೂ 1938ರಲ್ಲಿ ಹರಿಪುರದಲ್ಲಿ ಸೇರಿ ಈ ವರೆಗೆ ಗುಜರಾತ್‌ನಲ್ಲಿ ಐದು ಅಧಿವೇಶನಗಳು ನಡೆದಿವೆ. ಈ ಹಿಂದೆ ನಡೆದ ಅಧಿವೇಶನಗಳನ್ನು ಅವಲೋಕಿಸಿದಾಗ, ಹಲವು ಮಹತ್ವದ ಬೆಳವಣಿಗೆಗಳು, ತೀರ್ಮಾನಗಳು ಹೊರಹೊಮ್ಮಿರುವುದು ಕಂಡುಬರುತ್ತದೆ.

ಅಹಮದಾಬಾದ್‌ನಲ್ಲಿ 1902ರ ಡಿಸೆಂಬರ್ 23ರಿಂದ 26ರ ವರೆಗೆ ಮೊದಲ ಅಧಿವೇಶನ ನಡೆದಿತ್ತು. ಸುರೇಂದ್ರ ನಾಥ್ ಬ್ಯಾನರ್ಜಿ ಆಗ ಎಐಸಿಸಿ ಅಧ್ಯಕ್ಷರಾಗಿದ್ದರು ಹಾಗೂ 471 ಪ್ರತಿನಿಧಿಗಳು ಅಧಿವೇಶನದಲ್ಲಿ ಭಾಗವಹಿಸಿದ್ದರು.

ದೇಶದಲ್ಲಿ ತನ್ನ ಸೇನೆ ನಿಯೋಜನೆ ಮಾಡಿದ್ದಕ್ಕಾಗಿ ಶುಲ್ಕ ರೂಪದಲ್ಲಿ ಭಾರತಕ್ಕೆ ವಾರ್ಷಿಕ ₹7.86 ಲಕ್ಷ ಆಕರಣೆ ಮಾಡುವ ಬ್ರಿಟಿಷ್ ಸರ್ಕಾರದ ನಿರ್ಧಾರ ಕುರಿತು ಅಂದಿನ ಅಧಿವೇಶನದಲ್ಲಿ ಚರ್ಚೆಯಾಗಿತ್ತಲ್ಲದೇ, ಪಕ್ಷವು ಭಾರಿ ವಿರೋಧ ವ್ಯಕ್ತಪಡಿಸಿತ್ತು.

ನಂತರ, ಸೂರತ್‌ನಲ್ಲಿ 1907ರ ಡಿಸೆಂಬರ್ 26 ಹಾಗೂ 27ರಂದು ನಡೆದ ಅಧಿವೇಶನ ಕೂಡ ಭಾರಿ ಕೋಲಾಹಲಕ್ಕೆ ಸಾಕ್ಷಿಯಾಗಿತ್ತು. ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಹೋರಾಟ ಕುರಿತ ಚರ್ಚೆ ವೇಳೆ, ಪಕ್ಷದಲ್ಲಿನ ಮಂದಗಾಮಿಗಳು ಹಾಗೂ ತೀವ್ರಗಾಮಿಗಳ ನಡುವೆ ಜಟಾಪಟಿ ನಡೆದಿತ್ತು. ರಾಸ್ ಬಿಹಾರಿ ಘೋಷ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದನ್ನು ಬಾಲ ಗಂಗಾಧರ ತಿಲಕರು ಪ್ರಶ್ನಿಸಿದ್ದರು. ಪ್ರತಿನಿಧಿಗಳು ಬಡಿಗೆಗಳನ್ನು ಹಿಡಿದು ಗದ್ದಲ ಶುರು ಮಾಡಿದ್ದರಿಂದ ಅಧಿವೇಶನ ಗೊಂದಲದ ಗೂಡಾಗಿತ್ತು. ಒಂದು ಹಂತದಲ್ಲಿ, ವೇದಿಕೆಯತ್ತ ಎಸೆಯಲಾದ ಶೂವೊಂದು ಬ್ಯಾನರ್ಜಿ ಹಾಗೂ ಫಿರೋಜ್ ಶಾ ಮೆಹ್ತಾ ಅವರಿಗೆ ಬಡಿದು ಗದ್ದಲ ಜೋರಾಗಿತ್ತಲ್ಲದೇ, ಅಧಿವೇಶನವನ್ನು ಮೊಟಕುಗೊಳಿಸಲಾಗಿತ್ತು.

ಪಕ್ಷದ ಅಧ್ಯಕ್ಷ ಸಿ.ಆರ್. ದಾಸ್ ಅವರು ಜೈಲಿನಲ್ಲಿದ್ದರು. ಆ ವೇಳೆ, ಅಸಹಕಾರ ಚಳವಳಿ ಕಾವು ಏರತೊಡಗಿತ್ತು. ತಮ್ಮ ಬೇಡಿಕೆಗಳನ್ನು ಬ್ರಿಟಿಷ್ ಸರ್ಕಾರ ಈಡೇರಿಸಿದ್ದರೆ ಅಸಹಕಾರ ಚಳವಳಿಯನ್ನು ಮತ್ತಷ್ಟು ತೀವ್ರಗೊಳಿಸಲು ಕಾಂಗ್ರೆಸ್ ಸಜ್ಜಾಗಿತ್ತು. ಇಂತಹ ಸಂಘರ್ಷಮಯ ಸಂದರ್ಭದಲ್ಲಿ, 1921ರಲ್ಲಿ ಅಹಮದಾಬಾದ್‌ನಲ್ಲಿ ಹಕೀಂ ಅಜ್ಮಲ್ ಶಾ ಅಧ್ಯಕ್ಷತೆಯಲ್ಲಿ ಅಧಿವೇಶನ ನಡೆದಿತ್ತು.

ಸರ್ದಾರ ವಲ್ಲಭಭಾಯಿ ಪಟೇಲ್ ಅವರು ಆಗ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಪಕ್ಷದ ಮುಂದಿನ ನಡೆಗಳು ಹಾಗೂ ಉತ್ತರಾಧಿಕಾರಿಯೊಬ್ಬರ ನಾಮನಿರ್ದೇಶನ ಮಾಡುವ ಅಧಿಕಾರವನ್ನು ಅಂದಿನ ಅಧಿವೇಶನದಲ್ಲಿ ಮಹಾತ್ಮ ಗಾಂಧಿ ಅವರಿಗೆ ನೀಡಲಾಗಿತ್ತು.

1938ರ ಫೆಬ್ರುವರಿ 19ರಿಂದ 21ರವರೆಗೆ ಹರಿಪುರದಲ್ಲಿ ಅಧಿವೇಶನ ನಡೆದ ಸಂದರ್ಭದಲ್ಲಿ ಸುಭಾಶ್ಚಂದ್ರ ಬೋಸ್ ಅವರು ಪಕ್ಷದ ಅಧ್ಯಕ್ಷರಾಗಿದ್ದರು. 'ಪೂರ್ಣ ಸ್ವರಾಜ್' ಬೇಡಿಕೆಯನ್ನು ಪಕ್ಷ ಪುನರುಚ್ಚರಿಸಿತ್ತು.

1939ರಲ್ಲಿ ಬೋಸ್ ಅವರು ಪಕ್ಷದ ಅಧ್ಯಕ್ಷರಾಗಿ ಪುನರಾಯ್ಕೆಗೊಂಡಿದ್ದರು. ಆದರೆ, ಅವರ ಆಯ್ಕೆಗೆ ಗಾಂಧೀಜಿ ವಿರೋಧ ವ್ಯಕ್ತಪಡಿಸಿದ ಕಾರಣ, ಬೋಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಮುಖ್ಯಾಂಶಗಳು

- ಅಹಮದಾಬಾದ್‌ನಲ್ಲಿ 1902ರಲ್ಲಿ ಮೊದಲ ಅಧಿವೇಶನ
- ಭಾರಿ ಕೋಲಾಹಲಕ್ಕೆ ಸಾಕ್ಷಿಯಾಗಿದ್ದ ಸೂರತ್ ಅಧಿವೇಶನ
- 1938ರ ಹರಿಪುರ ಅಧಿವೇಶನಕ್ಕೆ ಸುಭಾಶ್ಚಂದ್ರ ಬೋಸ್ ಅಧ್ಯಕ್ಷತೆ

331 ಮತ ಪಡೆದಿದ್ದ ಇಂದಿರಾ ಗಾಂಧಿ

1961ರಲ್ಲಿ ಭಾವನಗರದಲ್ಲಿ ಮಹಾಧಿವೇಶನ ನಡೆದಿತ್ತು. ಗುಜರಾತ್ ರಾಜ್ಯ ರಚನೆಯಾಗಿ ಆಗ ವರ್ಷವೂ ಕಳೆದಿರಲಿಲ್ಲ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ (ಸಿಡಬ್ಲ್ಯುಸಿ) ಏಳು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 12 ಜನರು ಸ್ಪರ್ಧಿಸಿದ್ದರು. ಇಂದಿರಾ ಗಾಂಧಿ ಅವರು 331 ಮತಗಳನ್ನು ಪಡೆದರೆ, ವೈ.ಬಿ.ಚವಾಣ್ ಅವರು 250 ಮತಗಳನ್ನು ಪಡೆದಿದ್ದರು.

ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದ್ದ ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ, 'ದೇಶದ ಜನರು ರಾಜಕೀಯ 'ಸ್ವರಾಜ್' ಪಡೆದಿದ್ದು, 'ಆರ್ಥಿಕ ಸ್ವರಾಜ್' ಸಾಧಿಸಲು ಶ್ರಮಿಸಬೇಕು' ಎಂದು ಹೇಳಿದ್ದರು.

'ರಾಷ್ಟ್ರೀಯ ಏಕತೆ' ಕುರಿತ ನಿರ್ಣಯ ಮಂಡಿಸಿ ಮಾತನಾಡಿದ್ದ ಇಂದಿರಾ ಗಾಂಧಿ ಅವರು, 'ವಿವಿಧತೆಯಲ್ಲಿ ಏಕತೆ ಈಗ ಅಪಾಯದಲ್ಲಿದೆ. ಕೋಮುವಾದ ಹಾಗೂ ಭಾಷಾ ದುರಭಿಮಾನ ಹೆಚ್ಚುತ್ತಿದೆ. ಇವುಗಳನ್ನು ಈಗಲೇ ಚಿವುಟಿ ಹಾಕದಿದ್ದರೆ ಮುಂದೆ ಭಾರಿ ಅಪಾಯ ತಪ್ಪಿದ್ದಲ್ಲ' ಎಂದು ಎಚ್ಚರಿಸಿದ್ದರು.

3ನೇ ಪಂಚ ವಾರ್ಷಿಕ ಯೋಜನೆ, ಪಂಚಾಯತ್ ರಾಜ್, ರಾಷ್ಟ್ರೀಯ ಏಕತೆ ಹಾಗೂ ಚುನಾವಣಾ ಪ್ರಣಾಳಿಕೆ ಕುರಿತು ಈ ಮಹಾಧಿವೇಶನದಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು.

'ಯುವಕರಿಗೆ ಹೆಚ್ಚಿನ ಆದ್ಯತೆ ಕಾಂಗ್ರೆಸ್ ಬದಲಾಗುತ್ತಿದೆ'

ಸಚಿನ್ ಪೈಲಟ್

ನವದೆಹಲಿ (ಪಿಟಿಐ): 'ಪಕ್ಷದೊಳಗೆ ಯುವಕರಿಗೆ ಹೆಚ್ಚಿನ ಜವಾಬ್ದಾರಿಗಳನ್ನು ನೀಡುತ್ತಿದ್ದು, ಅವರು ಆ ಜವಾಬ್ದಾರಿಗಳನ್ನು ಚೆನ್ನಾಗಿಯೇ ನಿರ್ವಹಿಸುತ್ತಿದ್ದಾರೆ. ರಾತ್ರಿ ಬೆಳಗಾಗುವುದರ ಒಳಗೆ ಬದಲಾವಣೆಗಳು ಸಾಧ್ಯವಿಲ್ಲ. ಆದರೆ, ಪಕ್ಷದಲ್ಲಿ ನಿಧಾನವಾಗಿ ಯುವಕರು ಮುನ್ನೆಲೆಗೆ ಬರುತ್ತಿದ್ದಾರೆ' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಸಚಿನ್ ಪೈಲಟ್ ಹೇಳಿದರು.

ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆಯಲಿರುವ ಕಾಂಗ್ರೆಸ್ ಅಧಿವೇಶನದ ಹಿನ್ನೆಲೆಯಲ್ಲಿ 'ಪಿಟಿಐ' ನಡೆಸಿದ ಸಂದರ್ಶನದಲ್ಲಿ ಅವರು ಈ ವಿಷಯ ತಿಳಿಸಿದರು.

'ಪಕ್ಷದೊಳಗಿನ ಎಲ್ಲ ನೇಮಕಾತಿಗಳೂ ಉದಯಪುರದಲ್ಲಿ ತೆಗೆದುಕೊಂಡ ನಿರ್ಣಯಕ್ಕೆ ಅನುಗುಣವಾಗಿಯೇ ನಡೆಯುತ್ತಿವೆ. ಸಂಸತ್ತಿನಲ್ಲಿ, ಸಂಸತ್ತಿನ ಹೊರಗೆ, ರಾಜ್ಯ ಘಟಕಗಳಲ್ಲಿ ಅಥವಾ ಎಐಸಿಸಿಗೆ ನೇಮಕ ಮಾಡುವಾಗ ಹೊಸ ಮುಖಗಳಿಗೆ, ಯುವಕರಿಗೆ ಜವಾಬ್ದಾರಿಗಳನ್ನು ನೀಡಲಾಗುತ್ತಿದೆ' ಎಂದರು.

'2025ರಲ್ಲಿ ಪಕ್ಷದ ಸಾಂಸ್ಥಿಕ ಸ್ವರೂಪವನ್ನು ಮತ್ತಷ್ಟು ಬಲಗೊಳಿಸುವುದರ ಕಡೆಗೆ ಗಮನ ಹರಿಸುತ್ತೇವೆ ಎಂದು 2024ರಲ್ಲಿ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿಯೇ ನಾವು ಘೋಷಿಸಿದ್ದೇವೆ. ಇದಕ್ಕೆ ಪಕ್ಷ ಬದ್ಧವಾಗಿದ್ದು, ಅದೇ ಹಾದಿಯಲ್ಲಿ ಕಾರ್ಯನಿರ್ವಹಿಸುತ್ತಿದೆ' ಎಂದರು.

'2025ರಲ್ಲಿ ಪಕ್ಷವನ್ನು ಕಟ್ಟಿ ನಿಲ್ಲಿಸುತ್ತೇವೆ'

- 2025ರಲ್ಲಿ ನಾವು ಪಕ್ಷವನ್ನು ಮತ್ತೊಮ್ಮೆ ಕಟ್ಟಿ ನಿಲ್ಲಿಸುತ್ತೇವೆ. ಪಕ್ಷದ ಸಿದ್ಧಾಂತವನ್ನು ಬಲಗೊಳಿಸುತ್ತೇವೆ. ಮುತುವರ್ಜಿಯಿಂದ ಕೆಲಸ ಮಾಡುವವರಿಗೆ ಹೆಚ್ಚಿನ ಜವಾಬ್ದಾರಿ ನೀಡುತ್ತೇವೆ. ನಿರೀಕ್ಷೆಗೆ ತಕ್ಕಂತೆ ಯಾರು ಕೆಲಸ ಮಾಡುವುದಿಲ್ಲವೊ ಅವರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಅವರನ್ನು ಕೆಳಗಿಳಿಸಿ ಕೆಲಸ ಮಾಡುವವರಿಗೆ ಅವಕಾಶ ಮಾಡಿಕೊಡಲಾಗುತ್ತದೆ
- ಇತ್ತೀಚೆಗೆ ಇಂದಿರಾ ಭವನದಲ್ಲಿ ಪಕ್ಷದ ಜಿಲ್ಲಾ ಅಧ್ಯಕ್ಷರ ಸಭೆ ನಡೆಸಲಾಯಿತು. ಚುನಾವಣೆ, ಹಣಕಾಸಿನ ನಿರ್ವಹಣೆ ಮತ್ತು ಅಭ್ಯರ್ಥಿಗಳ ಆಯ್ಕೆ ವಿಚಾರಗಳಲ್ಲಿ ಜಿಲ್ಲಾ ಅಧ್ಯಕ್ಷರಿಗೆ ಹೆಚ್ಚಿನ ಜವಾಬ್ದಾರಿ ನೀಡಬೇಕು ಎಂದು ನಿರ್ಧರಿಸಲಾಯಿತು

ಪ್ರತಿಭಟನೆ ವಕ್ಫ್ (ತಿದ್ದುಪಡಿ) ಕಾಯ್ದೆ ಮತ್ತು ಕೇಂದ್ರ ಸರ್ಕಾರದ ಇತರ ನೀತಿಗಳನ್ನು ವಿರೋಧಿಸಿ ಚೆನ್ನೈನಲ್ಲಿ ಭಾನುವಾರ ನಡೆದ ಪ್ರತಿಭಟನೆಯಲ್ಲಿ ತಮಿಳುನಾಡು ಕಾಂಗ್ರೆಸ್ ಘಟಕದ ಅಧ್ಯಕ್ಷ ಕೆ.ಸೆಲ್ವಪೆರುಂದಗೈ, ಪಿ.ಚಿದಂಬರಂ ಹಾಗೂ ಪಕ್ಷದ ಇತರ ನಾಯಕರು ಪಾಲ್ಗೊಂಡರು –ಪಿಟಿಐ ಚಿತ್ರ

ಮಣಿಪುರ ಬಿಜೆಪಿ ಮುಖಂಡನ ಮನೆಗೆ ಬೆಂಕಿ

ಇಂಫಾಲ್(ಪಿಟಿಐ): ವಕ್ಫ್ ತಿದ್ದುಪಡಿ ಮಸೂದೆಯನ್ನು ಬೆಂಬಲಿಸಿದ ಆರೋಪದ ಮೇಲೆ, ಬಿಜೆಪಿಯ ಮಣಿಪುರ ಘಟಕದ ಅಲ್ಪಸಂಖ್ಯಾತರ ಮೋರ್ಚಾ ಅಧ್ಯಕ್ಷ ಅಸ್ಕರ್ ಅಲಿ ಅವರ ಮನೆಗೆ ಗುಂಪೊಂದು ಭಾನುವಾರ ರಾತ್ರಿ ಬೆಂಕಿ ಹಚ್ಚಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಥೌಬಾಲ್ ಜಿಲ್ಲೆಯ ಲಿಲೊಂಗ್ ಎಂಬಲ್ಲಿ ಈ ಘಟನೆ ನಡೆದಿದೆ. ವಕ್ಫ್ ತಿದ್ದುಪಡಿ ಮಸೂದೆಗೆ ಬೆಂಬಲ ವ್ಯಕ್ತಪಡಿಸಿ ಅಲಿ ಅವರು ಸಾಮಾಜಿಕ ಮಾಧ್ಯಮದಲ್ಲಿ ಶನಿವಾರ ಪೋಸ್ಟ್ ಮಾಡಿದ್ದರು ಎನ್ನಲಾಗಿದೆ. ಇದರಿಂದ ಆಕ್ರೋಶಗೊಂಡ ಗುಂಪು, ರಾತ್ರಿ 9ರ ವೇಳೆಗೆ ಅವರ ನಿವಾಸದ ಮುಂದೆ ಜಮಾಯಿಸಿತ್ತು. ನಿವಾಸವನ್ನು ಧ್ವಂಸಗೊಳಿಸಿದ್ದಲ್ಲದೇ, ಬೆಂಕಿ ಹಚ್ಚಿತು ಎಂದು ತಿಳಿಸಿದ್ದಾರೆ. ಈ ಘಟನೆ ಬೆನ್ನಲ್ಲೇ, ಅಲಿ ಕ್ಷಮೆ ಕೋರಿದ್ದಾರೆ.

ಕಾನೂನು ಪ್ರಕಾರ ಕೆಲಸ ಮಾಡಲಿ: ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅಭಿಮತ

'ವಕ್ಫ್ ಮಂಡಳಿ ನಿಯಂತ್ರಿಸುವ ಬಯಕೆಯಿಲ್ಲ'

ನವದೆಹಲಿ/ಮುಜಫ್ಫರ್‌ನಗರ (ಪಿಟಿಐ): 'ವಕ್ಫ್ ಮಂಡಳಿಯನ್ನು ನಿಯಂತ್ರಿಸಬೇಕು ಎಂದು ಕೇಂದ್ರ ಸರ್ಕಾರ ಬಯಸುತ್ತಿಲ್ಲ. ಆದರೆ, ಕಾನೂನು ಪ್ರಕಾರ ಮಂಡಳಿ ಕೆಲಸ ಮಾಡಲಿ ಎನ್ನುವುದನ್ನು ಬಯಸುತ್ತೇವೆ. ಮಂಡಳಿಯ ಆಸ್ತಿಗಳನ್ನು ಮುಸ್ಲಿಂ ಸಮುದಾಯದ ಶಿಕ್ಷಣ, ಆರೋಗ್ಯ, ಉದ್ಯೋಗಕ್ಕೆ ಬಳಸಿಕೊಳ್ಳಲಾಗುವುದು' ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದರು.

ಬಿಜೆಪಿಯ 46ನೇ ಸಂಸ್ಥಾಪನಾ ದಿನದ ಪ್ರಯುಕ್ತ ಪಕ್ಷದ ಕೇಂದ್ರ ಕಚೇರಿಯಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಟರ್ಕಿ ಸೇರಿ ಹಲವು ಮುಸ್ಲಿಂ ರಾಷ್ಟ್ರಗಳು ವಕ್ಫ್ ಆಸ್ತಿಗಳನ್ನು ನಮ್ಮ ನಿಯಂತ್ರಣಕ್ಕೆ ತಂದುಕೊಂಡಿವೆ. ವಕ್ಫ್ ಮಂಡಳಿಯನ್ನು ನಿರ್ವಹಿಸುತ್ತಿರುವವರಲ್ಲಿ ನಾವು ಕೇಳುತ್ತಿರುವುದು ಕಾನೂನು ಪ್ರಕಾರ ಕೆಲಸ ಮಾಡಿ ಎಂದಷ್ಟೇ' ಎಂದರು.

'ಸುಪ್ರೀಂ'ನಲ್ಲಿ ಅರ್ಜಿ: ಕೇರಳದ ಸುನ್ನಿ ಮುಸ್ಲಿಂ ಪಂಡಿತರು ಮತ್ತು ಧರ್ಮಗುರುಗಳನ್ನು ಒಳಗೊಂಡ 'ಸಮಸ್ತ ಕೇರಳ ಜಮೀಯತುಲ್ ಉಲೆಮಾ' ಸಂಸ್ಥೆಯು ವಕ್ಫ್ (ತಿದ್ದುಪಡಿ) ಕಾಯ್ದೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. 'ಸಂವಿಧಾನದ ಒಕ್ಕೂಟ ತತ್ವಗಳಿಗೆ ಈ ಕಾಯ್ದೆಯು ವಿರುದ್ಧವಾಗಿದೆ. ರಾಜ್ಯ ಸರ್ಕಾರಗಳು ಹಾಗೂ ರಾಜ್ಯ ವಕ್ಫ್ ಮಂಡಳಿಗಳ ಅಧಿಕಾರಗಳನ್ನು ಈ ಕಾಯ್ದೆ ಕಸಿದುಕೊಳ್ಳುತ್ತದೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ವಿರೋಧ: 300 ಮುಸ್ಲಿಮರಿಗೆ ನೋಟಿಸ್

ವಕ್ಫ್ (ತಿದ್ದುಪಡಿ) ಕಾಯ್ದೆಯನ್ನು ವಿರೋಧಿಸಿ ಉತ್ತರ ಪ್ರದೇಶದ ವಿವಿಧ ಮಸೀದಿಗಳಲ್ಲಿ ಮಾ.28ರಂದು ಕಪ್ಪು ಪಟ್ಟಿ ಧರಿಸಿ ಪ್ರಾರ್ಥನೆ ಮಾಡಿದ ಒಟ್ಟು 300 ಜನರಿಗೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ. ಪ್ರತಿಯೊಬ್ಬರೂ ₹2 ಲಕ್ಷ ಬಾಂಡ್ ಸಲ್ಲಿಸಬೇಕು ಎಂದೂ ಹೇಳಿದ್ದಾರೆ.

ಮುಜಫ್ಫರ್‌ನಗರದ ಎಸ್‌ಪಿ ಸತ್ಯನಾರಾಯಣ ಪ್ರಜಾಪತಿ ಅವರು ಈ ಬಗ್ಗೆ ಮಾಹಿತಿ ನೀಡಿ, 'ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳ ಮೂಲಕ ಜನರನ್ನು ಗುರುತು ಮಾಡಲಾಗಿದೆ. ಇನ್ನಷ್ಟು ಮಂದಿಯನ್ನು ಗುರುತು ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಶನಿವಾರ ಒಂದೇ ದಿನ ಸುಮಾರು 24 ಮಂದಿಗೆ ನೋಟಿಸ್ ನೀಡಲಾಗಿದೆ' ಎಂದರು.

ಪಕ್ಷವನ್ನು ವಿಸ್ತರಿಸುವುದು, ಚುನಾವಣೆ ಗೆಲ್ಲುವುದು ಒಂದು ಕಲೆ. ಜೊತೆ ಜೊತೆಗೆ ಅದು ವಿಜ್ಞಾನವೂ ಹೌದು. ಇದರಿಂದಲೇ ಪಕ್ಷವು 'ವೈಜ್ಞಾನಿಕ'ವಾಗಿ ಬೆಳೆದುಕೊಂಡು ಬಂದಿದೆ

ಜೆ.ಪಿ. ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಬೇಬಿಗೆ ಸಿಪಿಎಂ ಪ್ರಧಾನ ಕಾರ್ಯದರ್ಶಿ ಪಟ್ಟ

ಪ್ರಜಾವಾಣಿ ವಾರ್ತೆ/ ಪಿಟಿಐ

ಮಧುರೈ/ನವದೆಹಲಿ: ಕೇರಳದ ಮಾಜಿ ಸಚಿವ ಎಂ.ಎ. ಬೇಬಿ ಅವರು ಸಿಪಿಎಂ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಮಧುರೈನಲ್ಲಿ ಭಾನುವಾರ ನಡೆದ ಸಿಪಿಎಂನ 24ನೇ ಸಮಾವೇಶದಲ್ಲಿ ಈ ಆಯ್ಕೆ ಮಾಡಲಾಗಿದೆ.

ಎಂ.ಎ.ಬೇಬಿ

ಪಕ್ಷದ ಕೇಂದ್ರ ಸಮಿತಿ ಹಾಗೂ ಪಾಲಿಟ್ ಬ್ಯುರೊ ಪುನರ್‌ರಚನೆಯಾಗಿದ್ದು, ಹೊಸಬರಿಗೆ, ಮಹಿಳೆಯರಿಗೆ ಅವಕಾಶ ಕಲ್ಪಿಸಲಾಗಿದೆ.

ಕಳೆದ ವರ್ಷ ಸೀತಾರಾಮ್ ಯೆಚೂರಿ ನಿಧನರಾದ ನಂತರ ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆ ಖಾಲಿಯಿತ್ತು. ಪ್ರಕಾಶ್ ಕಾರಟ್ ಹಂಗಾಮಿಯಾಗಿ ಈ ಜವಾಬ್ದಾರಿ ನಿರ್ವಹಿಸುತ್ತಿದ್ದರು.

ಪಶ್ಚಿಮ ಬಂಗಾಳದ ಮುಖಂಡರು ಪಕ್ಷದ ಪಾಲಿಟ್ ಬ್ಯೂರೊ ಸಭೆಯಲ್ಲಿ, ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಅಧ್ಯಕ್ಷ ಅಶೋಕ್ ಧವಲೆ ಅವರನ್ನು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಬೆಂಬಲಿಸಿದ್ದರು.

ಆದರೆ, ಪಾಲಿಟ್ ಬ್ಯೂರೊದ 16 ಸದಸ್ಯರಲ್ಲಿ 11 ಸದಸ್ಯರು ಕೇರಳದ ಮಾಜಿ ಸಚಿವರಿಗೆ ಬೆಂಬಲ ವ್ಯಕ್ತಪಡಿಸಿದ್ದರಿಂದ, ಬೇಬಿ ಅವರು ಬಹುಮತದಿಂದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು ಎಂದು ಮೂಲಗಳು ತಿಳಿಸಿವೆ.

ಕೇರಳದ ಪ್ರಾಕ್ಕುಳಂನಲ್ಲಿ ಪಿ.ಎಂ.ಅಲೆಕ್ಸಾಂಡರ್–ಲಿಲ್ಲಿ ದಂಪತಿಯ ಮಗನಾಗಿ 1954ರಲ್ಲಿ ಜನಿಸಿದ ಮರಿಯಮ್ ಅಲೆಕ್ಸಾಂಡರ್ ಬೇಬಿ (ಎಂ.ಎ.ಬೇಬಿ) ಅವರು, ತಮ್ಮ ಶಾಲಾ ದಿನಗಳಲ್ಲಿ ಎಸ್‌ಎಫ್‌ಐನ ಅಂಗಸಂಸ್ಥೆಯಾದ ಕೇರಳ ವಿದ್ಯಾರ್ಥಿ ಸಂಘಟನೆ ಮೂಲಕ ಸಾರ್ವಜನಿಕ ಜೀವನ ಪ್ರವೇಶಿಸಿದರು.

1986ರಿಂದ 1998ರವರೆಗೆ ರಾಜ್ಯಸಭೆಯ ಸದಸ್ಯರಾಗಿದ್ದ ಬೇಬಿ, 2006ರಿಂದ 11ರವರೆಗೆ ಕೇರಳದ ಶಿಕ್ಷಣ ಸಚಿವರಾಗಿದ್ದರು. 2012ರಿಂದಲೂ ಸಿಪಿಎಂ ಪಾಲಿಟ್ ಬ್ಯುರೊ ಸದಸ್ಯರಾಗಿದ್ದಾರೆ. ಸಿಪಿಎಂ ಪ್ರಧಾನ ಕಾರ್ಯದರ್ಶಿಯಾಗಿ ಕೇರಳದಿಂದ ಆಯ್ಕೆಯಾದ ಮೊದಲಿಗ ಇಎಂಎಸ್ ನಂಬೂದರಿಪಾಡ್. ಇವರ ನಂತರ ಬೇಬಿ ಎರಡನೆಯವರಾಗಿ ಆಯ್ಕೆಯಾಗಿದ್ದಾರೆ.

75 ವರ್ಷ ದಾಟಿದವರನ್ನು ನಿವೃತ್ತಿಗೊಳಿಸುವ ನಿಯಮ ಸಿಪಿಎಂ ಪಕ್ಷದಲ್ಲಿದೆ. ಈ ಮಾನದಂಡದಂತೆ ಹಿರಿಯ ಮುಖಂಡರಾದ ಪ್ರಕಾಶ್ ಕಾರಟ್, ಬೃಂದಾ ಕಾರಟ್, ಮಾಣಿಕ್ ಸರ್ಕಾರ್, ಸೂರ್ಯಕಾಂತ್ ಮಿಶ್ರಾ, ಸುಭಾಶಿನಿ ಅಲಿ, ಶ್ರೀನಿವಾಸರಾವ್, ಜಿ.ರಾಮಕೃಷ್ಣ ಪಾಲಿಟ್ ಬ್ಯೂರೊದಿಂದ ಹೊರನಡೆದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಾಲಕಿ ಅಪಹರಣ, ಅತ್ಯಾಚಾರ

ಮುಜಫ್ಫರ್‌ನಗರ (ಪಿಟಿಐ): ಉತ್ತರ ಪ್ರದೇಶದ ಮುಜಫ್ಫರ್‌ನಗರದಲ್ಲಿ 16 ವರ್ಷದ ಬಾಲಕಿಯನ್ನು ಅಪಹರಿಸಿದ ಇಬ್ಬರು ವ್ಯಕ್ತಿಗಳು ಆಕೆಯ ಮೇಲೆ ಅತ್ಯಾಚಾರ ಎಸಗಿ, ಕೃತ್ಯದ ವಿಡಿಯೊ ಮಾಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

ಏಪ್ರಿಲ್ ಒಂದರಂದು ಘಟನೆ ನಡೆದಿದ್ದು ಆರೋಪಿಗಳನ್ನು ರಿಜ್ವಾನ್ ಹಾಗೂ ಅಬಾಜ್ ಎಂದು ಗುರುತಿಸಲಾಗಿದೆ. ಇವರ ವಿರುದ್ಧ ಪ್ರಕರಣ ದಾಖಲಾಗಿದ್ದು ಇಬ್ಬರೂ ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿ ರಾಜು ಕುಮಾರ್ ತಿಳಿಸಿದರು.

ಇಲ್ಲಿನ ಮೀರತ್ ರಸ್ತೆಯಲ್ಲಿ ಬಾಲಕಿಯು ತನ್ನ ತಾಯಿಗಾಗಿ ಕಾಯುತ್ತಿದ್ದಾಗ ಕಾರಿನಲ್ಲಿ ಬಂದ ಆರೋಪಿಗಳು, ಬಲವಂತವಾಗಿ ಆಕೆಯನ್ನು ವಾಹನದಲ್ಲಿ ಹತ್ತಿಸಿಕೊಂಡು ಹೋಗಿದ್ದಾರೆ. ಬಳಿಕ ಹೋಟೆಲ್‌ಗೆ ಕರೆದೊಯ್ದು ಅಲ್ಲಿ ಅತ್ಯಾಚಾರ ಎಸಗಿ ಕೃತ್ಯವನ್ನು ಸೆರೆಹಿಡಿದು, ಯಾರಿಗೂ ವಿಷಯ ತಿಳಿಸದಂತೆ ಬೆದರಿಕೆ ಹಾಕಿದ್ದಾರೆ.

ಪ್ರಜ್ಞೆ ಬಂದ ಬಳಿಕ ಬಾಲಕಿ ಮನೆಗೆ ಹಿಂದಿರುಗಿದಳು. ಆದರೆ, ಭಯದಿಂದ ಈ ವಿಷಯವನ್ನು ತಿಳಿಸಿರಲಿಲ್ಲ. ಅನಾರೋಗ್ಯಕ್ಕೆ ಒಳಗಾದ ಬಳಿಕ ವಿಷಯ ಗೊತ್ತಾಯಿತು ಎಂದು ಆಕೆಯ ಸಹೋದರ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

'ಪ್ರತಿ ಸುಂಕಕ್ಕೆ ತಿರುಗೇಟು ಸಾಧ್ಯತೆ ಇಲ್ಲ'

ನವದೆಹಲಿ(ರಾಯಿಟರ್ಸ್): ಭಾರತದ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಶೇ 26ರಷ್ಟು ಸುಂಕ ವಿಧಿಸಿದ್ದರೂ, ತಿರುಗೇಟು ನೀಡಲು ಆ ರಾಷ್ಟ್ರದ ಮೇಲೆ ಭಾರಿ ಸುಂಕ ಹೇರುವ ಯೋಜನೆ ಭಾರತ ಹೊಂದಿಲ್ಲ ಎಂದು ಕೇಂದ್ರ ಸರ್ಕಾರದ ಅಧಿಕಾರಿಗಳು ಹೇಳಿದ್ದಾರೆ.

ಪ್ರತಿ ಸುಂಕಕ್ಕೆ ಸಂಬಂಧಿಸಿ ಅಮೆರಿಕ ಮತ್ತು ಭಾರತ ದೇಶಗಳ ನಡುವೆ ಮಾತುಕತೆಗಳು ನಡೆಯುತ್ತಿವೆ. ಜೊತೆಗೆ, ಪ್ರತಿ ಸುಂಕ ಒಳಗೊಂಡಿರದ ವ್ಯಾಪಾರ ಒಪ್ಪಂದಗಳಿಗೆ ಸಂಬಂಧಿಸಿ ಪಾಲುದಾರ ದೇಶಗಳಿಗೆ ವಿನಾಯಿತಿ ನೀಡುವ ಕೆಲ ನಿಬಂಧನೆಗಳು ಟ್ರಂಪ್ ಆದೇಶದಲ್ಲಿ ಇರುವುದನ್ನು ಗಮನಿಸಿರುವ ಕೇಂದ್ರ, ಅಮೆರಿಕಕ್ಕೆ ತಿರುಗೇಟು ನೀಡುವ ಯೋಜನೆ ಹೊಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಣಿಪುರ: ನಾಲ್ವರು ಉಗ್ರರ ಬಂಧನ

ಇಂಫಾಲ್ (ಪಿಟಿಐ): ಬಾಲಕ ಸೇರಿದಂತೆ ನಾಲ್ವರು ಉಗ್ರರನ್ನು ಭದ್ರತಾ ಪಡೆ ಸಿಬ್ಬಂದಿ ಮಣಿಪುರದ ಬಿಷ್ಣುಪುರ ಮತ್ತು ಕಾಕ್‌ಚಿಂಗ್ ಜಿಲ್ಲೆಗಳಲ್ಲಿ ಬಂಧಿಸಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

ಬಾಲಕ ಹಾಗೂ ಇನ್ನಿಬ್ಬರು ನಿಷೇಧಿತ ಕಾಂಗ್ಲೀಪಾಕ್ ಕಮ್ಯುನಿಸ್ಟ್ ಪಕ್ಷದ (ಪಿಡಬ್ಲುಜಿ) ಸದಸ್ಯರಾಗಿದ್ದು, ಇವರನ್ನು ಶನಿವಾರ ಬಿಷ್ಣುಪುರದಲ್ಲಿ ಬಂಧಿಸಲಾಯಿತು. ಅಲ್ಲದೆ ಕಾಕ್‌ಚಿಂಗ್‌ನಲ್ಲಿ ನಿಷೇಧಿತ 'ಯುನೈಟೆಡ್ ಪೀಪಲ್ಸ್ ಪಾರ್ಟಿ ಆಫ್ ಕಾಂಗ್ಲೀಪಾಕ್'ನ ಒಬ್ಬ ಸದಸ್ಯನನ್ನು ಬಂಧಿಸಲಾಗಿದೆ.ಈ ನಡುವೆ ಶೋಧ ಕಾರ್ಯಾಚರಣೆಯ ವೇಳೆ ಜಿರೀಬಾಮ್ ಜಿಲ್ಲೆಯಲ್ಲಿ ಪೊಲೀಸರು ಹಲವಾರು ಶಸ್ತ್ರಾಸ್ತ್ರ ವಶಪಡಿಸಿಕೊಂಡಿದ್ದಾರೆ.

ಕನ್ಹಯ್ಯ ಪಾದಯಾತ್ರೆ ರಾಹುಲ್ ಇಂದು ಭಾಗಿ

ರಾಹುಲ್ ಗಾಂಧಿ

ಪಟ್ನಾ: ಎನ್‌ಎಸ್‌ಯುಐ ಉಸ್ತುವಾರಿ ಕನ್ಹಯ್ಯ ಕುಮಾರ್ ನೇತೃತ್ವದಲ್ಲಿ ಬಿಹಾರದಲ್ಲಿ ನಡೆಯುತ್ತಿರುವ ಪಾದಯಾತ್ರೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಪಾಲ್ಗೊಳ್ಳಲಿದ್ದಾರೆ.

ತಮಿಳಿನಲ್ಲಿ ವೈದ್ಯಕೀಯ ಶಿಕ್ಷಣ ನೀಡಿ: ಪ್ರಧಾನಿ ಮೋದಿ

ಪ್ರಜಾವಾಣಿ ವಾರ್ತೆ/ ಪಿಟಿಐ

ರಾಮೇಶ್ವರ/ ಚೆನ್ನೈ (ತಮಿಳುನಾಡು): ಪ್ರಧಾನಿ ನರೇಂದ್ರ ಮೋದಿ ಅವರು ತಮಿಳು ಭಾಷೆಯ ಪರವಾಗಿ ಮಾತನಾಡಿದರಲ್ಲದೆ, 'ತಮಿಳು ಭಾಷೆ ಮತ್ತು ಸಂಸ್ಕೃತಿಯನ್ನು ವಿಶ್ವದಾದ್ಯಂತ ಪಸರಿಸಲು ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ' ಎಂದು ಪ್ರತಿಪಾದಿಸಿದರು.

ಭಾನುವಾರ ಪಂಬನ್ ಸೇತುವೆ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಬಡವರಿಗೆ ಅನುಕೂಲವಾಗುವಂತೆ ವೈದ್ಯಕೀಯ ಶಿಕ್ಷಣವನ್ನು ತಮಿಳು ಮಾಧ್ಯಮದಲ್ಲಿ ನೀಡಬೇಕೆಂದು ತಮಿಳುನಾಡು ಸರ್ಕಾರವನ್ನು ಕೇಳಿಕೊಂಡರು.

ತನ್ನ 'ದ್ವಿಭಾಷಾ ಸೂತ್ರ' ನೀತಿಯನ್ನು ಬದಲಿಸಲು ಸಿದ್ಧವಿಲ್ಲದ ಡಿಎಂಕೆ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದ ಪ್ರಧಾನಿ, 'ತಮಿಳುನಾಡಿನ ನಾಯಕರು ನನಗೆ ಪತ್ರಗಳನ್ನು ಬರೆಯುವಾಗ ಅದರಲ್ಲಿ ತಮಿಳಿನಲ್ಲಿ ಸಹಿ ಮಾಡುವುದಿಲ್ಲ. ಕನಿಷ್ಠ ಪಕ್ಷ ನಿಮ್ಮ ಸಹಿಯನ್ನು ತಮಿಳಿನಲ್ಲಿ ಹಾಕಲು ಸಾಧ್ಯವಿಲ್ಲವೇ' ಎಂದು ಪ್ರಶ್ನಿಸಿದರು.

ಸ್ಟಾಲಿನ್ ಗೈರು: ಪಂಬನ್ ಸೇತುವೆ ಲೋಕಾರ್ಪಣೆ ಸಮಾರಂಭದಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಪಾಲ್ಗೊಳ್ಳಲಿಲ್ಲ. ತಮಿಳುನಾಡು ಸರ್ಕಾರದ ವತಿಯಿಂದ ಊಟಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದರು.

'ರಾಜ್ಯ ಸರ್ಕಾರದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದರಿಂದ, ಪ್ರಧಾನಿ ಪಾಲ್ಗೊಂಡ ಸಮಾರಂಭದಲ್ಲಿ ಪಾಲ್ಗೊಳ್ಳಲು ಆಗುವುದಿಲ್ಲ ಎಂದು ಮುಂಚಿತವಾಗಿಯೇ ಮಾಹಿತಿ ನೀಡಿದ್ದೇನೆ. ನಮ್ಮ ಸಚಿವರಾದ ತಂಗಂ ತೆನರಸು ಮತ್ತು ರಾಜಾ ಕಣ್ಣಪ್ಪನ್ ಅವರನ್ನು ಪ್ರಧಾನಿ ಪಾಲ್ಗೊಂಡ ಕಾರ್ಯಕ್ರಮಕ್ಕೆ ಕಳುಹಿಸಿದ್ದೇನೆ' ಎಂದು ಸ್ಟಾಲಿನ್ ತಿಳಿಸಿದರು.

'ಜನರ ಆತಂಕವನ್ನು ಪ್ರಧಾನಿ ನಿವಾರಿಸಲಿ'

ಸ್ಟಾಲಿನ್

ಉದಕಮಂಡಲ: ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಸಂಬಂಧಿಸಿದಂತೆ ತಮಿಳುನಾಡಿನ ಜನರಲ್ಲಿ ಮನೆಮಾಡಿರುವ ಆತಂಕವನ್ನು ಪ್ರಧಾನಿ ನರೇಂದ್ರ ಮೋದಿ ದೂರ ಮಾಡಬೇಕು ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಭಾನುವಾರ ಇಲ್ಲಿ ಹೇಳಿದರು.

ಪ್ರಮುಖ ಪ್ರವಾಸಿ ತಾಣ ಊಟಿಯಲ್ಲಿ ವಿವಿಧ ಯೋಜನೆಗಳಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ತಮಿಳುನಾಡಿನ ಜನರ ಹಕ್ಕುಗಳನ್ನು ರಕ್ಷಿಸುವಂತಹ ನಿರ್ಣಯವನ್ನು ಸಂಸತ್ತಿನಲ್ಲಿ ಅಂಗೀಕರಿಸುವುದನ್ನು ಪ್ರಧಾನಿ ಅವರು ಖಚಿತಪಡಿಸಿಕೊಳ್ಳಬೇಕು' ಎಂದು ತಿಳಿಸಿದರು. 'ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ವಿಚಾರದಲ್ಲಿ ಎದ್ದಿರುವ ಕಳವಳಗಳ ಕುರಿತ ಮನವಿ ಪತ್ರ ಸಲ್ಲಿಸಲು ಪ್ರಧಾನಿ ಅವರನ್ನು ಭೇಟಿಯಾಗಲು ಕಾಲಾವಕಾಶ ಕೋರಿದ್ದೇನೆ' ಎಂದು ಅವರು ಹೇಳಿದರು.

ಸೇತುವೆ ಉದ್ಘಾಟನಾ ಕಾರ್ಯಕ್ರಮಕ್ಕೆ ಗೈರಾಗುವ ಮೂಲಕ ಮುಖ್ಯಮಂತ್ರಿ ಸ್ಟಾಲಿನ್ ಅವರು ಪ್ರಧಾನಿ ಅವರನ್ನು ಅವಮಾನಿಸಿದ್ದಾರೆ

ಕೆ.ಅಣ್ಣಾಮಲೈ, ಬಿಜೆಪಿ ತಮಿಳುನಾಡು ಘಟಕದ ಅಧ್ಯಕ್ಷ

ಬಿ.ವೈ. ವಿಜಯೇಂದ್ರ ಮುಂದುವರಿಸಲು ಹೈಕಮಾಂಡ್ ಒಲವು

ನವದೆಹಲಿ (ಪಿಟಿಐ): ಕರ್ನಾಟಕ ಸೇರಿದಂತೆ ಪ್ರಮುಖ ರಾಜ್ಯಗಳ ಬಿಜೆಪಿ ಘಟಕದ ಅಧ್ಯಕ್ಷರ ಆಯ್ಕೆಗೆ ಪಕ್ಷ ಚಿಂತನೆ ನಡೆಸಿದೆ.

ಆ ಬಳಿಕವೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಗೆ ಅವಕಾಶ ಮಾಡಿಕೊಡಲು ನಿರ್ಧರಿಸಲಾಗಿದೆ. ಹೀಗಾಗಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯು ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಕರ್ನಾಟಕ ಸೇರಿದಂತೆ ದೊಡ್ಡ ರಾಜ್ಯಗಳಲ್ಲಿ ಅಧ್ಯಕ್ಷರ ಆಯ್ಕೆಗೆ ಶೀಘ್ರವೇ ಚುನಾವಣೆ ನಡೆಸಲು ಪಕ್ಷದ ನಾಯಕತ್ವ ಉತ್ಸುಕವಾಗಿದೆ.

ಉತ್ತರ ಪ್ರದೇಶದ ಬಿಜೆಪಿ ಘಟಕದ ಅಧ್ಯಕ್ಷ ಭೂಪೇಂದ್ರ ಸಿಂಗ್ ಮತ್ತು ಮಧ್ಯಪ್ರದೇಶ ಘಟಕದ ಅಧ್ಯಕ್ಷ ವಿ.ಡಿ. ಶರ್ಮಾ ಅವರನ್ನು ಬದಲಿಸುವ ಇರಾದೆಯನ್ನು ಬಿಜೆಪಿ ಹೈಕಮಾಂಡ್ ಹೊಂದಿದೆ. ಆದರೆ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರನ್ನು ಕರ್ನಾಟಕದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

'ಬಂಡೀಪುರದೆಡೆಗೆ ನಮ್ಮ ನಡಿಗೆ' ಪಾದಯಾತ್ರೆ

'ರಾತ್ರಿ ವಾಹನ ಸಂಚಾರವನ್ನು ನಿಲ್ಲಿಸಿ'

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): 'ಬಂಡೀಪುರ ಹುಲಿ ಸಂರಕ್ಷಿತ ಅರಣ್ಯದೊಳಗಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾತ್ರಿ ವಾಹನ ಸಂಚಾರಕ್ಕೆ ಅನುಮತಿ ನೀಡಬಾರದು' ಎಂದು ಒತ್ತಾಯಿಸಿ ಭಾನುವಾರ ಪರಿಸರವಾದಿಗಳ ನೇತೃತ್ವದಲ್ಲಿ 'ಬಂಡೀಪುರದೆಡೆಗೆ ನಮ್ಮ ನಡಿಗೆ' ಪಾದಯಾತ್ರೆ ನಡೆಯಿತು.

ದಲಿತ, ರೈತ, ಪ್ರಗತಿಪರ, ಕನ್ನಡಪರ ಸಂಘಟನೆಗಳು ಹಾಗೂ ಹಲವು ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

'ಮೂಕಪ್ರಾಣಿಗಳಿಗೆ ದನಿಯಾಗೋಣ', 'ಬಂಡೀಪುರದಲ್ಲಿ ರಾತ್ರಿ ಸಂಚಾರ ಬೇಡವೇ ಬೇಡ', 'ಬಂಡೀಪುರ ಉಳಿಸಿ' ಎಂಬಿತ್ಯಾದಿ ವನ್ಯಜೀವಿಗಳ ಸಂರಕ್ಷಣೆಯ ಮಹತ್ವ ಸಾರುವ ಪೋಸ್ಟರ್‌ಗಳನ್ನು ಹಿಡಿದು 700ಕ್ಕೂ ಹೆಚ್ಚು ಪರಿಸರಪ್ರಿಯರು ಹೆಜ್ಜೆ ಹಾಕಿದರು. ಕಗ್ಗಳದಹುಂಡಿ ಬಳಿಯಿಂದ ಆರಂಭವಾದ ಪಾದಯಾತ್ರೆ ಮದ್ದೂರು ಚೆಕ್‌ಪೋಸ್ಟ್‌ವರೆಗೂ ಸಾಗಿತು. ಅಲ್ಲಿ ಬಹಿರಂಗ ಸಾರ್ವಜನಿಕ ಸಭೆ ನಡೆಯಿತು.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರ ಅರಣ್ಯದ ಹೆದ್ದಾರಿಯಲ್ಲಿ ರಾತ್ರಿ ವಾಹನ ಸಂಚಾರಕ್ಕೆ ಅನುಮತಿ ನೀಡದಂತೆ ಒತ್ತಾಯಿಸಿ ಭಾನುವಾರ ಪರಿಸರವಾದಿಗಳು 'ಬಂಡೀಪುರದೆಡೆಗೆ ನಮ್ಮ ನಡಿಗೆ' ಪಾದಯಾತ್ರೆ ನಡೆಸಿದರು –ಪ್ರಜಾವಾಣಿ ಚಿತ್ರ

'ಗ್ರೀನ್ ಆಸ್ಕರ್' ಪ್ರಶಸ್ತಿ ಪುರಸ್ಕೃತ ವನ್ಯಜೀವಿ ಛಾಯಾಗ್ರಾಹಕ ಸೇನಾನಿ ಮಾತನಾಡಿ, 'ಜೀವ ವೈವಿಧ್ಯ ಉಳಿದರೆ ಮಾತ್ರ ಮನುಷ್ಯ ಉಳಿಯಬಲ್ಲ ಎಂಬ ಸತ್ಯ ಆಳುವ ಸರ್ಕಾರಗಳು ಅರಿಯಬೇಕು. ಬಂಡೀಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ದಶಕದ ಹಿಂದೆ 15 ನಿಮಿಷಕ್ಕೊಂದು ವಾಹನ ಸಂಚರಿಸುತ್ತಿತ್ತು. ಈಗ 5 ಸೆಕೆಂಡ್‌ಗೊಂದು ವಾಹನ ಓಡಾಡುತ್ತಿದ್ದು, ಸಂಚಾರ ದಟ್ಟಣೆ ಮಿತಿಮೀರಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರಾತ್ರಿ ವಾಹನಗಳ ಸಂಚಾರಕ್ಕೆ ಅನುಮತಿ ನೀಡಿದರೆ ಜೀವವೈವಿಧ್ಯ ನಾಶವಾಗಲಿದೆ. ಪ್ರಾಣಿಗಳ ಪ್ರಾಣಕ್ಕೆ ಸಂಚಕಾರ ಎದುರಾಗಲಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಅರಣ್ಯದೊಳಗೆ ಮಾನವನ ಹಸ್ತಕ್ಷೇಪ ಸಲ್ಲದು. ಅಭಿವೃದ್ಧಿ ಹೆಸರಿನಲ್ಲಿ ವಿಶಾಲವಾದ ರಸ್ತೆ, ಮೇಲ್ಸೇತುವೆಗಳ ನಿರ್ಮಾಣ ಕಾರ್ಯಸಾಧುವಲ್ಲ. ಬಂಡೀಪುರದಲ್ಲಿ ರಾತ್ರಿ ವಾಹನಗಳ ಸಂಚಾರ ನಿರ್ಬಂಧ ಈಗಿರುವಂತೆಯೇ ಮುಂದುವರಿಯಬೇಕು' ಎಂದು ಹೇಳಿದರು.

ಪರಿಸರವಾದಿಗಳಾದ ಕೃಪಾಕರ, ಜೋಸೆಫ್ ಹೂವರ್, ನಾಗಾರ್ಜುನ ಕುಮಾರ್, ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮೊದಲಾದವರು ಭಾಗವಹಿಸಿದ್ದರು.

ಮೈಸೂರಲ್ಲೂ ಪ್ರತಿಭಟನೆ: 'ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಾತ್ರಿ ವೇಳೆ ವಾಹನ ಸಂಚಾರ ನಿಷೇಧ ತೆರವುಗೊಳಿಸಬಾರದು. ಯಥಾಸ್ಥಿತಿ ಕಾಯ್ದುಕೊಳ್ಳಬೇಕು' ಎಂದು ಒತ್ತಾಯಿಸಿ ಮೈಸೂರು ನಗರದಲ್ಲಿ ಗಂಧದಗುಡಿ ಫೌಂಡೇಶನ್ ಹಾಗೂ ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಭಾನುವಾರ ಪ್ರತ್ಯೇಕ ಪ್ರತಿಭಟನೆಗಳು ನಡೆದವು.

ಸ್ಮಾರ್ಟ್ ಮೀಟರ್: ಲಾಭ ಯಾರಿಗೆ?

ಒಂದನೇ ಪುಟದಿಂದ...

ಸ್ಮಾರ್ಟ್ ಮೀಟರ್ ಕುರಿತ ಕೇಂದ್ರ ಸರ್ಕಾರದ ದಾಖಲೆಗಳು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಆದೇಶ ಮತ್ತು ಟೆಂಡರ್ ದಾಖಲೆಗಳು ಈ ಆರೋಪವನ್ನು ಪುಷ್ಟೀಕರಿಸುತ್ತವೆ.

ಸ್ಮಾರ್ಟ್ ಮೀಟರ್ ತಂತ್ರಾಂಶ, ನಿರ್ವಹಣೆ ವ್ಯವಸ್ಥೆ ಪೂರೈಸುವ ಕಂಪನಿಗಳ ಕಾರ್ಯಾನುಭವ ಸಂಬಂಧ ಕೇಂದ್ರವು ನಿಗದಿ ಮಾಡಿದ್ದ ಷರತ್ತುಗಳನ್ನು ಬೆಸ್ಕಾಂ ತೆಗೆದು ಹಾಕಿದೆ. ಜಾಗತಿಕ ಮಟ್ಟದ ಸ್ಪರ್ಧೆಗೆ ಅವಕಾಶ ಇರುವಂತೆ ಟೆಂಡರ್ ಕರೆಯಬೇಕು ಎಂಬ ನಿಯಮವಿದ್ದರೂ ಕರ್ನಾಟಕ ದಲ್ಲಿ ಕಾರ್ಯನಿರ್ವಹಿಸಿದ ಕಂಪನಿಗಳಷ್ಟೇ ಬಿಡ್ ಸಲ್ಲಿಸಬಹುದು ಎಂದೂ ಷರತ್ತಿನಲ್ಲಿ ನಿರ್ಬಂಧ ಹೇರಲಾಗಿತ್ತು. ಈ ಕಾರಣದಿಂದ ಹೊರ ರಾಜ್ಯದ ಕಂಪನಿಗಳು, ಜಾಗತಿಕ ಮಟ್ಟದ ಕಂಪನಿಗಳು ಟೆಂಡರ್‌ನಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ.

ಬಿಡ್‌ಪೂರ್ವ ಸಭೆಯಲ್ಲಿ ಭಾಗಿಯಾಗಿದ್ದ ಕಂಪನಿಗಳದ್ದೂ ಇದೇ ಆರೋಪ. 'ಬಿಡ್‌ಪೂರ್ವ ಸಭೆಯಲ್ಲಿ 10 ಕಂಪನಿಗಳು ಭಾಗವಹಿಸಿದ್ದವು. ಬೆಸ್ಕಾಂ ರೂಪಿಸಿದ್ದ ಟೆಂಡರ್ ನಿಯಮಗಳಲ್ಲಿ ವಿಪರೀತ ನಿರ್ಬಂಧಗಳು ಇದ್ದವು. ಷರತ್ತುಗಳ ಸಂಬಂಧ ಸಭೆಯಲ್ಲಿ 117 ಆಕ್ಷೇಪ ಮತ್ತು ಪ್ರಶ್ನೆಗಳನ್ನು ಕೇಳಲಾಗಿತ್ತು. ಅವುಗಳನ್ನು ಸರಿಪಡಿಸಿದರಷ್ಟೇ ಬಿಡ್‌ನಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ ಎಂದು ಮನವಿ ಮಾಡಿಕೊಂಡಿದ್ದೆವು' ಎಂದು ಬಿಡ್‌ಪೂರ್ವ ಸಭೆಯಲ್ಲಿ ಭಾಗವಹಿಸಿದ್ದ ಬೆಂಗಳೂರಿನ ಕಂಪನಿಯೊಂದರ ವ್ಯವಸ್ಥಾಪಕರು ಆರೋಪಿಸಿದರು.

'ಆದರೆ, ಟೆಂಡರ್ ಷರತ್ತುಗಳಲ್ಲಿ ಬೆಸ್ಕಾಂ ಯಾವುದೇ ಬದಲಾವಣೆ ಮಾಡಿಕೊಳ್ಳಲಿಲ್ಲ. ಹೀಗಾಗಿ ಬಿಡ್‌ಪೂರ್ವ ಸಭೆಯಲ್ಲಿ ಭಾಗಿಯಾಗಿದ್ದ 10 ಕಂಪನಿಗಳಲ್ಲಿ ಯಾವುದಕ್ಕೂ ಗುತ್ತಿಗೆ ಸಿಗಲಿಲ್ಲ. ಸ್ಮಾರ್ಟ್ ಮೀಟರ್ ಅಳವಡಿಕೆಯಲ್ಲಿ ಅನುಭವ ಇಲ್ಲದ ಕಂಪನಿಗೆ ಗುತ್ತಿಗೆ ದೊರೆತಿದೆ' ಎಂದು ಆರೋಪಿಸಿದರು.

* ಗುತ್ತಿಗೆ ಪಡೆದುಕೊಂಡಿರುವ ಕಂಪನಿಯು, ಈ ಗುತ್ತಿಗೆಗೆ ಸಂಬಂಧಿಸಿದಂತೆ ತನ್ನ ಹೆಸರನ್ನು ಉಲ್ಲೇಖಿಸಿ ವರದಿ ಮಾಡಬಾರದು ಎಂದು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದೆ. ಹೀಗಾಗಿ ಆ ಕಂಪನಿಯನ್ನು ಗುತ್ತಿಗೆ ಪಡೆದುಕೊಂಡ ದಾವಣಗೆರೆಯ ಕಂಪನಿ ಎಂದೇ ಉಲ್ಲೇಖಿಸಲಾಗಿದೆ.

ಬಯಲಿನಲ್ಲಿಯೇ ಮರಣೋತ್ತರ ಪರೀಕ್ಷೆ?

ಒಂದನೇ ಪುಟದಿಂದ...

'ಸರ್ಕಾರಿ ಆಸ್ಪತ್ರೆ ಸಿಬ್ಬಂದಿ ಶವವನ್ನು ಆಸ್ಪತ್ರೆಗೆ ಸಾಗಿಸುವ ಮತ್ತು ತರುವ ವೆಚ್ಚ ಜೊತೆಗೆ, ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಪ್ಯಾಕ್ ಮಾಡಲು ಬಿಳಿ ಬಟ್ಟೆ ಮತ್ತು ಇತರ ವಸ್ತುಗಳನ್ನು ತರಬೇಕೆಂದು ಒತ್ತಾಯಿಸುತ್ತಿದ್ದಾರೆ' ಎಂದು ಗ್ರಾಮೀಣ ಪ್ರದೇಶದ ಜನರು ದೂರುತ್ತಾರೆ.

ಆದರೆ ಆರೋಗ್ಯ ಆಯುಕ್ತ ಶಿವಕುಮಾರ್ ಕೆ. ಬಿ. ಅವರು, 'ಅಂತಹ ಯಾವುದೇ ಘಟನೆ ವರದಿಯಾಗಿಲ್ಲ. ಆದಾಗ್ಯೂ, ಅಸ್ವಾಭಾವಿಕ ಸಾವುಗಳ ಮರಣೋತ್ತರ ಪರೀಕ್ಷೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ನಡೆಸಲಾಗುತ್ತದೆ' ಎನ್ನುತ್ತಾರೆ.

'ಕಿತ್ತೂರು-ಕರ್ನಾಟಕ, ಮಧ್ಯ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿನ 15 ಜಿಲ್ಲೆಗಳಲ್ಲಿ (24X7 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ಒಟ್ಟು 790 ಪ್ರಾಥಮಿಕ ಆರೋಗ್ಯ ಕೇಂದ್ರ) ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸುವ 215 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ' ಎಂದು ಅವರು ತಿಳಿಸಿದರು.

ಇಂಡಿಯನ್ ಪ್ರೀಮಿಯರ್ ಲೀಗ್ 2025

ಮುಂಬೈಗೆ ಬೆಂಗಳೂರು ಚಾಲೆಂಜ್

ಪಾಂಡ್ಯ ಪಡೆಗೆ ಪಾಟೀದಾರ್ ಬಳಗದ ಸವಾಲು ಇಂದು

ಲಯಕ್ಕೆ ಮರಳುವತ್ತ ಆರ್‌ಸಿಬಿಯ ವಿರಾಟ್ ಕೊಹ್ಲಿ ಚಿತ್ತ

ಪಾಟೀದಾರ್

ಮುಂಬೈ (ಪಿಟಿಐ): ರಜತ್ ಪಾಟೀದಾರ್ ನಾಯಕತ್ವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐದು ಸಲ ಐಪಿಎಲ್ ಟ್ರೋಫಿ ಜಯಿಸಿರುವ ಮುಂಬೈ ಇಂಡಿಯನ್ಸ್ ತಂಡವನ್ನು ಸೋಮವಾರ ಎದುರಿಸಲಿದೆ.

ಆತಿಥೇಯ ತಂಡವು ಇದುವರೆಗೆ ಆಡಿರುವ ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಸೋತಿದೆ. ಅಲ್ಲದೇ ಬ್ಯಾಟಿಂಗ್ ವಿಭಾಗದಲ್ಲಿ ಇರುವ ಆಟಗಾರರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡುತ್ತಿಲ್ಲ. ಇದರಿಂದಾಗಿ ತಂಡಕ್ಕೆ ಹಿನ್ನಡೆಯಾಗುತ್ತಿದೆ. ಈ ಪರಿಸ್ಥಿತಿಯ ಲಾಭ ಪಡೆದು ಜಯ ಸಾಧಿಸುವತ್ತ ಆರ್‌ಸಿಬಿ ಚಿತ್ತ ನೆಟ್ಟಿದೆ. ಇದೀಗ ಗಾಯದಿಂದ ಚೇತರಿಸಿಕೊಂಡಿರುವ ವೇಗಿ ಜಸ್‌ಪ್ರೀತ್ ಬೂಮ್ರಾ ಮುಂಬೈ ತಂಡಕ್ಕೆ ಮರಳಿದ್ದಾರೆ. ಅವರು ಪಂದ್ಯದಲ್ಲಿ ಆಡುವುದು ಬಹುತೇಕ ಖಚಿತ. ಅವರು ಕಣಕ್ಕಿಳಿದರೆ ಮುಂಬೈ ಬೌಲಿಂಗ್ ಪಡೆಯ ಬಲ ಮತ್ತಷ್ಟು ಹೆಚ್ಚಲಿದೆ. ಅವರನ್ನು ಎದುರಿಸಲು ಬೆಂಗಳೂರು ತಂಡದ ಬ್ಯಾಟರ್‌ಗಳು ಸಿದ್ಧರಾಗಬೇಕಿದೆ.

ರಜತ್ ಬಳಗವು ಟೂರ್ನಿಯಲ್ಲಿ ಆಡಿದ ಮೊದಲೆರಡೂ ಪಂದ್ಯಗಳಲ್ಲಿ ಜಯಿಸಿತ್ತು. ಆದರೆ ಈಚೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಮೂರನೇ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಎದುರು ಮುಗ್ಗರಿಸಿತ್ತು. ಅದರಿಂದಾಗಿ ಜಯದ ಹಾದಿಗೆ ಮರಳುವ ಒತ್ತಡವೂ ತಂಡದ ಮೇಲೆ ಇದೆ. ತಂಡದ ಬ್ಯಾಟಿಂಗ್ ವಿಭಾಗದಲ್ಲಿ ಸ್ಫೋಟಕ ಮತ್ತು ಅನುಭವಿ ಬ್ಯಾಟ-ರ್‌ಗಳಿದ್ದಾರೆ. ಆದರೆ ಬೆಂಗಳೂರಿನಲ್ಲಿ ಗುಜರಾತ್ ಬೌಲರ್‌ಗಳ ಎದುರು ಅಗ್ರಕ್ರಮಾಂಕದ ಬ್ಯಾಟರ್‌ಗಳು ವಿಫಲರಾಗಿದ್ದರು.

ಅನುಭವಿ ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್, ನಾಯಕ ರಜತ್, ದೇವದತ್ತ ಪಡಿಕ್ಕಲ್ ತಮ್ಮ ಲಯಕ್ಕೆ ಮರಳಿದರೆ ದೊಡ್ಡ ಮೊತ್ತ ಗಳಿಸುವುದು ಸುಲಭವಾಗಲಿದೆ. ಮಧ್ಯಮ ಕ್ರಮಾಂಕದಲ್ಲಿ ಜಿತೇಶ್ ಶರ್ಮಾ, ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಟಿಮ್ ಡೇವಿಡ್ ಅವರ ಮೇಲೆ ವಿಶ್ವಾಸವಿಡಬಹುದು. ಬೆಂಗಳೂರಿನ ಪಂದ್ಯದಲ್ಲಿಯೂ ಈ ಮೂವರು ಆಟಗಾರರೇ ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಪ್ಪಿಸಿದ್ದರು. ಮುಂಬೈ ತಂಡದ ನಾಯಕ ಹಾರ್ದಿಕ್ ಕಳೆದ ಪಂದ್ಯದಲ್ಲಿ ಐದು ವಿಕೆಟ್ ಗಳಿಸಿದ್ದರು. ಅದೇ ಲಯ ಇಲ್ಲಿಯೂ ಮುಂದುವರಿಸುವ ಛಲದಲ್ಲಿದ್ದಾರೆ. ಸ್ಪಿನ್ನರ್ ವಿಘ್ನೇಶ್ ಪುತ್ತೂರ್, ವೇಗಿ ಅಶ್ವಿನಿ ಕುಮಾರ್ ಅವರೂ ಪರಿಣಾಮಕಾರಿಯಾಗಿದ್ದಾರೆ.

ಆರ್‌ಸಿಬಿ ಬೌಲಿಂಗ್‌ನಲ್ಲಿ ಜೋಷ್ ಹ್ಯಾಜಲ್‌ವುಡ್, ಭುವನೇಶ್ವರ್ ಕುಮಾರ್, ಯಶ್ ದಯಾಳ್ ಮತ್ತು ಸ್ಪಿನ್ನರ್ ಕೃಣಾಲ್ ಪಾಂಡ್ಯ ಅವರ ಮುಂದೆ ಮುಂಬೈ ತಂಡದ ಯಶಸ್ವಿ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರನ್ನು ಕಟ್ಟಿಹಾಕುವ ಸವಾಲು ಇದೆ. ಇದುವರೆಗೆ ಟೂರ್ನಿಯಲ್ಲಿ ಒಟ್ಟು 171 ರನ್ ಸೇರಿಸುವ ಸೂರ್ಯ ಉತ್ತಮ ಲಯದಲ್ಲಿದ್ದಾರೆ. ರೋಹಿತ್ ಶರ್ಮಾ ಗಾಯದ ಕಾರಣದಿಂದಾಗಿ ಕಳೆದ ಪಂದ್ಯದಲ್ಲಿ ಆಡಿರಲಿಲ್ಲ. ಈ ಪಂದ್ಯಕ್ಕೆ ಮರಳುವುದೂ ಅನುಮಾನ. ತಿಲಕ್ ವರ್ಮಾ, ರಿಯಾನ್ ರಿಕೆಲ್ಟನ್, ನಮನ್ ಧೀರ್ ಅವರು ಕಳೆದ ಪಂದ್ಯಗಳಲ್ಲಿ ರನ್‌ಗಳನ್ನು ಗಳಿಸಿದ್ದಾರೆ. ಆದರೆ ತಂಡವನ್ನು ಗೆಲುವಿನ ದಡ ಸೇರಿಸುವ ಸಾಮರ್ಥ್ಯವನ್ನು ತೋರಬೇಕಿದೆ. ಉಭಯ ತಂಡಗಳಿಗೂ ಜಯದ ಹಳಿಗೆ ಮರಳುವ ಛಲ ಇರುವುದರಿಂದ ರೋಚಕ ಹಣಾಹಣಿಯ ನಿರೀಕ್ಷೆ ಗರಿಗೆದರಿದೆ. ಅಲ್ಲದೇ ಹೋದ ವರ್ಷ ಇಲ್ಲಿಯೇ ನಡೆದಿದ್ದ ಪಂದ್ಯದಲ್ಲಿ ಮುಂಬೈ ಎದುರು ಸೋತಿದ್ದ ಆರ್‌ಸಿಬಿ ಮುಯ್ಯಿ ತೀರಿಸಿಕೊಳ್ಳುವ ತವಕದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಮುಂಬೈ ಇಂಡಿಯನ್ಸ್ ತಂಡದ ಸೂರ್ಯಕುಮಾರ್ ಯಾದವ್, ನಾಯಕ ಹಾರ್ದಿಕ್ ಪಾಂಡ್ಯ ಮತ್ತು ರೋಹಿತ್ ಶರ್ಮಾ –ಪಿಟಿಐ ಚಿತ್ರ

ಬೂಮ್ರಾ ಕಣಕ್ಕಿಳಿಯುವ ನಿರೀಕ್ಷೆ

ಅಗ್ರಮಾನ್ಯ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಗಾಯದಿಂದ ಚೇತರಿಸಿಕೊಂಡಿದ್ದಾರೆ. ಐಪಿಎಲ್‌ನಲ್ಲಿ ಅವರು ಮುಂಬೈ ತಂಡಕ್ಕೆ ಮರಳಿದ್ದು, ಆರ್‌ಸಿಬಿ ಎದುರಿನ ಪಂದ್ಯದಲ್ಲಿ ಕಣಕ್ಕಿಳಿಯುವುದು ಬಹುತೇಕ ಖಚಿತ. ಈಚೆಗೆ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಕೊನೆಯ ಪಂದ್ಯದಲ್ಲಿ ಅವರು ಬೆನ್ನುನೋವಿನಿಂದಾಗಿ ತಂಡದಿಂದ ಹೊರ ನಡೆದಿದ್ದರು. ಅವರು ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿಯೂ ಆಡಿರಲಿಲ್ಲ.

‘ಬೂಮ್ರಾ ತಂಡಕ್ಕೆ ಮರಳಿದ್ದಾರೆ. ಅವರು ಇವತ್ತು ಅಭ್ಯಾಸ ಮಾಡಿದ್ದಾರೆ’ ಎಂದು ಮುಂಬೈ ಇಂಡಿಯನ್ಸ್ ಮುಖ್ಯ ಕೋಚ್ ಮಹೇಲ ಜಯವರ್ಧನೆ ಹೇಳಿದ್ದಾರೆ. ‘ರೋಹಿತ್ ಶರ್ಮಾ ಕೂಡ ಚೇತರಿಸಿಕೊಂಡಿದ್ದಾರೆ. ಅವರ ಕಾಲಿನ ಗಾಯದ ಕುರಿತು ವೈದ್ಯಕೀಯ ತಂಡ ಅವಲೋಕಿಸಲಿದೆ’ ಎಂದರು.

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಡಿಸಿ	3	3	0	6	1.257
2	ಜಿಟಿ	4	3	1	6	1.031
3	ಆರ್‌ಸಿಬಿ	3	2	1	4	1.149
4	ಪಿಬಿಕೆಎಸ್	3	2	1	4	0.074
5	ಕೆಕೆಆರ್	4	2	2	4	0.070
6	ಎಲ್‌ಎಸ್‌ಜಿ	4	2	2	4	0.048
7	ಆರ್‌ಆರ್	4	2	2	4	-0.185
8	ಎಂಐ	4	1	3	2	0.108
9	ಸಿಎಸ್‌ಕೆ	3	1	2	2	-0.891
10	ಎಸ್‌ಆರ್‌ಎಚ್	5	1	4	2	-1.629

ಆರೆಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 201 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 10 ವಿಕೆಟ್

ನಾಯಕ ಗಿಲ್ ಅರ್ಧಶತಕ: ಗುಜರಾತ್‌ಗೆ ಸುಲಭ ಜಯ

ಸಿರಾಜ್ ಬಿರುಗಾಳಿಗೆ ಸನ್ ಸ್ತಬ್ಧ

ಹೈದರಾಬಾದ್ (ಪಿಟಿಐ): ವೇಗಿ ಮೊಹಮ್ಮದ್ ಸಿರಾಜ್ (17ಕ್ಕೆ4) ಅವರ ಪರಿಣಾಮಕಾರಿ ದಾಳಿಯ ಬಳಿಕ ನಾಯಕ ಶುಭಮನ್ ಗಿಲ್ (ಔಟಾಗದೇ 61; 43ಎ, 4x9)) ಅವರ ಅರ್ಧಶತಕದ ನೆರವಿನಿಂದ ಗುಜರಾತ್ ಟೈಟನ್ಸ್ ತಂಡವು ಐಪಿಎಲ್‌ನ ಭಾನುವಾರದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಏಳು ವಿಕೆಟ್‌ಗಳ ಸುಲಭ ಜಯ ಸಾಧಿಸಿತು.

2022ರ ಆವೃತ್ತಿಯ ಚಾಂಪಿಯನ್ ಗುಜರಾತ್ ಹ್ಯಾಟ್ರಿಕ್ ಗೆಲುವಿನೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಏರಿತು. ಮತ್ತೊಂದೆಡೆ ಸತತ ನಾಲ್ಕು ಪಂದ್ಯಗಳನ್ನು ಸೋತ ಹಾಲಿ ರನ್ನರ್ಸ್ ಅಪ್ ತಂಡವು ಕೊನೆಯ ಸ್ಥಾನದಲ್ಲಿ ಮುಂದುವರಿಯಿತು.

ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 152 ರನ್ ಗಳಿಸಿತ್ತು. ಗುರಿಯನ್ನು ಬೆನ್ನಟ್ಟಿದ ಗುಜರಾತ್ 20 ಎಸೆತಗಳು ಇರುವಂತೆ ಮೂರು ವಿಕೆಟ್‌ಗೆ 153 ರನ್ ಗಳಿಸಿ ಸಂಭ್ರಮಿಸಿತು.

ಗುಜರಾತ್ ತಂಡದ ಆರಂಭವೂ ಉತ್ತಮವಾಗಿರಲಿಲ್ಲ. 16 ರನ್ ಗಳಿಸುವಷ್ಟರಲ್ಲಿ ಸಾಯಿ ಸುದರ್ಶನ್ (5) ಮತ್ತು ಜೋಸ್ ಬಟ್ಲರ್ ಅವರು ಪೆವಿಲಿಯನ್ ಸೇರಿದರು. ಆದರೆ, ಮತ್ತೊಂದೆಡೆ ತಾಳ್ಮೆಯಿಂದ ಆಡಿದ ಗಿಲ್ ಮೂರನೇ ವಿಕೆಟ್ ಜೊತೆಯಾಟದಲ್ಲಿ ವಾಷಿಂಗ್ಟನ್ ಸುಂದರ್ (49;29ಎ, 4x5, 6x2) ಅವರೊಂದಿಗೆ 90 (56ಎ) ರನ್ ಸೇರಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ವಾಷಿಂಗ್ಟನ್ ಔಟಾದ ಬಳಿಕ ಗಿಲ್ ಅವರನ್ನು ಸೇರಿಕೊಂಡ ಶೆರ್ಫೇನ್ ರುದರ್‌ಫೋರ್ಡ್ (ಔಟಾಗದೇ 35;16ಎ, 4x6, 6x1) ಅವರು ಮುರಿಯದ ನಾಲ್ಕನೇ ವಿಕೆಟ್‌ಗೆ 47 (21ಎ) ರನ್ ಸೇರಿಸಿದರು.

ಮಿಂಚಿದ ಸಿರಾಜ್: ಇದಕ್ಕೂ ಮೊದಲು ಟಾಸ್ ಗೆದ್ದ ಗುಜರಾತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇದರ ಲಾಭ ಪಡೆದ ಸಿರಾಜ್ ತಮ್ಮ ತವರೂರಿನ ಅಂಗಳದಲ್ಲಿ ಮಿಂಚಿದರು. ಸಿರಾಜ್ ಬಿರುಗಾಳಿ ವೇಗದ ಬೌಲಿಂಗ್‌ನಿಂದ ಸನ್‌ರೈಸರ್ಸ್ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು.

ಮೊದಲ ಓವರ್‌ನಲ್ಲಿಯೇ ಸಿರಾಜ್ ಎಸೆತ ಆಡುವ ಭರದಲ್ಲಿ ಟ್ರಾವಿಸ್ ಹೆಡ್ (8) ಅವರು ಸಾಯಿ ಸುದರ್ಶನ್‌ಗೆ ಕ್ಯಾಚ್ ಆದರು. ಟೂರ್ನಿಯ ಆರಂಭದಿಂದಲೂ ವೈಫಲ್ಯ ಅನುಭವಿಸಿದ್ದ ಅಭಿಷೇಕ್ ಶರ್ಮಾ (18; 16ಎ) ತಾಳ್ಮೆಯಿಂದ ಆಡಿ ಆಟಕ್ಕೆ ಕುದುರಿಕೊಳ್ಳುವ ಪ್ರಯತ್ನ ಮಾಡಿದರು. ಅವರೊಂದಿಗೆ ಇಶಾನ್ ಕಿಶನ್ (17; 14ಎ) ಕೂಡ ಇನಿಂಗ್ಸ್‌ಗೆ ಬಲ ತುಂಬಲು ಯತ್ನಿಸಿದರು. ಅಭಿಷೇಕ್ ಅವರ ವಿಕೆಟ್ ಪಡೆದು ಈ ಜೊತೆಯಾಟವನ್ನೂ ಸಿರಾಜ್ ಮುರಿದರು.

8ನೇ ಓವರ್‌ನಲ್ಲಿ ಕನ್ನಡಿಗ ಪ್ರಸಿದ್ಧಕೃಷ್ಣ ಹಾಕಿದ ಎಸೆತಕ್ಕೆ ಇಶಾನ್ ಕ್ಲೀನ್‌ಬೌಲ್ಡ್ ಆದರು. ಈ ಹಂತದಲ್ಲಿ ಜೊತೆಗೂಡಿದ ನಿತೀಶ್ ರೆಡ್ಡಿ (31; 34ಎ, 4X3) ಮತ್ತು ಹೆನ್ರಿಚ್ ಕ್ಲಾಸನ್ (27; 19ಎ, 4X2, 6X1) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು. ಆದರೆ ಸನ್‌ರೈಸರ್ಸ್ ತಂಡದ ಹೆಗ್ಗುರುತಾದ ಬೀಸಾಟದ ಛಾಯೆ ಕಾಣಲಿಲ್ಲ. ತಂಡವು 100ರ ಗಡಿ ಮುಟ್ಟಿದಾಗ 14 ಓವರ್ ಅಂತ್ಯವಾಗಿತ್ತು. ಕೊನೆಯ ಹಂತದಲ್ಲಿ ನಾಯಕ ಕಮಿನ್ಸ್ (22; 9ಎಸೆತ) ಆರ್ಭಟಿಸಿದರು. 3 ಬೌಂಡರಿ ಮತ್ತು 1 ಸಿಕ್ಸರ್ ಬಾರಿಸಿದರು.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 8ಕ್ಕೆ152 (ನಿತೀಶ್ ಕುಮಾರ್ ರೆಡ್ಡಿ 31, ಹೆನ್ರಿಚ್ ಕ್ಲಾಸನ್ 27, ಪ್ಯಾಟ್ ಕಮಿನ್ಸ್ ಔಟಾಗದೇ 22, ಅನಿಕೇತ್ ವರ್ಮಾ 18, ಮೊಹಮ್ಮದ್ ಸಿರಾಜ್ 17ಕ್ಕೆ4, ಪ್ರಸಿದ್ಧಕೃಷ್ಣ 25ಕ್ಕೆ2, ಸಾಯಿಕಿಶೋರ್ 24ಕ್ಕೆ2). **ಗುಜರಾತ್ ಟೈಟನ್ಸ್:** 16.4 ಓವರ್‌ಗಳಲ್ಲಿ 3ಕ್ಕೆ 153 (ಶುಭಮನ್ ಗಿಲ್ ಔಟಾಗದೇ 61, ವಾಷಿಂಗ್ಟನ್ ಸುಂದರ್ 49, ಶೆರ್ಫೇನ್ ರುದರ್‌ಫೋರ್ಡ್ ಔಟಾಗದೇ 35; ಮೊಹಮ್ಮದ್ ಶಮಿ 28ಕ್ಕೆ 2). **ಫಲಿತಾಂಶ:** ಗುಜರಾತ್ ಟೈಟನ್ಸ್‌ಗೆ ಏಳು ವಿಕೆಟ್ ಜಯ. **ಪಂದ್ಯದ ಆಟಗಾರ:** ಮೊಹಮ್ಮದ್ ಸಿರಾಜ್

ವಿಕೆಟ್ ಗಳಿಸಿದ ಮೊಹಮ್ಮದ್ ಸಿರಾಜ್ (ಬಲದಿಂದ ಮೊದಲನೆಯವರು) ಅವರನ್ನು ನಾಯಕ ಶುಭಮನ್ ಗಿಲ್, ಸಾಯಿಕಿಶೋರ್, ರಶೀದ್ ಖಾನ್ ಹಾಗೂ ಪ್ರಸಿದ್ಧಕೃಷ್ಣ ಅವರು ಅಭಿನಂದಿಸಿದರು –ಎಎಫ್‌ಪಿ ಚಿತ್ರ

ಸಿರಾಜ್ ‘ಶತಕ’

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮೊಹಮ್ಮದ್ ಸಿರಾಜ್ ಅವರು 100 ವಿಕೆಟ್ ಗಳಿಸಿದ ಸಾಧನೆ ಮಾಡಿದರು. 97 ಪಂದ್ಯಗಳಲ್ಲಿ ಈ ಸಾಧನೆ ಮಾಡಿದರು

ಸಂಕ್ಷಿಪ್ತ ಸುದ್ದಿ

ಆರ್ಚರಿ: ಆನ್ಯಾ ವರ್ಮಾಗೆ ಚಿನ್ನ

ಬೆಂಗಳೂರು: ನಗರದ ಆನ್ಯಾ ವರ್ಮಾ ಈಚೆಗೆ ಗುಂಟೂರಿನಲ್ಲಿ ನಡೆದ ರಾಷ್ಟ್ರೀಯ ಆರ್ಚರಿ ಸ್ಪರ್ಧೆಯಲ್ಲಿ ಒಂದು ಚಿನ್ನ ಮತ್ತು ಬೆಳ್ಳಿ ಪದಕ ಗಳಿಸಿದ್ದಾಳೆ.

ಎಂಟು ವರ್ಷ ವಯಸ್ಸಿನ ಆನ್ಯಾ ರಿಕರ್ವ್ ರ್‍ಯಾಂಕಿಂಗ್ (10 ವರ್ಷ ದೊಳಗಿನವರು) ವಿಭಾಗದಲ್ಲಿ 360ರಲ್ಲಿ 352 ಅಂಕ ಗಳಿಸುವುದರೊಂದಿಗೆ, ರಾಷ್ಟ್ರೀಯ ದಾಖಲೆ ನಿರ್ಮಿಸಿದಳು. ರಿಕರ್ವ್ ಎಲಿಮಿನೇಷನ್ ವಿಭಾಗದಲ್ಲಿ ಬೆಳ್ಳಿ ಗೆದ್ದಳು.

ಬೆಂಗಳೂರಿನ ಪಿ.ಕೆ.ಎಸ್. ಶಾಲೆಯಲ್ಲಿ ಆನ್ಯಾ 3ನೇ ತರಗತಿಯಲ್ಲಿ ಓದುತ್ತಿದ್ದಾಳೆ. ಬೆಂಗಳೂರು ಆರ್ಚರಿ ಕ್ಲಬ್‌ನ ಎಂ. ಸುಭಾಷ್ ಮತ್ತು ರಾಜೇಶ್ ಕುಮಾರ್ ಅವರು ತರಬೇತಿ ನೀಡುತ್ತಿದ್ದಾರೆ. ಆನ್ಯಾ ಅವರ ಸಾಧನೆಗೆ ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ)ಗಳು ತಲಾ ₹ 10 ಸಾವಿರ ಪುರಸ್ಕಾರ ನೀಡಿವೆ ಎಂದು ಆರ್ಚರಿ ಸಂಸ್ಥೆಯ ಕಾರ್ಯದರ್ಶಿ ಟಿ. ಅನಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಥ್ಲೆಟಿಕ್ಸ್: ಗ್ಯಾಬಿ ಪ್ರಥಮ

ಕಿಂಗ್‌ಸ್ಟನ್ (ಎಎಫ್‌ಪಿ): ಒಲಿಂಪಿಕ್ ಚಾಂಪಿಯನ್ ಗ್ಯಾಬಿ ಥಾಮಸ್ ಶನಿವಾರ ಇಲ್ಲಿ ನಡೆದ ಗ್ರ್ಯಾನ್‌ಸ್ಲಾಂ ಟ್ರ್ಯಾಕ್ ಸೀರಿಸ್‌ನ ಮಹಿಳೆಯರ 200 ಮೀ ಓಟದಲ್ಲಿ ಜಯಿಸಿದರು. ಅವರು 400 ಮೀ ಓಟದಲ್ಲಿ ಎರಡನೇ ಸ್ಥಾನ ಪಡೆದರು. ಇದರೊಂದಿಗೆ ಜಾಕ್‌ಪಾಟ್ (1 ಲಕ್ಷ ಡಾಲರ್) ಗಳಿಸಿದರು.

ನ್ಯಾಷನಲ್ ಕ್ರೀಡಾಂಗಣದಲ್ಲಿ ಅವರು 49.14ಸೆಕೆಂಡುಗಳಲ್ಲಿ 200 ಮೀ ಓಟದ ಗುರಿ ಮುಟ್ಟಿದರು. ಬಹರೇನ್‌ನ ಸಲ್ವಾ ಈದ ನಾಸಿರ್ 48.67 ಸೆಕೆಂಡುಗಳಲ್ಲಿ ಗುರಿ ತಲುಪಿ ಎರಡನೇ ಸ್ಥಾನ ಪಡೆದರು.

ವಿಶ್ವ ಬಾಕ್ಸಿಂಗ್ ಕಪ್: ಭಾರತಕ್ಕೆ 6 ಪದಕ

ನವದೆಹಲಿ (ಪಿಟಿಐ): ಭಾರತ ಬಾಕ್ಸಿಂಗ್ ತಂಡವು ಬ್ರೆಜಿಲ್‌ನ ಇಗವಾಕು ನಗರದಲ್ಲಿ ನಡೆದ ವಿಶ್ವ ಬಾಕ್ಸಿಂಗ್ ಕಪ್ ಟೂರ್ನಿಯಲ್ಲಿ ಒಂದು ಚಿನ್ನ ಸೇರಿ ಒಟ್ಟು ಆರು ಪದಕಗಳೊಂದಿಗೆ ಅಭಿಯಾನ ಮುಗಿಸಿತು.

ಟೂರ್ನಿಯಲ್ಲಿ ಹಿತೇಶ್ ಚಿನ್ನ ಗೆದ್ದ ಮೊದಲ ಭಾರತೀಯ ಬಾಕ್ಸರ್ ಎಂಬ ಗೌರವಕ್ಕೆ ಪಾತ್ರರಾದರು. ಶನಿವಾರ 70 ಕೆಜಿ ವಿಭಾಗದ ಫೈನಲ್‌ನಲ್ಲಿ ಅವರ ಎದುರಾಳಿ ಇಂಗ್ಲೆಂಡ್‌ನ ಒಡೆಲ್ ಕಾಮಾರಾ ಗಾಯಾಳಾಗಿದ್ದರಿಂದ ಸ್ಪರ್ಧೆಯಿಂದ ಹಿಂದೆ ಸರಿದರು. ಭಾರತದ ಇನ್ನೊಬ್ಬ ಬಾಕ್ಸರ್ ಅಭಿನಾಶ್ ಜಾಮವಾಲ್ 65 ಕೆ.ಜಿ.ವಿಭಾಗದಲ್ಲಿ ಬೆಳ್ಳಿ ಪದಕ ಗಳಿಸಿದರು. ಜಾದುಮಣಿ, ಮನೀಶ್ ರಾಥೋಡ್, ಸಚಿನ್ ಮತ್ತು ವಿಶಾಲ್ (90ಕೆ.ಜಿ) ಕಂಚು ಗೆದ್ದಿದ್ದರು.

ಎಸ್‌.ಎಂ. ಕೃಷ್ಣ ಸ್ಮರಣಾರ್ಥ ಓಪನ್ ಐಟಿಎಫ್ ಟೆನಿಸ್

ಕ್ರಾಫರ್ಡ್‌ಗೆ ಸಿಂಗಲ್ಸ್ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಶ್ರೇಯಾಂಕದ ಒಲಿವರ್ ಕ್ರಾಫರ್ಡ್ ಅವರು ಎಸ್‌.ಎಂ. ಕೃಷ್ಣ ಸ್ಮರಣಾರ್ಥ ಓಪನ್ ಐಟಿಎಫ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು.

ಕಬ್ಬನ್ ಪಾರ್ಕ್‌ನಲ್ಲಿರುವ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಎಸ್‌.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಭಾನುವಾರ ಮುಕ್ತಾಯಗೊಂಡ ಐಟಿಎಫ್ ಎಂ25 ಟ್ರೋಫಿ ಟೂರ್ನಿಯ ಫೈನಲ್‌ನಲ್ಲಿ ಬ್ರಿಟನ್‌ನ 25 ವರ್ಷ ವಯಸ್ಸಿನ ಕ್ರಾಫರ್ಡ್ 5-2 ಗೇಮ್‌ಗಳ ಮುನ್ನಡೆಯಲ್ಲಿದ್ದಾಗ ಅಗ್ರಶ್ರೇಯಾಂಕದ ಜೇ ಕ್ಲಾರ್ಕ್ ಗಾಯಾಳಾಗಿ ಸ್ಪರ್ಧೆಯಿಂದ ಹಿಂದೆ ಸರಿದರು.

ಒಟ್ಟು ₹25.67 ಲಕ್ಷ ಬಹುಮಾನ ಮೊತ್ತವನ್ನು ಒಳಗೊಂಡಿದ್ದ ಟೂರ್ನಿಯಲ್ಲಿ ಪ್ರಶಸ್ತಿ ವಿಜೇತ ಕ್ರಾಫರ್ಡ್ ₹3.94 ಲಕ್ಷ ಬಹುಮಾನದೊಂದಿಗೆ 25 ಎಟಿಪಿ ಪಾಯಿಂಟ್ಸ್‌ಗಳನ್ನು ತನ್ನದಾಗಿಸಿಕೊಂಡರು. ಕ್ರಾಫರ್ಡ್‌ಗೆ ಇದು ಸತತ ಮೂರನೇ ಐಟಿಎಫ್ ಎಂ25 ಟ್ರೋಫಿ ಮತ್ತು ಋತುವಿನ ಒಟ್ಟಾರೆ ನಾಲ್ಕನೇ ಪ್ರಶಸ್ತಿಯಾಗಿದೆ.

26 ವರ್ಷ ವಯಸ್ಸಿನ ಕ್ಲಾರ್ಕ್ ಕಳೆದ ಎಂಟು ವಾರಗಳಿಂದ ಭಾರತ ಪ್ರವಾಸದಲ್ಲಿದ್ದು, ಈ ವೇಳೆ ಸತತ ನಾಲ್ಕು ಟೂರ್ನಿಗಳಲ್ಲಿ ಫೈನಲ್ ತಲುಪಿದ್ದರು. ಮಾನಸಿಕವಾಗಿ ಮತ್ತು ದೈಹಿಕವಾಗಿ ದಣಿದಿದ್ದ ಅವರು, ಬಲಗಾಲಿನ ನೋವಿನೊಂದಿಗೆ ಪ್ರಶಸ್ತಿ ಸುತ್ತಿನಲ್ಲಿ ಕಣಕ್ಕೆ ಇಳಿದಿದ್ದರು.

ಇದು ಬ್ರಿಟನ್ ಆಟಗಾರರ ಸೆಣಸಾಟವಾಗಿತ್ತು. ವಿಶ್ವ ರ್‍ಯಾಂಕಿಂಗ್‌ನಲ್ಲಿ 277 ಸ್ಥಾನ ಹೊಂದಿದ್ದ ಕ್ಲಾರ್ಕ್‌ನ ಪ್ರಶಸ್ತಿ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದರು. ಆದರೆ, 293ನೇ ಕ್ರಮಾಂಕದ ಕ್ರಾಫರ್ಡ್ ಅವರ ಚುರುಕಿನ ಆಟದ ಎದುರು ಕ್ಲಾರ್ಕ್ ನಿರುತ್ತರರಾದರು. ಮೊದಲ ಸೆಟ್‌ನಲ್ಲಿ 2-5 ಹಿನ್ನಡೆಯಲ್ಲಿದ್ದಾಗ ಕ್ಲಾರ್ಕ್ ನಿವೃತ್ತಿ ಪಡೆದರು.

ವೃತ್ತಿಜೀವನದಲ್ಲಿ ಕ್ಲಾರ್ಕ್ ಮತ್ತು ಕ್ರಾಫರ್ಡ್ ಅವರಿಗೆ ಇದು ಎರಡನೇ ಮುಖಾಮುಖಿ. ಇದಕ್ಕೂ ಮೊದಲು 2023ರ ಮೇ ತಿಂಗಳಲ್ಲಿ ವರ್ನಮೊ ಐಟಿಎಫ್ ಎಂ25 ಟೂರ್ನಿಯ ಸೆಮಿಫೈನಲ್‌ನ ರೋಚಕ ಹಣಾಹಣಿಯಲ್ಲಿ ಕ್ರಾಫರ್ಡ್ 5-7, 7-6(2), 7-6(6)ರ ಮೂರು ಸೆಟ್‌ಗಳಿಂದ ಕ್ಲಾರ್ಕ್ ಅವರನ್ನು ಮಣಿಸಿದ್ದರು. ಹೀಗಾಗಿ, ಭಾನುವಾರದ ಪಂದ್ಯದಲ್ಲಿ ನಿಕಟ ಪೈಪೋಟಿ ನಿರೀಕ್ಷಿಸಲಾಗಿತ್ತು.

‘ಇದು ನಿರಾಶಾದಾಯಕ ಅಂತ್ಯ. ಆದರೆ, ಸ್ಪರ್ಧೆಯಿಂದ ಹಿಂದೆ ಸರಿಯುವ ಮೂಲಕ ಕ್ಲಾರ್ಕ್ ಅವರು ತಮ್ಮ ದೇಹಕ್ಕೆ ಆಗಬಹುದಾದ ಇನ್ನಷ್ಟು ಹಾನಿಯನ್ನು ತಪ್ಪಿಸಿ ಸರಿಯಾದ ನಿರ್ಧಾರ ತೆಗೆದುಕೊಂಡಿದ್ದಾರೆ. ಅವರು, ಈ ಋತುವಿನಲ್ಲಿ ಭಾರತದ ಪ್ರವಾಸವನ್ನು ಯಶಸ್ವಿಯಾಗಿ ಮುಗಿಸಿದ್ದಾರೆ’ ಎಂದು ಕ್ರಾಫರ್ಡ್ ಪ್ರತಿಕ್ರಿಯಿಸಿದರು.

‘ಸತತ ನಾಲ್ಕು ವಾರಗಳಲ್ಲಿ ಹಾರ್ಡ್ ಕೋರ್ಟ್‌ನಲ್ಲಿ 20 ಪಂದ್ಯಗಳನ್ನು ಆಡಿದ್ದೆ. ವಿಶೇಷವಾಗಿ ಸರ್ವ್ ಮಾಡುವಾಗ ತೀವ್ರವಾಗಿ ಕಾಲುನೋವು ಕಾಡಿತು. ಆಟ ಮುಂದುವರಿಸಿದರೆ ನೋವು ಇನ್ನಷ್ಟು ಜಾಸ್ತಿಯಾಗುವ ಅಪಾಯವಿತ್ತು’ ಎಂದು ರನ್ನರ್ ಅಪ್ ಕ್ಲಾರ್ಕ್ ಹೇಳಿದರು.



ಪ್ರಶಸ್ತಿಯೊಂದಿಗೆ ಒಲಿವರ್ ಕ್ರಾಫರ್ಡ್ ಪ್ರಜಾವಾಣಿ ಚಿತ್ರ

4ನೇ ಬಾರಿ ಫೈನಲ್‌ಗೆ ಬೆಂಗಳೂರು ಎಫ್‌ಸಿ

ಐಎಸ್‌ಎಲ್: ಸುನಿಲ್ ಚೆಟ್ರಿ ನಿರ್ಣಾಯಕ ಗೋಲು • ಗೋವಾ ತಂಡಕ್ಕೆ ನಿರಾಸೆ

ಮಡಗಾಂವ್ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದ ನಾಯಕ ಸುನಿಲ್ ಚೆಟ್ರಿ ಅವರು ಇಂಜುರಿ ಅವಧಿಯಲ್ಲಿ ಅಮೋಘವಾಗಿ ತಂದಿತ್ತ ನಿರ್ಣಾಯಕ ಗೋಲು ಆತಿಥೇಯ ಗೋವಾ ಎಫ್‌ಸಿ ತಂಡದ ಫೈನಲ್ ಕನಸನ್ನು ಭಗ್ನಗೊಳಿಸಿತು.

ಬಿಎಫ್‌ಸಿ ತಂಡವು ಭಾನುವಾರ ಇಂಡಿಯನ್ ಸೂಪರ್ ಲೀಗ್‌ನ ಸೆಮಿ ಫೈನಲ್ ಎರಡನೇ ಲೆಗ್‌ನಲ್ಲಿ 1-2ರಿಂದ ಸೋತರೂ, ಎರಡು ಪಂದ್ಯಗಳಲ್ಲಿ ಗಳಿಸಿದ ಗೋಲುಗಳ (3-2) ಲೆಕ್ಕಾ-ಚಾರದಲ್ಲಿ ಮೇಲುಗೈ ಸಾಧಿಸಿ ಫೈನಲ್‌ಗೆ ಅರ್ಹತೆ ಪಡೆಯಿತು.

2018-19ನೇ ಸಾಲಿನ ಚಾಂಪಿಯನ್ ಬೆಂಗಳೂರು ತಂಡವು ಈ ಮೂಲಕ ನಾಲ್ಕನೇ ಬಾರಿ ಪ್ರಶಸ್ತಿ ಸುತ್ತು ಪ್ರವೇಶಿಸಿದಂತಾಗಿದೆ. 2017-18 ಮತ್ತು 2022-23ರಲ್ಲಿ ಬಿಎಫ್‌ಸಿ ತಂಡವು ರನ್ನರ್ಸ್ ಅಪ್ ಆಗಿತ್ತು. ಇದೀಗ ಮತ್ತೆ ಚಾಂಪಿಯನ್ ಪಟ್ಟಕ್ಕೇರುವ ಹೊಸ್ತಿಲಲ್ಲಿದೆ. ಇದೇ 12ರಂದು ನಡೆಯುವ ಫೈನಲ್‌ನಲ್ಲಿ ಜೆಮ್ಷೆಡ್‌ಪುರ ಅಥವಾ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಇಲ್ಲಿನ ಫತೋರ್ಡಾದ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಿರಾಮದ ವೇಳೆಗೆ ಯಾವುದೇ ತಂಡಗಳಿಗೆ ಗೋಲು ಲಭಿಸಲಿಲ್ಲ. ಆದರೆ, 49ನೇ ನಿಮಿಷದಲ್ಲಿ ಬೋರ್ಜಾ ಹೆರೆರಾ ಅವರು ಗೋಲು ದಾಖಲಿಸಿ ಆತಿಥೇಯ ತಂಡಕ್ಕೆ ಮುನ್ನಡೆ ಒದಗಿಸಿದರು. 88ನೇ ನಿಮಿಷದಲ್ಲಿ ಅರ್ಮಾಂಡೊ ಸಾದಿಕ್ ಚೆಂಡನ್ನು ಗುರಿ ಸೇರಿಸಿದ್ದರಿಂದ ಗೋವಾ ತಂಡವು 2-0 ಮುನ್ನಡೆ ಪಡೆದು ಸಂಭ್ರಮಿಸಿತು.

55ನೇ ನಿಮಿಷದಲ್ಲಿ ಬೆಂಚ್‌ನಿಂದ ಹೊರಬಂದ ಚೆಟ್ರಿ ಅವರು ಪ್ರಯತ್ನಿಸಿದ 12 ಪಾಸ್‌ಗಳಲ್ಲಿ 10 ಅನ್ನು ಪೂರ್ಣಗೊಳಿಸಿದರು. ಅಲ್ಲದೆ, 90+2ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ ತಂಡವನ್ನು ಫೈನಲ್‌ಗೆ ಮುನ್ನಡೆಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದಿದ್ದ ಸೆಮಿಫೈನಲ್‌ನ ಮೊದಲ ಲೆಗ್‌ನ ಪಂದ್ಯದಲ್ಲಿ ಜೆರಾರ್ಡ್ ಝರ್ಗೋಝಾ ಮಾರ್ಗದರ್ಶನದ ಬೆಂಗಳೂರು ತಂಡವು 2-0 ಗೋಲುಗಳಿಂದ ಗೋವಾ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತ್ತು.

ಗೋಲು ದಾಖಲಿಸಿದ ಬಿಎಫ್‌ಸಿ ತಂಡದ ನಾಯಕ ಸುನಿಲ್ ಚೆಟ್ರಿ (ಬಲದಿಂದ ಮೊದಲನೆಯವರು) ಅವರನ್ನು ಸಹ ಆಟಗಾರರು ಅಭಿನಂದಿಸಿದರು

ಜೆಮ್ಷೆಡ್‌ಪುರಕ್ಕೆ ಬಾಗನ್ ಸವಾಲು

ಕೋಲ್ಕತ್ತ (ಪಿಟಿಐ): ಆತಿಥೇಯ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವು ಇಂಡಿಯನ್ ಸೂಪರ್ ಲೀಗ್‌ನ ಸೆಮಿಫೈನಲ್‌ನ ಎರಡನೇ ಲೆಗ್‌ನ ಪಂದ್ಯದಲ್ಲಿ ಸೋಮವಾರ ಜೆಮ್ಷೆಡ್‌ಪುರ ತಂಡವನ್ನು ಎದುರಿಸಲಿದೆ.

ಜೆಮ್ಷೆಡ್‌ಪುರದಲ್ಲಿ ಗುರುವಾರ ನಡೆದಿದ್ದ ಮೊದಲ ಲೆಗ್‌ನ ಪಂದ್ಯದಲ್ಲಿ ಆತಿಥೇಯ ತಂಡವು 2-1 ಗೋಲುಗಳಿಂದ ಜಯ ಸಾಧಿಸಿತ್ತು. ಇದೀಗ ಮೋಹನ್ ಬಾಗನ್ ತಂಡವು ಹಿಂದಿನ ಪಂದ್ಯದ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಜೊತೆಗೆ ಸತತ ಮೂರನೇ ಬಾರಿ ಫೈನಲ್ ಪ್ರವೇಶಿಸುವ ಛಲದಲ್ಲಿದೆ.

ಕರ್ನಾಟಕ ಗ್ರಾಮೀಣ ಬ್ಯಾಸ್ಕೆಟ್‌ಬಾಲ್ ಲೀಗ್

ಮಂಗಳೂರು ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡ ಕರ್ನಾಟಕ ಗ್ರಾಮೀಣ ಬ್ಯಾಸ್ಕೆಟ್‌ಬಾಲ್ ಲೀಗ್ ಫೈನಲ್‌ನಲ್ಲಿ ಭಾನುವಾರ 90-58ರಿಂದ ವಿ.ಬಿ.ಸಿ ಮಂಡ್ಯ ತಂಡವನ್ನು ಮಣಿಸಿ ಚಾಂಪಿಯನ್‌ಷಿಪ್ ಗೆದ್ದುಕೊಂಡಿದೆ.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಅಂತಿಮ ಹಣಾಹಣಿಯಲ್ಲಿ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡದ ಪ್ರಸ್ತಿಕ್ (31 ಅಂಕ), ಶಶಾಂಕ್ ರೈ (19 ಅಂಕ) ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಂಡ್ಯ ತಂಡದ ಶಶಾಂಕ್ ಗೌಡ (20 ಅಂಕ) ಹೋರಾಟ ಫಲ ನೀಡಲಿಲ್ಲ.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಕಲಬುರಗಿ ಕುವೆಂಪು ಬ್ಯಾಸ್ಕೆಟ್‌ಬಾಲ್ ಕ್ಲಬ್ 98-97ರಿಂದ ಧಾರವಾಡದ ಮಲ್ಲಸಜ್ಜನ ಬ್ಯಾಸ್ಕೆಟ್ ಬಾಲ್ ಕ್ಲಬ್ ವಿರುದ್ಧ ಒಂದು ಅಂಕದಿಂದ ರೋಚಕ ಗೆಲುವು ಸಾಧಿಸಿತು.

ಕಲಬುರಗಿ ತಂಡದ ಸುರೇಶ್ (32 ಅಂಕ) ಮತ್ತು ಸಿರಾಜುದ್ದಿನ್ (32 ಅಂಕ) ಅಮೋಘ ಪ್ರದರ್ಶನ ನೀಡಿದರು. ಧಾರವಾಡ ತಂಡದ ಮಂಜುನಾಥ್ (52 ಅಂಕ) ಮತ್ತು ಕಾರ್ತಿಕ್ (29 ಅಂಕ) ನೀಡಿದ ಹೋರಾಟ ವ್ಯರ್ಥವಾಯಿತು.

ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡದ ಪ್ರಸ್ತಿಕ್ ಟೂರ್ನಿ ಆಟಗಾರ ಪ್ರಶಸ್ತಿಗೆ ಭಾಜನರಾದರು.

ಚಾಂಪಿಯನ್ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡಕ್ಕೆ ₹ 75ಸಾವಿರ, ರನ್ನರ್ ಅಪ್ ವಿ.ಬಿ.ಸಿ ಮಂಡ್ಯ ತಂಡಕ್ಕೆ ₹ 50 ಸಾವಿರ, ಮೂರನೇ ಸ್ಥಾನ ಪಡೆದ ಕಲಬುರಗಿ ತಂಡಕ್ಕೆ ₹ 25 ಸಾವಿರ ಮತ್ತು ನಾಲ್ಕನೇ ಸ್ಥಾನ ಪಡೆದ ಧಾರವಾಡ ತಂಡಕ್ಕೆ ₹ 15 ಸಾವಿರ ನೀಡಲಾಯಿತು. ಒಟ್ಟು ₹ 1,70,000 ಬಹುಮಾನ ವಿತರಿಸಲಾಯಿತು.

ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಶ್ರಯದಲ್ಲಿ ನಡೆದ ಕರ್ನಾಟಕ ಗ್ರಾಮೀಣ ಬ್ಯಾಸ್ಕೆಟ್‌ಬಾಲ್ ಲೀಗ್‌ನಲ್ಲಿ ಪ್ರಶಸ್ತಿ ಗೆದ್ದ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡಕ್ಕೆ ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಅಧ್ಯಕ್ಷ ಕೆ.ಗೋವಿಂದ್‌ರಾಜು ಮತ್ತು ಬೆಂಗಳೂರು ನಗರದ ಪೊಲೀಸ್ ಕಮಿಷನರ್ ಬಿ.ದಯಾನಂದ್ ಟ್ರೋಫಿ ವಿತರಿಸಿದರು. ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡ (ಎಡದಿಂದ) ಕುಳಿತವರು; ಆರ್ಷ್, ಪ್ರದಿಲ್ ರೈ, ಮೃಣಲ್, ಅರ್ಜುನ್ ಶೆಟ್ಟಿ, ಪ್ರಸ್ತಿಕ್ ಕುಮಾರ್, ಸಾಗರ್. ನಿಂತವರು; ದಿವೀತ್ ಶೆನೆವಾ, ಸೌಕಿನ್ ಶೆಟ್ಟಿ, ಶಾಯಿನ್ ಎಸ್., ಆದಿತ್ಯ ಮಹಾಲೆ (ಕೋಚ್), ನವೀನ್ ಶೆಟ್ಟಿ (ಅಧ್ಯಕ್ಷ), ಶಶಾಂಕ್ ರೈ, ಕಿರಣ್ ಮತ್ತು ದೀಕ್ಷಿತ್ ಅಮಿನ್. ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಶೂಟಿಂಗ್: ಇಶಾ ಸಿಂಗ್‌ಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಯುವ ಶೂಟರ್ ಇಶಾ ಸಿಂಗ್ ಅವರು ಅರ್ಜೆಂಟೀನಾದ ಬ್ಯೂನೊ ಏರ್ಸ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಬೆಳ್ಳಿ ಪದಕ ಗೆದ್ದರು.

ಈ ವಿಶ್ವಕಪ್‌ನಲ್ಲಿ ಭಾರತಕ್ಕೆ ಇದು ಮೂರನೇ ಪದಕ. ಇದಕ್ಕೂ ಮೊದಲು ಮಹಿಳೆಯರ 50 ಮೀಟರ್ ರೈಫಲ್ 3 ಪೊಸಿಷನ್ಸ್‌ನಲ್ಲಿ ಸಿಫ್ಟ್ ಕೌರ್ ಸಮ್ರಾ ಚಿನ್ನದ ಸಾಧನೆ ಮಾಡಿದರೆ, ಪುರುಷರ ರೈಫಲ್ 3 ಪೊಷಿಷನ್ಸ್ ಸ್ಪರ್ಧೆಯಲ್ಲಿ ಚೈನ್ ಸಿಂಗ್ ಕಂಚಿನ ಪದಕ ಗೆದ್ದಿದ್ದರು.

ಏರ್ ಪಿಸ್ತೂಲ್ ಮಿಶ್ರ ಟೀಂ ವಿಶ್ವ ಚಾಂಪಿಯನ್ ಇಶಾ ಶನಿವಾರ ನಡೆದ ಮಹಿಳೆಯರ 25 ಮೀಟರ್ ಪಿಸ್ತೂಲ್ ಫೈನಲ್‌ನಲ್ಲಿ 35 ಅಂಕಗಳನ್ನು ಗಳಿಸಿ ಎರಡನೇ ಸ್ಥಾನ ಪಡೆದರು. ಚೀನಾದ ಶೂಟರ್‌ಗಳಾದ ಸನ್ ಯುಜಿ (38) ಮತ್ತು ಫೆಂಗ್ ಸಿಕ್ಸುವಾನ್ (30) ಕಂಚಿನ ಪದಕ ಗೆದ್ದರು.

ಪದಕದ ನಿರೀಕ್ಷೆ ಮೂಡಿಸಿದ್ದ ಡಬಲ್ ಒಲಿಂಪಿಕ್ ಪದಕ ವಿಜೇತೆ ಮನು ಭಾಕರ್ ನಿರಾಸೆ ಮೂಡಿಸಿದರು. ಅವರು ಫೈನಲ್‌ನಲ್ಲಿ ಆರನೇ ಸ್ಥಾನ ಪಡೆದರು. ಅರ್ಹತಾ ಸುತ್ತಿನಲ್ಲಿ ಮನು ಮೂರನೇ ಸ್ಥಾನ ಪಡೆದಿದ್ದರು.

ಕಲಿಯಂಡ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕಲಿಯಂಡ ಮತ್ತು ಕರವಂಡ ತಂಡಗಳು ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ನಡೆಯುತ್ತಿರುವ ‘ಮುದ್ದಂಡ ಕಪ್’ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಭಾನುವಾರದ ಪಂದ್ಯಗಳಲ್ಲಿ ಭರ್ಜರಿ ಗೆಲುವು ದಾಖಲಿಸಿದವು.

ಕಲಿಯಂಡ ತಂಡವು 7-0ರಿಂದ ಉದ್ದಿನಾಡಂಡ ತಂಡವನ್ನು ಮಣಿಸಿತು. ಕರವಂಡ ತಂಡವು 6-0ರಿಂದ ಕಳ್ಳಿರ ತಂಡವನ್ನು ಸೋಲಿಸಿತು.

ಅಪ್ಪನೆರವಂಡ 4-3ಯಿಂದ ಮೊಳ್ಳೇರ ವಿರುದ್ಧ, ತಂಬುಕುತ್ತೀರ 1-0ಯಿಂದ ಕಳ್ಳಂಗಡ ವಿರುದ್ಧ, ಮಲ್ಲಂಗಡ 3-0ಯಿಂದ ಸಿದ್ದಂಡ ವಿರುದ್ಧ, ಕೈಪಟ್ಟಿರ 3-0ಯಿಂದ ಬೈರಾಜಂಡ ವಿರುದ್ಧ, ಮೇವಡ 1-0ಯಿಂದ ಅರಮಣಮಾಡ ವಿರುದ್ಧ, ಕೇಲೇಟಿರ 3-2ರಿಂದ ಚೆಯ್ಯಂಡ ವಿರುದ್ಧ, ಆದೇಂಗಡ 4-0ಯಿಂದ ಪುಗ್ಗೇರ ವಿರುದ್ಧ, ನಾಪಂಡ 3-2ರಿಂದ ಪುಚ್ಚಿಮಾಡ ವಿರುದ್ಧ, ಕೊಟೇರ 1-0ಯಿಂದ ಕಾಳೆಂಗಡ ವಿರುದ್ಧ, ಕುಪ್ಪಂಡ (ನಾಂಗಾಲ) 1-0ಯಿಂದ ಕಂಗಂಡ ವಿರುದ್ಧ ಗೆಲುವು ಸಾಧಿಸಿದವು.

ಶಾಂತೆಯಂಡ 5-1ರಿಂದ ಚೆಟ್ಟಿಯಾರಂಡ ವಿರುದ್ಧ, ಮರ್ಚಂಡ 1-0ಯಿಂದ ಅಚ್ಚಪಂಡ ವಿರುದ್ಧ, ಕರಿನೆರವಂಡ 3-0 ಯಿಂದ ಕನ್ನಿಕಂಡ ವಿರುದ್ಧ, ಬಯವಂಡ 2-1ರಿಂದ ಕೊಣಿಯಂಡ ವಿರುದ್ಧ, ಮುಕ್ಕಾಟಿರ (ಹರಿಹರ) 1-0ಯಿಂದ ಮುಕ್ಕಾಟಿರ (ದೊಡ್ಡಪುಲಿಕೋಟು) ವಿರುದ್ಧ, ಕಳ್ಳಿಚಂಡ 2-0ಯಿಂದ ಮಣವಟ್ಟಿರ ವಿರುದ್ಧ ಗೆಲುವು ಸಾಧಿಸಿದವು.

ಟೈಬ್ರೇಕರ್ ಹಣಾಹಣಿಯಲ್ಲಿ ಕುಮ್ಮಂಡ 4-2ರಿಂದ ಪಾಂಡಂಡ ವಿರುದ್ಧ ಹಾಗೂ ಚೀರಂಡ ತಂಡ 4-3ರಿಂದ ಮೊಣ್ಣಂಡ ವಿರುದ್ಧ ಗೆಲುವು ಸಾಧಿಸಿದವು.